

# ವೇದಗಳು

## ಮನುಷ್ಯನಿಗೆ ಅಗತ್ಯವಾ?


ಗ್ರಂಥಕರ್ತ : **ತ್ರಿಮತ ಏಕೈಕ ಗುರುವು**

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**


**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**


---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**

---





ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 40 ಪ್ರಥಮ ಮುದ್ರಣ : ಏಪ್ರಿಲ್–2018

ಪ್ರತಿಗಳು : 1000 **ಬೆಲೆ. /–**

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ – ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ದ್ಯಾನ – ಪ್ರಾರ್ಥನೆ – ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಸಿದ್ಧಿ ಬೋಧನೆ.
100. ಸತ್ಯಾರ್ಥ ಪ್ರಕಾಶಣೆಯಲ್ಲಿ ಸತ್ಯವೆಷ್ಟು.
101. ಸೊನ್ನೆ.

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ–
ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ
ಮರಣಂ

## ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು– ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು– ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ ಮಹೇಂದ್ರಜಾಲ, ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು– ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು– ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಬ್ರಹ್ಮವಿದ್ಯ.
132. ಶಕ್ತಿ
133. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.
134. ಪೌರ್ಣಮಿ–ಅಮಾವಾಸ್ಯ.
135. ಈಶ್ವರ–ಪರಮೇಶ್ವರ.
136. ಪುರುಷೋತ್ತಮ–ಶ್ರೀರಾಮ.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : ಲಕ್ಷ್ಮಿನಾರಾಯಣಾಚಾರಿ–09440556968. ವೆಂಕಟೇಶ್–08096816963.

## (ಇಂದೂ ಜ್ಞಾನ ವೇದಿಕೆ ಸದಸ್ಯರು)

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :9632418716

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ,ತೊಣಚಿಕೊಪ್ಪಲ್,ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ತೊಬರಹಳ್ಳಿ, ವೈಟ್‌ಫೀಲ್ಡ್,
ಬೆಂಗಳೂರು (ಉತ್ತರ), ಕರ್ನಾಟಕ.
ಸೆಲ್:9845656774, 9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ವೇದಗಳು ಮನುಷ್ಯನಿಗೆ ಅಗತ್ಯವಾ?

ಭೂಮಿ ಮೇಲೆ ಹನ್ನೆರಡು (12) ಮತಗಳು ಇವೆ. ಅದರಲ್ಲಿ ಕೆಲವು ಎರಡು, ಮೂರು ದೇಶಗಳಿಗೇ ಪರಿಮಿತಿಯಾದಾಗ, ಕೆಲವು ಪ್ರಪಂಚ ವ್ಯಾಪ್ತವಾಗಿವೆ. ಅದರಲ್ಲಿ ಮೂರು ಮತಗಳು ಮಾತ್ರವೇ ದೊಡ್ಡವು. ಹನ್ನೆರಡರಲ್ಲಿ ಹನ್ನೊಂದು ಮಾತ್ರ ಕಲಿಯುಗದಲ್ಲಿ ಹುಟ್ಟಿಬಂದಿವೆ. ಮೊದಲನೆಯದಾದ 'ಹಿಂದೂ ಮತ' ಎನ್ನುವುದು ಕೂಡಾ ಕಲಿಯುಗದಲ್ಲಿಯೇ ಆ ಹೆಸರನ್ನು ತಂದುಕೊಂಡಿದೆ. ಮೊದಲು **'ಇಂದೂ'** ಎನ್ನುವ ಸಮಾಜವಾಗಿದ್ದ ಭಾರತದೇಶ ಪ್ರಜೆಗಳು ಕಲಿಯುಗದಲ್ಲಿ ಕ್ರೈಸ್ಥವ ಮತ ಹುಟ್ಟಿದ ನಂತರ **'ಇಂದೂ ಸಮಾಜ', 'ಇಂದೂ ಮತ'** ಎಂಬ ಹೆಸರನ್ನು ಇಟ್ಟುಕೊಳ್ಳುವುದು ನಡೆದಿದೆ. ಹಾಗೆ ಸುಮಾರು ಎರಡು ಸಾವಿರ ವರ್ಷಗಳ ಕೆಳಗೆ ಹಿಂದೂ ಮತವಾಗಿ ಮಾರ್ಪಟ್ಟ ಇಂದೂ ಸಮಾಜ, ಇಂದೂ ಮತವಾಗಿ 150 ವರ್ಷಗಳ ಕೆಳಗಿನವರೆಗು ಕರೆಯಲ್ಪಡುತ್ತಿತ್ತು. 150 ವರ್ಷಗಳಿಂದ ಇಂದೂಮತ ಸ್ವಲ್ಪ ಬದಲಾವಣೆಹೊಂದಿ ಅಕ್ಷರ ಬರೆಯುವುದ ರಲ್ಲಿ ಸ್ವರ ಹೋಗಿ ವ್ಯಂಜನ ಬಂದು ಸೇರಿದೆ. ಅದರಿಂದ **ಇಂದೂ ಶಬ್ದ** ಹೋಗಿ **ಹಿಂದೂ ಶಬ್ದ** ವಾಗಿ ಬದಲಾಗಿಹೋಗಿದೆ. ಅಂದಿನಿಂದ ಚರಿತ್ರೆ ತಿಳಿಯದವರೆಲ್ಲರೂ ಹಿಂದೂ ಪದವನ್ನೇ ಬಳಸುತ್ತಾ, ತಮ್ಮದು ಹಿಂದೂ ಮತ ಎಂದು ಹೇಳಿಕೊಳ್ಳುತ್ತಿದ್ದಾರೆ.

ಆಧ್ಯಾತ್ಮಿಕ ವಿದ್ಯೆಯನ್ನು ಅನುಸರಿಸಿ ಮತ್ತು ಜ್ಯೋತಿಷ್ಯವನ್ನು ಅನುಸರಿಸಿ ಪೂರ್ವದಲ್ಲಿ ಜ್ಞಾನವನ್ನು **ಇಂದೂ** ಎಂದು ಕರೆಯುತ್ತಿದ್ದರು. ಮನುಷ್ಯರಿಗೆ ಜ್ಞಾನವನ್ನು ಕೊಡುವವನು ಚಂದ್ರನು, ಆಗಿರುವುದರಿಂದ ಚಂದ್ರನ ಹೆಸರನ್ನು ಜ್ಞಾನಕ್ಕೆ ಹೇಳುತ್ತಾ, ಜ್ಞಾನಿಗಳಾದವರನ್ನು ಇಂದೂಗಳು ಎನ್ನುತ್ತಿದ್ದರು. ಸೃಷ್ಠಿ ಆದಿಯಲ್ಲಿ ಆಕಾಶದ ಮೂಲಕ ಜ್ಞಾನ ಹೇಳಲ್ಪಟ್ಟಿದೆ. ಆಕಾಶ ಶೂನ್ಯವಾಗಿದ್ದರೂ ಆಗಾಗ ಅಲ್ಲಲ್ಲಿ ಮೇಘ ರೂಪವಾಗಿ ಕಾಣಿಸುತ್ತಿತ್ತು. ನಮಗೆ ಕಾಣಿಸುವ ಮೇಘಗಳು ಆಕಾಶವೊಂದರ ರೂಪಗಳೇ ಎಂದು ತಿಳಿಯಬೇಕು. ಮೇಘಗಳು ಸೃಷ್ಠಿ ಆದಿಯಲ್ಲಿ ಗುಡುಗುತ್ತಾ ತಮ್ಮ ಶಬ್ಧದ ಮುಖಾಂತರ ಜ್ಞಾನವನ್ನು ತಿಳಿಸಿದಾಗ, ಆ ಶಬ್ಧದಲ್ಲಿನ

ಜ್ಞಾನವನ್ನು ಆಕಾಶದಲ್ಲಿನ ಸೂರ್ಯನು ಗ್ರಹಿಸಿದ್ದಾನೆ. ಸೂರ್ಯನು ಗ್ರಹಿಸಿದ ಜ್ಞಾನವನ್ನು ಸ್ವಲ್ಪ ಕಾಲ ಕಳೆದ ನಂತರ ಭಾರತದೇಶದಲ್ಲಿ ದಕ್ಷಿಣ ಭಾಗದಲ್ಲಿರುವ 'ಮನುವು' ಎಂಬ ವ್ಯಕ್ತಿಗೆ ದೇವರ ಜ್ಞಾನವನ್ನು ತಿಳಿಸಿದ್ದಾನೆ. ಮನುವು ಎಂಬ ವ್ಯಕ್ತಿಯ ಮುಖಾಂತರ ಇತರರಿಗೆ ಜ್ಞಾನ ತಿಳಿಸಲ್ಪಟ್ಟು, ಕೊನೆಗೆ ಅದು ಭಾರತದೇಶ ವೆಲ್ಲಾ ವ್ಯಾಪಿಸಿಹೋಗಿದೆ. ದೈವಜ್ಞಾನವನ್ನು ಕೃತಯುಗದಲ್ಲಿ ಮನುಷ್ಯರೆಲ್ಲರೂ ತಿಳಿಯುವುದರಿಂದ ಭಾರತದೇಶದ ಪ್ರಜೆಗಳೆಲ್ಲರನ್ನು ಉಳಿದ ದೇಶದ ಪ್ರಜೆಗಳು **ಇಂದೂಗಳು (ಜ್ಞಾನಿಗಳು)** ಎಂದು ಕರೆಯುತ್ತಿದ್ದರು. ಆ ಕಾಲದಲ್ಲಿ ಉಳಿದ ದೇಶಗಳಿಗಿಂತ ಭಾರತದೇಶ ಒಂದೇ ಸಂಪೂರ್ಣ ಜ್ಞಾನವನ್ನು ತಿಳಿದಿರುವು ದರಿಂದ, ಉಳಿದ ಎಲ್ಲ ದೇಶದ ಪ್ರಜೆಗಳು ಭಾರತದೇಶದವರನ್ನು ಇಂದೂಗಳು ಎಂದು ಕರೆಯುತ್ತಿದ್ದರು. ಹಾಗೇ ಭಾರತದೇಶವನ್ನು **ಇಂದೂ ದೇಶ (ಜ್ಞಾನಿಗಳ ದೇಶ)** ಎಂದು ಕರೆಯುತ್ತಿದ್ದರು. ಪೂರ್ವಕಾಲದಲ್ಲಿ ಕೃತಯುಗದಿಂದ ಇದ್ದ **ಇಂದೂ** ಎಂಬ ಪದವು 200 ವರ್ಷಗಳಿಂದ ಬದಲಾಗುತ್ತಾ ಬಂದು 150 ವರ್ಷಗಳಿಗೆ ಪೂರ್ತಿ **ಹಿಂದೂ** ಪದವಾಗಿ ಬದಲಾಗಿಹೋಗಿದೆ.

ಸುಮಾರು 1500 ವರ್ಷಗಳ ಕೆಳಗೆ ಕೃಷ್ಣದೇವರಾಯರ ಕಾಲದಲ್ಲಿ ದೇವಾಲಯಗಳನ್ನು ನಿರ್ಮಿಸಿದಾಗ **"ತಾಟಿಪತ್ರಿ"** ಎನ್ನುವ ಹೆಸರಿರುವ ಊರು ನನಗೆ ತಿಳಿದು 50 ವರ್ಷಗಳಿಂದ **"ತಾಡಿಪತ್ರಿ"ಯಾಗಿ** ಬದಲಾಗಿಹೋಗಿದೆ. ನನಗೆ ಈಗ 69 ವರ್ಷಗಳು. ನಾನು 50 ವರ್ಷಗಳ ಕೆಳಗೆ ತಾಟಿಪತ್ರಿಯಾಗಿದ್ದ ರೈಲ್ವೇಸ್ಟೇಷನ್ ಬೋರ್ಡನ್ನು ನೋಡಿದ್ದೇನೆ. ನಂತರ ತಾಡಿಪತ್ರಿಯಾಗಿ ಬದಲಾಗಿ ಹೋಗಿರುವುದು ಕೂಡಾ ನೋಡಿದ್ದೇನೆ. ಹಾಗೇ ಒಂದುಕಾಲದಲ್ಲಿ ಕೃತಯುಗ ದಿಂದ ಬಂದಿರುವ **ಇಂದೂ** ಎಂಬ ಹೆಸರು ಕಲಿಯುಗದಲ್ಲಿ 150 ವರ್ಷಗಳ ಸಮಯದಲ್ಲಿ **ಹಿಂದೂ** ವಾಗಿ ಬದಲಾಗಿಹೋಗಿದೆ. ಈ ಮಧ್ಯಕಾಲದಲ್ಲಿ ಹುಟ್ಟಿದವರೆಲ್ಲರೂ ನಾವು ಹಿಂದೂಗಳೇ ಎಂದು, ನಮ್ಮದು ಹಿಂದೂಮತ ಎಂದು ಪೂರ್ತಿ ನಂಬಿದ್ದಾರೆ. ಗತ ಚರಿತ್ರೆಯನ್ನು ಸ್ವಲ್ಪವಾದರೂ ತಿಳಿಯದವರಿಗೆ ನಮ್ಮ ದೇಶ ಇಂದೂ ದೇಶ, ನಮಗೆ ಇಂದೂಗಳು ಎಂಬ ಹೆಸರಿತ್ತು ಎಂದು

ಹೇಳಿದರೂ ಅವರು ನಂಬುವ ಸ್ಥಿತಿಯಲ್ಲಿಲ್ಲ. ಈ ದಿನ ಮತಗಳ ಮತ್ತಿನಲ್ಲಿ ಮುಳುಗಿರುವವರಲ್ಲಿ ಹಿಂದೂ ಎಂಬ ಶಬ್ದ ಅಡಗಿದೆ. ನಮ್ಮಂತವರು ನಾವು ಇಂದೂಗಳು ಎಂದು ಹೇಳಿದರೆ ಹೊಸ ಮತವನ್ನು ಸೃಷ್ಠಿಸುತ್ತಿದ್ದೀಯಾ ಎನ್ನುತ್ತಿದ್ದಾರೆ. ಆ ದಿನ ಕೃತಯುಗದಿಂದ **ಜ್ಞಾನದ ಆಧಾರದಿಂದ ಇಂದೂಗಳು** ಎಂದು ಕರೆಯಲ್ಪಡುತ್ತಿರುವಾಗ, ಈ ದಿನ **ಮತ ಆಧಾರದಿಂದ ಹಿಂದೂಗಳು** ಎಂದು ಕರೆಯಲ್ಪಡುತ್ತಿದ್ದಾರೆ. ಇತ್ತ ಬೋಧಕರಿಗಾಗಲಿ, ಅತ್ತ ಬೋಧನೆಗಳು ಕೇಳುವವರಿಗಾಗಲಿ **'ಇಂದೂ'** ಎಂಬ ಪದವೊಂದರ ಅರ್ಥವೇ ತಿಳಿಯದಂತೆ ಹೋಗಿದೆ. ಅದರಿಂದ ಮನುಷ್ಯರಲ್ಲಿ ಜ್ಞಾನ ಹೋಗಿ ಅಜ್ಞಾನದಿಂದ ಕೂಡಿಕೊಂಡ ಮತ ಉಳಿದಿದೆ. ಈ ದಿನ ಹಿಂದೂ ಮತದಲ್ಲಿ ಜ್ಞಾನವಿದ್ದಂತೆ ಮನುಷ್ಯರು ಅಂದುಕೊಳ್ಳುತ್ತಿದ್ದರೂ, ಅದು ಜ್ಞಾನ ಅಲ್ಲವೆಂದು ಅವರಿಗೆ ತಿಳಿದಿಲ್ಲ. ಈಗಿನ ಕಾಲದಲ್ಲಿ ಹಿಂದೂಗಳು ಯಜ್ಞಗಳು ಮಾಡುವುದು, ವೇದಾಧ್ಯಯನ ಮಾಡುವುದು, ಧ್ಯಾನಗಳು (ತಪಸ್ಸು) ಮಾಡುವುದು, ದಾನಗಳು ಮಾಡುವುದು ದೈವಕಾರ್ಯ ಗಳಾಗಿ ಇಟ್ಟುಕೊಂಡಿದ್ದಾರೆ. ಕೃತಯುಗದಲ್ಲಿ ಮೊದಲು ದೇವರು ಹೇಳಿದ ಜ್ಞಾನಕ್ಕೆ ಬಹಳ ದೂರವಾಗಿದ್ದಾರೆ. ಈ ದಿನ ಬ್ರಾಹ್ಮಣರು, ಬ್ರಾಹ್ಮಣರಿಂದ ತಯಾರಾದ ಸ್ವಾಮೀಜಿಗಳು, ಪೀಠಗಳನ್ನು ಸ್ಥಾಪಿಸಿಕೊಂಡು ಪ್ರಜೆಗಳಿಗೆ ತಮ್ಮ ಬೋಧನೆಗಳನ್ನು ಹೇಳುತ್ತಿದ್ದಾರೆ. ಅದರಿಂದ ಅವರು ಹೇಳಿದಂತೆ ಉಳಿದ ಪ್ರಜೆಗಳು ಕೇಳುತ್ತಿದ್ದಾರೆ. ಎಲ್ಲದಕ್ಕೂ ವೇದಗಳೇ ಪ್ರಮಾಣಗಳೆಂದು ಹೇಳುತ್ತಾ, ನಾವೆಲ್ಲರೂ ಹಿಂದೂಗಳೇ ಎನ್ನುತ್ತಿದ್ದಾರೆ.

**1) ಪ್ರಶ್ನೆ :– ಈ ದಿನ ಹಿಂದೂಗಳೆಲ್ಲರಿಗೂ ಜ್ಞಾನಕ್ಕೆ ವೇದಗಳೇ ಪ್ರಮಾಣ ಎಂದು ಹೇಳುತ್ತಿರುವುದು ವಾಸ್ತವ. ವೇದಗಳೆಂದರೇ ಏನು? ಅವು ಯಾವಾಗ ಹುಟ್ಟಿ ಬಂದಿವೆ? ಎನ್ನುವ ವಿಷಯವನ್ನು ಸ್ವಲ್ಪ ವಿವರವಾಗಿ ಹೇಳಬೇಕೆಂದು ಕೋರುತ್ತಿದ್ದೇವೆ?**

**ಉತ್ತರ :–** ವೇದ ಎನ್ನುವ ಹೆಸರು ಮೊದಲು ಇಲ್ಲ. ಮೊಟ್ಟೆಯಿಂದ ಹುಳ

ಹುಟ್ಟಿ, ನಂತರ ಸ್ವಲ್ಪ ಕಾಲಕ್ಕೆ ಗಿಳಿಯಾಗಿ ಮಾರ್ಪಟ್ಟಂತೆ **ಯಾತನೆ** ಎಂಬ ಪದ ಮೊದಲು ಇರುವಾಗ, ಯಾತನೆ ಎಂಬ ಪದದಿಂದ **ವೇದನೆ** ಎಂಬ ಪದ ಹುಟ್ಟಿದೆ. ವೇದನೆ ಎಂಬ ಪದದಿಂದ **ವೇದ** ಎಂಬ ಪದ ಹುಟ್ಟಿದೆ. ಮೊಟ್ಟೆಯಿಂದ ಹುಳ, ಹುಳದಿಂದ ಗಿಳಿ ಹುಟ್ಟಿದಂತೆ, ಯಾತನೆಯಿಂದ ವೇದನೆ, ವೇದನೆಯಿಂದ ವೇದ ಹುಟ್ಟಿದೆ. ಮೊದಲು ಒಂದು ಪದ ಇರುವಾಗ ಆ ಪದ ಬದಲಾವಣೆಯಾಗುತ್ತಾ ಕೊನೆಗೆ ವೇದವಾಗಿದೆ. ಇದನ್ನನುಸರಿಸಿ ವೇದವು ನೇರವಾಗಿ ಒಂದೇಸಲ ಹುಟ್ಟಿರುವ ಪದವಲ್ಲ, ರೇಷ್ಮೆಹುಳ ಕೊನೆಗೆ ರೇಷ್ಮೆ ಗಿಳಿಯಾಗಿ ಬದಲಾದಂತೆ, ಯಾತನೆ **ವೇದವಾಗಿ** ಮಾರ್ಪಟ್ಟಿದೆ. ಯಾತನೆ ಎಂಬ ಪದಕ್ಕೆ ಅರ್ಥ **'ಬಾಧೆ ಅಥವಾ ಕಷ್ಟ'** ಎಂದು ಹೇಳಬಹುದು. ವೇದ ಎಂದರೂ ಅದೇ ಅರ್ಥವೆಂದು ತಿಳಿಯಬೇಕು. ವೇದದಿಂದ ಮನುಷ್ಯರು ಬಾಧೆಪಡಬೇಕಾಗಿದ್ದೇಯೆಂದು ತಿಳಿಯಬೇಕು.

## 2) ಪ್ರಶ್ನೆ :– ವೇದಗಳು ಎಂದರೇ ಗ್ರಂಥಗಳು ಅಲ್ಲವೇ! ಸಂಸ್ಕೃತ ಭಾಷೆಯಲ್ಲಿರುವ ಗ್ರಂಥಗಳು ಅಲ್ಲವೇ? ಅವು ಹೇಗೆ ಹುಟ್ಟಿವೆ?

**ಉತ್ತರ :–** ವೇದಗಳು ಎಂದರೇ ಯಾತನೆ ಅಥವಾ ವೇದನೆಯಿಂದ ಕೂಡಿಕೊಂಡಿವೆ ಎಂದು ಹೇಳುವ ಮಾತು ವಾಸ್ತವ. ವೇದಗಳು ಎಂಬ ಪದದಲ್ಲಿನ ಅರ್ಥ ನಾವು ಹೇಳಿರುವುದು ವಾಸ್ತವ. ಆದರೆ ವೇದಗಳು ಎರಡು ವಿಧಗಳಿವೆ. ವೇದಗಳು ಬಾಹ್ಯವಾಗಿ ಗ್ರಂಥ ರೂಪದಲ್ಲಿ, ಬರಹಗಳ ಕೂಡಿಲಿಯಾಗಿವೆ. ಹೊರಗೆ ಗ್ರಂಥ ರೂಪವಾಗಿರುವ ವೇದಗಳು ನಾಲ್ಕು ವಿಧಗಳು, ಅವು ಕ್ರಮವಾಗಿ **1) ಋಗ್ವೇದ 2) ಯಜುರ್ವೇದ 3) ಸ್ಸಾಮ ವೇದ 4) ಅಥರ್ವಣ ವೇದ**. ಈ ನಾಲ್ಕು ವೇದಗಳು ಗ್ರಂಥ ರೂಪವಾಗಿ ಇವೆ. ಇವುಗಳನ್ನು ಎಲ್ಲರೂ ಓದದಿದ್ದರೂ ಕೆಲವರು ಮಾತ್ರ ಓದಿದ್ದಾರೆ. ನಾಲ್ಕು ವೇದಗಳು ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ನಾಲ್ಕು ಕಾಣಿಸುವ ವೇದಗಳು ದ್ವಾಪರಯುಗದಲ್ಲಿ ವ್ಯಾಸನಿಂದ ಬರೆಯಲ್ಪಟ್ಟಿವೆ. ಗ್ರಂಥರೂಪವಾಗಿ ಬರೆದವನು

ವ್ಯಾಸನು. ಆದರೆ ನಾಲ್ಕು ವೇದಗಳನ್ನು ಸ್ವತಃವಾಗಿ ವ್ಯಾಸನು ರಚಿಸಲಿಲ್ಲ. ಮೊದಲೇ ಇತರರಿಂದ ಬರೆಯಲ್ಪಟ್ಟ ವ್ಯಾಸಗಳನ್ನು ವ್ಯಾಸನು ಗ್ರಂಥರೂಪ ಮಾಡಿದ್ದಾನೆ. ವೇದಗಳೆನ್ನುವವು ಅನೇಕಮಂದಿಯಿಂದ ಬರೆಯಲ್ಪಟ್ಟಿವೆಯೆಂದು ತಿಳಿಯಬೇಕು. ಕೃತಯುಗದ ಕೊನೆಯಿಂದ ದ್ವಾಪರಯುಗದ ಕೊನೆಯವರೆಗು ವಿದ್ಯಾವಂತರಾದವರು ಆಗೊಬ್ಬರು, ಆಗೊಬ್ಬರು ಬರೆದಿಟ್ಟಿರುವ ಸಮಾಚಾರಗಳನ್ನು ವ್ಯಾಸನು ಸಂಸ್ಕೃತದಲ್ಲಿ ಬರೆಯುವುದು ನಡೆದಿದೆ. ಕೃತಯುಗದ ಕೊನೆಯಿಂದ ಮೊದಲಾಗಿ, ತ್ರೈತಾಯುಗ, ದ್ವಾಪರಯುಗದ ಕೊನೆಯವರೆಗು ಅನೇಕ ಮಂದಿ ಸ್ವಲ್ಪ ಸ್ವಲ್ಪವಾಗಿ ಬರೆದಿರುವ ಸಮಾಚಾರಗಳೆಲ್ಲವನ್ನು ಶೇಕರಿಸಿ ವ್ಯಾಸನು ನಾಲ್ಕು ಗ್ರಂಥಗಳಾಗಿ ಬರೆಯುವುದು ನಡೆದಿದೆ. ಆ ನಾಲ್ಕು ಗ್ರಂಥಗಳೇ ನಾಲ್ಕು ಹೆಸರಿರುವ ವೇದಗಳಾಗಿ ಇವೆ. ಕೃತಯುಗದ ಕೊನೆಯಿಂದ ತ್ರೈತಾಯುಗ, ದ್ವಾಪರಯುಗದ ಕೊನೆಯವರೆಗು ಸುಮಾರು ಹತ್ತುಸಾವಿರ ಮಂದಿ ತಮಗೆ ತೋಚಿದ ವಿಷಯಗಳನ್ನು ಬರೆದಿಟ್ಟಿದ್ದಾರೆ. ಹಾಗೆ ಬರೆದ ವಿಷಯಗಳೇ ಈ ದಿನ ವೇದಗಳಾಗಿ ನಮ್ಮ ಮುಂದಿವೆ.

ಪ್ರಾಚೀನ ಕಾಲದಲ್ಲಿ ಭಾರತದೇಶ ಜನಸಂಖ್ಯೆ ಬಹಳ ಕಡಿಮೆ ಇತ್ತು. ಕೃತಯುಗದಲ್ಲಿ ಸುಮಾರು ಕೋಟಿಗೆ ಒಳಗೆ, ಕೆಲವು ಲಕ್ಷಗಳ ಮಂದಿಯೇ ಇರುತ್ತಿದ್ದರು. ತ್ರೈತಾಯುಗದಲ್ಲಿ ಸ್ವಲ್ಪ ಬೆಳೆದು ಸುಮಾರು ಕೋಟಿಗೆ ಮೇಲೆ ಜನಸಂಖ್ಯೆ ಇರಬಹುದು. ನಂತರ ದ್ವಾಪರಯುಗ ಕೊನೆಯವರೆಗು ನೋಡಿದರೆ ಸುಮಾರು ಮೂರು ಕೋಟಿ ಜನಸಂಖ್ಯೆ ಇರಬಹುದು. ಅಷ್ಟು ಕಡಿಮೆ ಜನಸಂಖ್ಯೆಯಲ್ಲಿ ಶೇಕಡ 99 ರಷ್ಟು ಪ್ರಜೆಗಳು ಕೆಲಸಗಳು ಮಾಡಿಕೊಂಡು ಬದುಕುವುದಕ್ಕೇ ಕಾಲ ಸರಿಹೋಗುತ್ತಿತ್ತು. ಆದರೆ ಒಂದು ಬ್ರಾಹ್ಮಣ ಕುಲದವರು ಮಾತ್ರ ಕೆಲಸಗಳು ಮಾಡದಂತೆ ಬದುಕುವುದಕ್ಕೆ ಅಭ್ಯಾಸವಾಗಿದ್ದಾರೆ. ಆದ್ದರಿಂದ ಬ್ರಾಹಣರು ಮಾತ್ರವೇ ವಿದ್ಯಾಭ್ಯಾಸ ಮಾಡುತ್ತಿದ್ದರು. ಅಂದಿನ ಕಾಲದಲ್ಲಿ ರಾಜರಾಗಿ ಇದ್ದವರು ಕೂಡಾ ಬ್ರಾಹ್ಮಣರ ಹತ್ತಿರ ವಿದ್ಯೆ ಕಲಿತವರೇ. ದೇಶವೆಲ್ಲಾ ನೂರು ಮಂದಿ ರಾಜರಿದ್ದರೆ ಅವರಿಗೆ ಮಾತ್ರ ವಿದ್ಯೆ ಹತ್ತಿದೆ. ರಾಜರ ಹತ್ತಿರ

ಗುರುಗಳಾಗಿ, ಮಂತ್ರಿಗಳಾಗಿ, ಪಂಡಿತರಾಗಿ, ಕವಿಗಳಾಗಿ ಇರುವವರೆಲ್ಲರೂ ಬ್ರಾಹ್ಮಣರೇಯೆಂದು ಹೇಳಬಹುದು. ಮೂರು ಯುಗಗಳಿಂದ ಬ್ರಾಹ್ಮಣರಾಗಿ ಇರುವವರೇ ವಿದ್ಯೆಯನ್ನು ಕಲಿತಿದ್ದಾರೆ. ಉಳಿದ ಕುಲಗಳೆಲ್ಲಾ ವಿದ್ಯೆ ಇಲ್ಲದವರಾಗಿ ಇರುತ್ತಿದ್ದರು. ಅದೇ ಪರಿಸ್ಥಿತಿ ಕಲಿಯುಗ ಮೊದಲಿನಲ್ಲಿ ಸುಮಾರು ಎರಡು ಸಾವಿರ ವರ್ಷಗಳವರೆಗು ಇತ್ತು. ನಂತರ ಅಲ್ಲೊಬ್ಬರು ಅಲ್ಲೊಬ್ಬರು ಉಳಿದ ಕುಲದವರು ವಿದ್ಯೆಯನ್ನು ಸ್ವಲ್ಪಮಟ್ಟಿಗೆ ಕಲಿತಿದ್ದರು. ಕಲಿಯುಗದಲ್ಲಿ ಎರಡು, ಮೂರು ಸಾವಿರ ವರ್ಷಗಳು ಕಳೆಯುವವರೆಗು ವಿದ್ಯೆ ಎಂದರೇ ಕೇವಲ ಅಕ್ಷರಾಭ್ಯಾಸದ ವರೆಗೇ ಇರುತ್ತಿತ್ತು. ನಂತರ ಸ್ವಲ್ಪಕಾಲ ವಿದ್ಯೆ ಎಂದರೇ ಬಾಂಡು ಬರೆಯುವುದು, ಪತ್ರಗಳು ಬರೆಯುವುದರ ವರೆಗೇ ಕಲಿಸುತ್ತಿದ್ದರು. ನಂತರ ಕೆಲವು ಪಟ್ಟಣಗಳಲ್ಲಿ ಮಾತ್ರ ಹೈಸ್ಕೂಲ್ ಓದುಗಳು ಕಾಲೇಜು ಓದುಗಳು ಬಂದಿವೆ. ಕಳೆದ 200 ವರ್ಷಗಳವರೆಗು ಭಾರತ ದೇಶದಲ್ಲಿ ಉನ್ನತ ವಿದ್ಯೆಗಳು ಇಲ್ಲ. ಉನ್ನತ ವಿದ್ಯೆ ಬೇಕೆಂದರೆ ವಿದೇಶಗಳಿಗೆ ಹೋಗಿ ಓದಬೇಕಾಗಿ ಬರುತ್ತಿತ್ತು. ಕಲಿಯುಗದಲ್ಲಿ ನೂರು (100) ವರ್ಷಗಳಿಂದ ವಿದ್ಯೆ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಈ ದಿನ ಶೇಕಡ 90ರಷ್ಟು ಎಲ್ಲರೂ ಉನ್ನತ ವಿದ್ಯೆಯನ್ನು ಅಭ್ಯಾಸಿಸಿದವರೇ ಇದ್ದಾರೆ.

ಕೃತ್‌ಯುಗ, ತ್ರೇತಾಯುಗ, ದ್ವಾಪರ ಯುಗಗಳಲ್ಲಿ ವಿದ್ಯಾವಂತರು ಎಂದರೇ ಬ್ರಾಹ್ಮಣರು ಹೊರತು ಇತರರು ಇರುವವರಲ್ಲ. ಅಂದಿನ ಕಾಲದಲ್ಲಿ ದೈವಜ್ಞಾನವನ್ನು ತಿಳಿದವರು ಯಾರು ಎಂದರೇ ಬ್ರಾಹ್ಮಣರೇಯೆಂದು ಹೇಳಬಹುದು. ಬ್ರಾಹ್ಮಣರೇ ಪಂಚಾಂಗವನ್ನು ಬರೆಯುತ್ತಿದ್ದರು, ಜ್ಯೋತಿಷ್ಯವನ್ನು ಹೇಳುತ್ತಿದ್ದರು. ಬ್ರಾಹ್ಮಣರು ಎಲ್ಲಾ ವಿಧಗಳೂ ತಿಳುವಳಿಕೆಯುಳ್ಳವರಾಗಿ ಇರುತ್ತಿದ್ದರು. ಆದ್ದರಿಂದ ವಿದ್ಯೆಯಿಲ್ಲದ ಉಳಿದ ಪ್ರಜೆಗಳೆಲ್ಲರೂ ಬ್ರಾಹ್ಮಣರ ಸುತ್ತಾ ತಿರುಗುತ್ತಾ, ಪ್ರತಿ ವಿಷಯದಲ್ಲಿಯೂ ಅವರ ಸಲಹೆ ತೆಗೆದುಕೊಳ್ಳುತ್ತಿದ್ದರು. ಪ್ರತಿ ಕೆಲಸಕ್ಕು ಮುಹೂರ್ತವನ್ನು ಬ್ರಾಹ್ಮಣರೇ ಹೇಳುತ್ತಿದ್ದರು. **ಬ್ರಹ್ಮ ಜ್ಞಾನ ತಿಳಿದವರು ಬ್ರಾಹ್ಮಣರು** ಎಂದು ಅರ್ಥ ಇರುವುದರಿಂದ ಆ ದಿನ ಅವರಿಗೆ

ತೋಚಿದ ಸಮಾಚಾರವನ್ನು ವ್ಯಾಸಗಳಾಗಿ ಬರೆದು, ಅವುಗಳಿಗೆ ಮಂತ್ರಗಳು, ಬ್ರಾಹ್ಮಣಗಳು, ಕೆಲವುಗಳಿಗೆ ಉಪನಿಷತ್‌ಗಳೆಂದು ಹೆಸರು ಇಟ್ಟಿದ್ದಾರೆ. ಬ್ರಾಹ್ಮಣರಲ್ಲಿ ಜ್ಞಾನಿಗಳು ಎಂದು ಹೆಸರು ಹೊಂದಿದವರು ತಮ್ಮ ವ್ಯಾಸಗಳನ್ನು ತಾಳೆ ಎಲೆಗಳ ಮೇಲೆ ಬರೆದಿಟ್ಟಿದ್ದಾರೆ. ಆ ದಿನ ಕಾಗದಗಳು ಇಲ್ಲವಾದ್ದರಿಂದ ತಾಳೆಎಲೆಗಳೇ ಪೇಪರ್‌ಗಳಾಗಿ ಬರೆಯಲ್ಪಡುತ್ತಿದ್ದವು.

ಮೂರು ಯುಗಗಳಿಂದ ಹತ್ತು ಸಾವಿರ ಜನರಿಂದ ಬರೆಯಲ್ಪಟ್ಟ ವಿಷಯಗಳನ್ನು ಕೆಲವು ಮಂತ್ರ ಭಾಗಗಳಾಗಿ, ಕೆಲವನ್ನು ಬ್ರಾಹ್ಮಣ ಭಾಗಗಳಾಗಿ, ಕೆಲವನ್ನು ಉಪನಿಷತ್‌ಗಳಾಗಿ ಹೇಳಿರುವಾಗ ಅವು ಎಲ್ಲವೂ ಚಿಕ್ಕ ಸಮಾಚಾರ ಗಳಾಗಿರುವುದರಿಂದ, ಬಿಡಿಬಿಡಿಯಾಗಿ ಬೇರೆ ಬೇರೆ ಪ್ರಾಂತಗಳಲ್ಲಿ ಇರುವುದರಿಂದ ಯಾವುವೂ ಗ್ರಂಥವಾಗಿ ಬರೆಯಲ್ಪಡಲಿಲ್ಲ. ದ್ವಾಪರ ಯುಗದಲ್ಲಿ ವ್ಯಾಸನು ಒಳ್ಳೆಯ ವಿದ್ಯಾವಂತನು ಆಗಿರುವುದರಿಂದ ಗ್ರಂಥಗಳು ಬರೆಯುವ ಸಾಮರ್ಥ್ಯ ವಿರುವ ವ್ಯಾಸನು ತಮ್ಮ ಕುಲಸ್ಥರಾದ ಬ್ರಾಹ್ಮಣರು ಬರೆದ ಬಿಡಿಬಿಡಿಯಾಗಿದ್ದ ಸಮಾಚಾರವನ್ನು ವ್ಯರ್ಥವಾಗದಂತೆ ಗ್ರಂಥವಾಗಿ ಬರೆಯಬೇಕೆಂದುಕೊಂಡಿದ್ದಾನೆ. ಸುಮಾರು ಹತ್ತು ಸಾವಿರಮಂದಿ ಬರೆದವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ತೆಗೆದುಕೊಂಡು ಗ್ರಂಥಗಳಾಗಿ ಮಾಡುವುದಾಗಿದೆ. ಹಾಗೆ ಬರೆದಿರುವವು ಕೇವಲ 1108 ಮಂದಿ ಬರೆದಿರುವವು ಮಾತ್ರವೇ ಇವೆ. ಎಲ್ಲರೂ ಬರೆದ ಮಂತ್ರಗಳನ್ನು, ಬ್ರಾಹ್ಮಣಗಳನ್ನು ಸೇರಿಸಿ ಬರೆದರೂ ಅವರ ಹೆಸರುಗಳು ಚಿರಸ್ಥಾಯಿಯಾಗಿ ಗುರುತು ಇರುವಂತೆ ಉಪನಿಷತ್‌ಗಳನ್ನು ಬಿಡಿಬಿಡಿಯಾಗಿ ಬೆರೆಸದಂತೆ ಬರೆದು, ಆ ಉಪನಿಷತ್‌ಗಳಿಗೆ ಬರೆದವರ ಹೆಸರುಗಳು ಇಡುವುದು ನಡೆದಿದೆ. ಹಾಗೆ ಬರೆಯಲ್ಪಟ್ಟ 1108 ಉಪನಿಷತ್‌ಗಳಲ್ಲಿ 108 ಮಾತ್ರ ಮುಖ್ಯವಾದವೆಂದು ಅವುಗಳ ಹೆಸರುಗಳನ್ನು ಮಾತ್ರ ಹೇಳುವುದಾಗಿದೆ. ಅವು ಹೀಗೆ ವರಸೆ ಕ್ರಮದಲ್ಲಿ ಇವೆಯೆಂದು ಅವುಗಳ ಹೆಸರುಗಳನ್ನು ಮಾತ್ರ ಕೆಳಗೆ ವರಸೆಕ್ರಮವಾಗಿ ಹೇಳುವುದಾಗಿದೆ.

1) ಈಶಾವಾಸ್ಯೋಪನಿಷತ್ತು 2) ಕೇನೋಪನಿಷತ್ತು

3) ಕಠೋಪನಿಷತ್ತು 4) ಪ್ರಶ್ನೋಪನಿಷತ್ತು

5) ಮುಂಡಕೋಪನಿಷತ್ತು 6) ಮಾಂಡೂಕ್ಯೋಪನಿಷತ್ತು

7) ತೈತ್ತಿರೀಯೋಪನಿಷತ್ತು 8) ಐತರೇಯೋಪನಿಷತ್ತು

9) ಛಾಂದೋಗ್ಯೋಪನಿಷತ್ತು 10) ಬೃಹದಾರಣ್ಯಕೋಪನಿಷತ್ತು

11) ಬ್ರಹ್ಮೋಪನಿಷತ್ತು 12) ಕೈವಲ್ಯೋಪನಿಷತ್ತು

13) ಜಾಬಾಲೋಪನಿಷತ್ತು 14) ಶ್ವೇತಾಶ್ವತರೋಪನಿಷತ್ತು

15) ಹಂಸೋಪನಿಷತ್ತು 16) ಆರುಣಿಕೋಪನಿಷತ್ತು

17) ಗರ್ಭೋಪನಿಷತ್ತು 18) ನಾರಾಯಣೋಪನಿಷತ್ತು

19) ಪರಮಹಂಸೋಪನಿಷತ್ತು 20) ಅಮೃತಬಿಂದೂಪನಿಷತ್ತು

21) ಅಮೃತನಾದೋಪನಿಷತ್ತು 22) ಅಥರ್ವಶಿರೋಪನಿಷತ್ತು

23) ಅಥರ್ವಶಿಖೋಪನಿಷತ್ತು 24) ಮೈತ್ರಾಯಣ್ಯುಪನಿಷತ್ತು

25) ಕೌಷೀತಕೀಬ್ರಾಹ್ಮಣೋಪನಿಷತ್ತು 26) ಬೃಹಜ್ಜಾಬಾಲೋಪನಿಷತ್ತು

27) 1) ನೃಸಿಂಹತಾಪಿನ್ಯುಪನಿಷತ್ತು 2) ನೃಸಿಂಹಾತ್ತಾರತಾಪಿನ್ಯುಪನಿಷತ್ತು

28) ಕಾಲಾಗ್ನಿರುದ್ರೋಪನಿಷತ್ತು

29) ಮೈತ್ರೇಯೋಪನಿಷತ್ತು 30) ಸುಬಾಲೋಪನಿಷತ್ತು

31) ಕ್ಷುರಿಕೋಪನಿಷತ್ತು 32) ಮಂತ್ರಿಕೋಪನಿಷತ್ತು

33) ಸರ್ವಸಾರೋಪನಿಷತ್ತು 34) ನೀರಾಲಂಬೋಪನಿಷತ್ತು

35) ಶುಕರಹಸ್ಯೋಪನಿಷತ್ತು 36) ವಜ್ರಸೂಚಿಕೋಪನಿಷತ್ತು

37) ತೇಜೋಬಿಂದೂಪನಿಷತ್ತು 38) ನಾದಬಿಂದೂಪನಿಷತ್ತು

39) ಧ್ಯಾನಬಿಂದೂಪನಿಷತ್ತು 40) ಬ್ರಹ್ಮವಿದ್ಯೋಪನಿಷತ್ತು

41) ಯೋಗತತ್ತ್ವೋಪನಿಷತ್ತು 42) ಆತ್ಮಬೋಧೋಪನಿಷತ್ತು

43) ನಾರದಪರಿವ್ರಾಜಕೋಪನಿಷತ್ತು 44) ತ್ರಿಶಿಖಿಬ್ರಾಹ್ಮಣೋಪನಿಷತ್ತು

45) ಸೀತೋಪನಿಷತ್ತು 46) ಯೋಗಚೂಡಾಮಣ್ಯುಪನಿಷತ್ತು

47) ನಿರ್ವಾಣೋಪನಿಷತ್ತು 48) ಮಂಡಲ ಬ್ರಾಹ್ಮಣೋಪನಿಷತ್ತು

49) ದಕ್ಷಿಣಾಮೂರ್ತ್ಯುಪನಿಷತ್ತು 50) ಶರಭೋಪನಿಷತ್ತು

51) ಸ್ಕನ್ದೋಪನಿಷತ್ತು 52) ತ್ರಿಪಾದ್ವಿಭೂತಿಮಹಾನಾರಾಯಣೋಪನಿಷತ್ತು

53) ಅದ್ವಯತಾರಕೋಪನಿಷತ್ತು 54) ರಾಮರಹಸ್ಯೋಪನಿಷತ್ತು

55) ರಾಮತಾಪಿನ್ಯುಪನಿಷತ್ತು 56) ವಾಸುದೇವೋಪನಿಷತ್ತು

57) ಮುದ್ಗಲೋಪನಿಷತ್ತು 58) ಶ್ಯಾಂಡಿಲ್ಯೋಪನಿಷತ್ತು

59) ಪೈಙ್ಗಲೋಪನಿಷತ್ತು 60) ಭಿಕ್ಷುಕೋಪನಿಷತ್ತು

61) ಮಹೋಪನಿಷತ್ತು 62) ಶಾರೀರಕೋಪನಿಷತ್ತು

63) ಯೋಗಶಿಖೋಪನಿಷತ್ತು 64) ತುರೀಯಾತೀತೋಪನಿಷತ್ತು

65) ಸನ್ನ್ಯಾಸೋಪನಿಷತ್ತು 66) ಪರಮಹಂಸ ಪರಿವ್ರಾಜಕೋಪನಿಷತ್ತು

67) ಅಕ್ಷಮಾಲಿಕೋಪನಿಷತ್ತು
68) ಅವ್ಯಕ್ತೋಪನಿಷತ್ತು
69) ಅನ್ನಪೂರ್ಣೋಪನಿಷತ್ತು
70) ಸೂರ್ಯೋಪನಿಷತ್ತು
71) ಏಕಾಕ್ಷರೋಪನಿಷತ್ತು
72) ಅಕ್ಷ್ಯುಪನಿಷತ್ತು
73) ಆಧ್ಯಾತ್ಮೋಪನಿಷತ್ತು
74) ಕುಂಡಿಕೋಪನಿಷತ್ತು
75) ಸಾವಿತ್ರ್ಯುಪನಿಷತ್ತು
76) ಅತ್ಮೋಪನಿಷತ್ತು
77) ಪಾಶುಪತಬ್ರಹ್ಮೋಪನಿಷತ್ತು
78) ಪರಬ್ರಹ್ಮೋಪನಿಷತ್ತು
79) ಅವಧೂತೋಪನಿಷತ್ತು
80) ತ್ರಿಪುರಾತಾಪಿನ್ಯುಪನಿಷತ್ತು
81) ದೇವ್ಯುಪನಿಷತ್ತು
82) ತ್ರಿಪುರೋಪನಿಷತ್ತು
83) ಕಠರುದ್ರೋಪನಿಷತ್ತು
84) ಭಾವನೋಪನಿಷತ್ತು
85) ರುದ್ರಹೃದಯೋಪನಿಷತ್ತು
86) ಯೋಗಕುಂಡಲ್ಯುಪನಿಷತ್ತು
87) ಭಸ್ಮಜಾಬಾಲೋಪನಿಷತ್ತು
88) ರುದ್ರಾಕ್ಷಜಾಬಾಲೋಪನಿಷತ್ತು
89) ಗಣಪತ್ಯುಪನಿಷತ್ತು
90) ದರ್ಶನೋಪನಿಷತ್ತು
91) ತಾರಸಾರೋಪನಿಷತ್ತು
92) ಮಹಾವಾಕ್ಯೋಪನಿಷತ್ತು
93) ಪಂಚಬ್ರಹ್ಮೋಪನಿಷತ್ತು
94) ಪ್ರಾಣಾಗ್ನಿಹೋತ್ರೋಪನಿಷತ್ತು
95) ಗೋಪಾಲತಾಪಿನ್ಯುಪನಿಷತ್ತು
96) ಕೃಷ್ಣೋಪನಿಷತ್ತು
97) ಯಾಜ್ಞವಲ್ಕ್ಯೋಪನಿಷತ್ತು
98) ವರಾಹೋಪನಿಷತ್ತು
99) ಶಾಟ್ಯಾಯನೀಯೋಪನಿಷತ್ತು
100) ಹಯಗ್ರೀವೋಪನಿಷತ್ತು

**101) ದತ್ತಾತ್ರೇಯೋಪನಿಷತ್ತು 102) ಗಾರುಡೋಪನಿಷತ್ತು**

**103) ಕಲಿಸಂತರಣೋಪನಿಷತ್ತು 104) ಜಾಬಾಲ್ಯುಪನಿಷತ್ತು**

**105) ಸೌಭಾಗ್ಯಲಕ್ಷ್ಮ್ಯುಪನಿಷತ್ತು 106) ಸರಸ್ವತೀರಹಸ್ಯೋಪನಿಷತ್ತು**

**107) ಬಹ್ವೃಚೋಪನಿಷತ್ತು 108) ಮುಕ್ತಿಕೋಪನಿಷತ್ತು**

ಇಲ್ಲಿ 108 ಉಪನಿಷತ್ತುಗಳ ಹೆಸರುಗಳು ಇವೆ. ಉಪನಿಷತ್ತುಗಳು ಸಾಧಾರಣವೇ ಆದರೂ ಅವುಗಳ ಮುಂದಿರುವ ಹೆಸರುಗಳು ಅವುಗಳನ್ನು ಬರೆದವರ ಹೆಸರುಗಳು ಎಂದು ತಿಳಿಯಬೇಕು. ಒಟ್ಟಾರೆ ಬರೆದವರು ಹತ್ತು ಸಾವಿರ ಮಂದಿ ಆಗಿದ್ದು, ಅದರಲ್ಲಿ ಮುಖ್ಯವಾದವೆಂದು 1108 ಬರಹಗಳನ್ನು ತೆಗೆದುಕೊಂಡರೆ, ಇನ್ನೂ ಕೆಲವರು ಅದರಲ್ಲಿ ಕೆಲವುಗಳಲ್ಲಿ ಲೋಪಗಳಿವೆಯೆಂದು, ಲೋಪ ಇಲ್ಲದಿರುವವು ಮುಖ್ಯವೆಂದು ಹೇಳುತ್ತಾ ಕೇವಲ 108 ಬರಹಗಳನ್ನು ಮಾತ್ರವೇ ತೆಗೆದುಕೊಂಡಿದ್ದಾರೆ. ಹತ್ತು ಸಾವಿರ ಮಂದಿ ಬರಹಗಳಲ್ಲಿ ಸಕ್ರಮವಾದವು 1108 ಎಂದು ಕೆಲವರು ಹೇಳಿದಾಗ, ಅದರಲ್ಲಿ ಕೂಡಾ ಪೂರ್ತಿ ಸಕ್ರಮವಾದವು 108 ನ್ನು ಮಾತ್ರ ತೆಗೆದುಕೊಳ್ಳುವುದು ನಡೆದಿದೆ. 108ನ್ನು ಬರೆದವರ ಹೆಸರುಗಳನ್ನು ಅವರು ಬರೆದ ಉಪನಿಷತ್ತುಗಳ ಮುಂದೆ ಹೇಳುವುದಾಗಿದೆ. ಉದಾಹರಣೆಗೆ 'ತೈತ್ತರಿ' ಎನ್ನುವ ವ್ಯಕ್ತಿ ಬರೆದಿರುವುದನ್ನು 'ತೈತ್ತರಿಯೋಪನಿಷತ್ತು' ಎಂದು ಕರೆದಿದ್ದಾರೆ. ಹಾಗೆಯೇ 'ಮಂಡೂಕ್ಯನು' ಎಂಬ ಒಬ್ಬ ಮಹರ್ಷಿ ಬರೆದಿರುವುದನ್ನು 'ಮಂಡೂಕೋಪನಿಷತ್' ಎಂದು ಹೆಸರು ಇಟ್ಟಿದ್ದಾರೆ. ಈ ವಿಧವಾಗಿ ಪ್ರತಿ ಉಪನಿಷತ್ತಿನ ಮುಂದಿನ ಭಾಗದಲ್ಲಿ ಅದನ್ನು ಬರೆದವರ ಹೆಸರು ಇದೆಯೆಂದು ಗ್ರಹಿಸಬೇಕು.

ವೇದಗಳು ನಾಲ್ಕಾಗಿ ಬರೆಯಲ್ಪಟ್ಟಿವೆ. ಮೂರು ಯುಗಗಳಿಂದ ಸ್ವಲ್ಪ ಜ್ಞಾನ ಇರುವವರು ಅವರಿಗೆ ತಿಳಿದಿರುವುದು ಅವರು ಬರೆದಿದ್ದಾರೆ. ಹತ್ತು ಸಾವಿರ ಮಂದಿ ಬರೆದರೆ, ಅದರಲ್ಲಿ 1108 ಮಂದಿವು ಮಾತ್ರ ಸರಿಯಾದವೆಂದು,

ಉಳಿದವುಗಳಲ್ಲಿ ಲೋಪಗಳಿವೆಯೆಂದು 1108 ಉಪನಿಷತ್ತುಗಳನ್ನು ಮಾತ್ರ ತೆಗೆದುಕೊಳ್ಳುವುದು ನಡೆದಿದೆ. ಅದರಲ್ಲಿಯೂ 108ನ್ನು ಮಾತ್ರ ಸಕ್ರಮವಾದವೆಂದು ಆರಿಸಿಕೊಳ್ಳುವುದು ನಡೆದಿದೆ. ಉಪನಿಷತ್ತುಗಳು ಎಷ್ಟು ಆದರೂ ವೇದಗಳು ಮಾತ್ರ ನಾಲ್ಕೇ ಇವೆ. ವೇದಗಳು ಹಿಂದೂಗಳಿಗು, ಹಿಂದೂಗಳ ಜ್ಞಾನಕ್ಕು ಪ್ರಮಾಣ ಗ್ರಂಥಗಳೆಂದು ಕೆಲವರು ಹೇಳುತ್ತಿದ್ದಾರೆ. ವೇದಗಳ ಸಮಾಚಾರವನ್ನು ಬರೆದವರು ಬ್ರಾಹ್ಮಣರೇ. ಅಲ್ಲಲ್ಲಿ ಬಿಡಿ ಬಿಡಿಯಾಗಿ ಇದ್ದ ಎಲ್ಲರ ಬರಹಗಳನ್ನು ಶೇಕರಿಸಿ, ಗ್ರಂಥರೂಪ ಮಾಡಿದವನು ವ್ಯಾಸನು. ವ್ಯಾಸನು ಬ್ರಾಹ್ಮಣನೇ ಆಗಿರುವುದರಿಂದ ತಮ್ಮವರು ಬರೆದವುಗಳನ್ನು ಗ್ರಂಥವಾಗಿ ಮಾಡಬೇಕೆಂಬ ಛಲದಿಂದ ವ್ಯಾಸನು ಎಲ್ಲರ ಸಮಾಚಾರಗಳನ್ನು ಒಂದುಕಡೆ ಸೇರಿಸಿ ಗ್ರಂಥವಾಗಿ ಬರೆದಿದ್ದಾನೆ. ಅಲ್ಲಿಗೆ ವ್ಯಾಸನು ಸುಮ್ಮನೆ ಇರದೆ ಆತನಲ್ಲಿ ಮೋಹ ಗುಣದ ಪ್ರೇರಣೆಯಿಂದ ತನ್ನ ಕುಲದವರೇ ದೊಡ್ಡದಾಗಿ ಇರಬೇಕೆಂದು ತಿಳಿದು, ತನ್ನವರು ಬರೆದ ವ್ಯಾಸಗಳೆಲ್ಲವನ್ನು ಒಂದು ಕಡೆ ಸೇರಿಸಿ ಬರೆಯುವುದೇ ಅಲ್ಲದೆ, ತಾನು ಬರೆದ ವೇದಗಳೇ ಸರ್ವಮಾನವರಿಗು ದೈವಮಾರ್ಗ ವಿಷಯದಲ್ಲಿ ಪ್ರಮಾಣ ಗ್ರಂಥಗಳೆಂದು ಹೇಳಿದ್ದಾನೆ. ವೇದಗಳನ್ನು ಬರೆಯದಮುನ್ನ ವ್ಯಾಸನ ಹೆಸರು ಬೇರೆ ಇತ್ತು. ಅನೇಕಜನ ಬ್ರಾಹ್ಮಣರು ಬರೆದ ವ್ಯಾಸಗಳನ್ನು ಒಂದುಕಡೆ ಸೇರಿಸಿ ಗ್ರಂಥ ರೂಪವಾಗಿ ಬರೆಯುವುದರಿಂದ **ವ್ಯಾಸಗಳನ್ನು ಬರೆದವನು ವ್ಯಾಸನು** ಎಂದು ಹೆಸರು ಬಂದಿದೆ. ವೇದಗಳ ವ್ಯಾಸಗಳನ್ನು ಬರೆದಿದ್ದಾನೆ ಆದ್ದರಿಂದ 'ವೇದ ವ್ಯಾಸನು' ಎಂಬ ಹೆಸರು ಆತನಿಗೆ ಬರುವುದು ನಡೆದಿದೆ. ವೇದಗಳು ಪ್ರಮಾಣ ಗ್ರಂಥಗಳೆಂದು ಹೇಳುವುದರಿಂದ, ತಮ್ಮ ಗ್ರಂಥಗಳು ಪ್ರಜೆಗಳಲ್ಲಿ ಪ್ರಚಾರ ಆಗಬೇಕೆಂದು ಉಳಿದ ಬ್ರಾಹ್ಮಣರು ವೇದಗಳನ್ನು ಪಠಿಸುತ್ತಿದ್ದರು. ವ್ಯಾಸನಿಗೆ ಸ್ವಲ್ಪವೂ ದೈವಜ್ಞಾನ ತಿಳಿಯದ ಕಾಲದಲ್ಲಿ ಆ ವಿಧವಾಗಿ ವೇದಗಳನ್ನು ಬರೆಯುವುದು, ಎಲ್ಲರಿಗೂ ದೇವರ ಭಕ್ತಿ ಮಾರ್ಗದಲ್ಲಿ ವೇದಗಳೇ ಪ್ರಮಾಣ ಗ್ರಂಥಗಳೆಂದು ಹೇಳುವುದು ನಡೆದಿದೆ. ವೇದಗಳು ಬರೆದ ನಂತರ ಅವುಗಳನ್ನು ಪೂರ್ತಿಯಾಗಿ ನಂಬುವಂತೆ ವೇದಗಳಲ್ಲಿ ಹೇಳಿದ

ದೇವತೆಗಳನ್ನು ಕುರಿತು ಹದಿನೆಂಟು ಪುರಾಣಗಳನ್ನು ಬರೆಯುವುದು ನಡೆದಿದೆ. ನಾಲ್ಕು ವೇದಗಳು, ಹದಿನೆಂಟು ಪುರಾಣಗಳನ್ನು ಬರೆದು ಪ್ರಜೆಗಳಿಗೆ ಕಳಿಸುವುದರಿಂದ ಪ್ರಜೆಗಳು, ವೇದ, ಪುರಾಣಗಳನ್ನು ಓದಿ ಅವುಗಳನ್ನು ದೊಡ್ಡದಾಗಿ ಅಂದುಕೊಳ್ಳುವುದೂ, ಅವುಗಳನ್ನು ಬರೆದ ವ್ಯಾಸನನ್ನು ಹೊಗಳುವುದೂ ನಡೆದಿದೆ.

ದ್ವಾಪರ ಯುಗದಲ್ಲಿ ವೇದಗಳನ್ನು, ಪುರಾಣಗಳನ್ನು ಸಾಧಾರಣ ಪ್ರಜೆಗಳು ಓದುವುದರಿಂದ, ಅವುಗಳಿಗೆ ಪ್ರಭಾವಿತರಾಗಿ ಪುರಾಣಗಳಲ್ಲಿನ ದೇವತೆಗಳನ್ನು ನಂಬುವುದು, ವೇದಗಳಿಂದ ಯಜ್ಞಗಳನ್ನು ಮಾಡುವುದು, ಯಜ್ಞಗಳಲ್ಲಿ ವೇದಗಳನ್ನು ಓದುವುದು ನಡೆಯುತ್ತಿತ್ತು. ಆ ದಿನ ಪ್ರಜೆಗಳು ಯಜ್ಞಗಳನ್ನು ಮಾಡಬೇಕೆಂದುಕೊಂಡಾಗ ಆ ಕಾರ್ಯಗಳನ್ನು ಬ್ರಾಹ್ಮಣರೇ ಮಾಡುತ್ತಿದ್ದರು. ಹಾಗೆ ಎಲ್ಲಾ ಭಕ್ತಿ ಕಾರ್ಯಗಳನ್ನು ಬ್ರಾಹ್ಮಣರೇ ಮಾಡುತ್ತಾ ಬಂದಿದ್ದಾರೆ. ಅದೇ ಈ ದಿನ ಕೂಡಾ ನಡೆಯುತ್ತಿದೆ. ವ್ಯಾಸನು ಬರೆದ ವೇದಗಳಿಂದ, ಪುರಾಣಗಳಿಂದ ಮನುಷ್ಯರಲ್ಲಿ ಅಧರ್ಮಗಳು ಹೆಚ್ಚು ಬೆಳೆದು ಹೋಗಿವೆಯೆಂದು ತಿಳಿದ ಪರಮಾತ್ಮ (ಪರಿಶುದ್ಧಾತ್ಮ) ಅಧರ್ಮಗಳನ್ನು ಅಡಗಿಸಿ, ಧರ್ಮಗಳನ್ನು ಮನುಷ್ಯರಿಗೆ ತಿಳಿಸುವುದಕ್ಕೆ ಮನುಷ್ಯನಂತೆ ಮನುಷ್ಯರ ಮಧ್ಯದೊಳಗೆ ಬರುವುದು ನಡೆದಿದೆ. ದೇವರು ಎನ್ನುವ ಪರಮಾತ್ಮ ಪ್ರತ್ಯೇಕ ಮನುಷ್ಯನಾಗಿ ಬಂದರೂ, ಪ್ರಜೆಗಳ ಮಧ್ಯೆ ಆತನು ಸಾಧಾರಣ ಮನುಷ್ಯನಾಗಿ ಕಾಣಿಸುತ್ತಿರುತ್ತಾನೆ. ದೇವರು ಮನುಷ್ಯನಂತೆ ಬಂದರೂ ಆತನು ಪ್ರತ್ಯೇಕವಾದವನು, ಆದ್ದರಿಂದ ದೇವರ ಅವತಾರವನ್ನು **"ಭಗವಂತ"** ಎಂಬ ಪ್ರತ್ಯೇಕವಾದ ಹೆಸರಿನಿಂದ ಜ್ಞಾನ ತಿಳಿದವರು ಹೇಳುವುದು ನಡೆದಿದೆ. ದೇವರು ಭಗವಂತನಾಗಿ ಬಂದರೂ, ಆತನನ್ನು ಪ್ರಜೆಗಳು ಯಾರೂ ಗುರುತಿಸದಂತೆ ಪ್ರಜೆಗಳ ಮಧ್ಯೆ ಅಜ್ಞಾನಿಯಂತೆ ಇದ್ದುಹೋಗುತ್ತಾನೆ. ಭಗವಂತನನ್ನು ಯಾರೂ ಗುರುತಿಸಲಾರರು, ಆದರೂ ಆತನು ಬಂದಿರುವ ಕೆಲಸವನ್ನು ಯಾವುದೋ ಒಂದು ವಿಧವಾಗಿ ನೇರವೇರಿಸಿ ಹೋಗುತ್ತಾನೆ. **ಆತನು (ಭಗವಂತನು) ಅಧರ್ಮಗಳನ್ನು ಆಚರಿಸಬೇಡಿರೆಂದು,**

**ಧರ್ಮಗಳನ್ನು ಮಾತ್ರವೇ ದೈವಮಾರ್ಗದಲ್ಲಿ ಆಚರಿಸಿರೆಂದು ಹೇಳುವುದೇ ಆತನ ಕೆಲಸ.** ದೇವರು ಭಗವಂತನಾಗಿ ಎಷ್ಟುಸಲ ಭೂಮಿಮೇಲಕ್ಕೆ ಬಂದು ಧರ್ಮಗಳು ತಿಳಿಸಿಹೋಗಿದ್ದಾನೋ ಖಚಿತವಾಗಿ ಯಾರಿಗೂ ತಿಳಿದಿಲ್ಲ.

ದ್ವಾಪರ ಯುಗವೊಂದರ ಕೊನೆಯ ಕಾಲದಲ್ಲಿ **ಶ್ರೀಕೃಷ್ಣನು** ಭಗವಂತನಾಗಿ ಬಂದಿದ್ದಾನೆ. ಭಗವಂತನು ಭೂಮಿಮೇಲಕ್ಕೆ ಬಂದಾಗ ವ್ಯಾಸನ ವೇದಗಳಿಂದ, ಪುರಾಣಗಳಿಂದ ಅಧರ್ಮಗಳು ಹೆಚ್ಚಾಗಿಹೋಗಿ ಧರ್ಮಗಳು ಯಾವುವೊ ತಿಳಿಯದಂತೆ ಹೋಗಿವೆ. ಅಂತಹ ಸಮಯದಲ್ಲಿಯೇ ನಾನು ಬರುತ್ತೇನೆಂದು ದೇವರು ಹೇಳಿದಂತೆ ಬರುವುದು, ಸಮಯಸ್ಫೂರ್ತಿಯಾಗಿ ಧರ್ಮಗಳನ್ನು ಬೋಧಿಸುವುದು ನಡೆದಿದೆ. ಕೃಷ್ಣನು ಕುರುಕ್ಷೇತ್ರ ಯುದ್ಧ ನಡೆಯುವುದಕ್ಕೆ ಹತ್ತು ನಿಮಿಷಗಳ ಹಿಂದೆ ಯುದ್ಧಕ್ಕೆ ಸಿದ್ಧವಾಗಿ ಎರಡೂಕಡೆ ಸೈನ್ಯವಿರುವಾಗ, ಯಾರೂ ಇಲ್ಲದ, ಯಾರೂ ಕೇಳದ ಪ್ರದೇಶದೊಳಗೆ ಅರ್ಜುನನನ್ನು ಕರೆದುಕೊಂಡು ಹೋಗಿ, ಮನುಷ್ಯರು ತಿಳಿಯಬೇಕಾದ ಬೋಧನೆಯನ್ನು ಹೇಳಿದ್ದಾನೆ. ಆ ಬೋಧನೆಯಲ್ಲಿ ಧರ್ಮಗಳು ಸಂಪೂರ್ಣವಾಗಿ ಹೇಳಲ್ಪಟ್ಟಿವೆ. ಹಾಗೇ ಅಧರ್ಮಗಳನ್ನು ಕೂಡಾ ಹೇಳಿ, ಅವುಗಳಿಂದ ದೇವರು ತಿಳಿಯಲ್ಪಡುವುದಿಲ್ಲ. ಅಧರ್ಮಗಳಿಂದ ಅಜ್ಞಾನ ಹೊರತು ಏನೂ ಇಲ್ಲವೆಂದು ಹೇಳಿದ್ದಾನೆ. ಹಾಗೆ ರಹಸ್ಯವಾಗಿ ಹೇಳಿದ ಜ್ಞಾನವನ್ನು ಯುದ್ಧ ಮುಗಿದುಹೋದ ತಿಂಗಳ ನಂತರ ಅರ್ಜುನನು ವ್ಯಾಸನಿಗೆ ತಾನು ಕೇಳಿದ ವಿಷಯವನ್ನು ಎಲ್ಲಾ ಹೇಳುವುದು ನಡೆದಿದೆ. ಅರ್ಜುನನು ಹೇಳಿರುವುದನ್ನು ಕೇಳಿದಾಗ ವ್ಯಾಸನಲ್ಲಿ ತಾನು ತಪ್ಪು ಮಾಡಿದ್ದೇನೆಂಬ ಆಂದೋಳನೆ (ಗಾಬರಿ) ಕಾಣಿಸಿದೆ. ಅರ್ಜುನನು ತನಗೆ ಹೇಳಿದ ಜ್ಞಾನವೆಲ್ಲವೂ ಧರ್ಮಗಳಿಂದ ಕೂಡಿಕೊಂಡಿರುವುದು, ತಾನು ಗತದಲ್ಲಿ ನಾಲ್ಕು ವೇದಗಳಲ್ಲಿ, ಹದಿನೆಂಟು ಪುರಾಣಗಳಲ್ಲಿ ಬರೆದವುಗಳಲ್ಲಿ ಪೂರ್ತಿ ಅಧರ್ಮಗಳು ಇರುವುದರಿಂದ, ವೇದವ್ಯಾಸನಲ್ಲಿ ವೇದನೆಯಿಂದ ಕೂಡಿದ ಬದಲಾವಣೆ ಕಾಣಿಸಿದೆ.

ವೇದವ್ಯಾಸನು ತಾನು ಅಧರ್ಮಗಳನ್ನು ಬೋಧಿಸಿ ತಪ್ಪು ಮಾಡಿರುವುದರಿಂದ ತನಗೆ ಪಾಪ ಅಮಿತವಾಗಿ ಬಂದಿರುತ್ತದೆಂದು ಅಂದುಕೊಂಡಿದ್ದಾನೆ. ತಾನು ಮಾಡಿದ ಪಾಪಕೃತ್ಯಗಳಿಗೆ ಪಶ್ಚಾತ್ತಾಪಪಟ್ಟು ಕೃಷ್ಣನು ಹೇಳಿದ ಬೋಧನೆಯನ್ನು ಗ್ರಂಥರೂಪದಲ್ಲಿ ಬರೆಯಬೇಕೆಂದು ಅಂದುಕೊಂಡಿದ್ದಾನೆ. ಅಂದಿನಿಂದ ಕಾಲವನ್ನು ವ್ಯರ್ಥ ಮಾಡದೆ ತಾನು ಅರ್ಜುನನ ಮುಖಾಂತರ ಕೇಳಿರುವುದೆಲ್ಲಾ ಗ್ರಂಥರೂಪ ಮಾಡಿ ಆ ಗ್ರಂಥಕ್ಕೆ 'ಭಗವದ್ಗೀತೆ' ಎಂಬ ಹೆಸರನ್ನು ಇಟ್ಟಿದ್ದಾನೆ. ಈ ವಿಧವಾಗಿ ಭಗವದ್ಗೀತೆ ತಯಾರಾಗಿದೆ. ಭಗವದ್ಗೀತೆ ಬರೆದ ನಂತರ ವ್ಯಾಸನು ಎಂದಿಗೂ, ಅಧರ್ಮಗಳನ್ನು ಬೋಧಿಸುವುದಾಗಲಿ, ಅಧರ್ಮಗಳನ್ನು ಆಚರಿಸುವುದಾಗಲಿ ಮಾಡಲಿಲ್ಲ. ತಾನು ಗತದಲ್ಲಿ ವೇದಗಳು, ಪುರಾಣಗಳು ಬರೆದು ಬಹಳ ತಪ್ಪು ಮಾಡಿದ್ದೇನೆಂದು ಪ್ರಾಯಶ್ಚಿತ್ತವಾಗಿ ಆ ವಿಷಯವನ್ನು ಪ್ರಕ್ಕದವರಿಂದ "ತಾನು ಬರೆದ ಭಗವದ್ಗೀತೆಯನ್ನು ಓದಿರೆಂದು, ಅದಕ್ಕಿಂತ ಮೊದಲು ಬರೆದ ವೇದಗಳನ್ನು, ಪುರಾಣಗಳನ್ನು ಓದಬೇಡಿರೆಂದು" ಹೇಳುತ್ತಿದ್ದನು. ಆದರೂ ಬ್ರಾಹ್ಮಣರು ವೇದಗಳನ್ನು, ಪುರಾಣಗಳನ್ನು ಸ್ವತಃವಾಗಿ ಪ್ರಚಾರ ಮಾಡುತ್ತಾ, ತಮಗೆ ವಿರುದ್ಧವಾಗಿರುವ ಭಗವದ್ಗೀತೆಯನ್ನು ಪ್ರಜೆಗಳಿಗೆ ತಿಳಿಯದಂತೆ ಮಾಡಿದ್ದಾರೆ. ಪ್ರಜೆಗಳಿಗೆ ಏನು ಹೇಳಿದರೂ ವಿದ್ಯಾವಂತರಾದ ಬ್ರಾಹ್ಮಣರೇ ಹೇಳಬೇಕು. ಆದ್ದರಿಂದ ಅವರ ಬೋಧನೆಗಳಲ್ಲಿ ಭಗವದ್ಗೀತೆಯನ್ನು ಇಲ್ಲದಂತೆ ಮಾಡಿದ್ದಾರೆ. ಆದ್ದರಿಂದ ಪ್ರಜೆಗಳಿಗೆ ಧರ್ಮಗಳು ತಿಳಿಯದಂತೆ ಹೋಗಿ, ಅಧರ್ಮಗಳೇ ಇಂದಿನವರೆಗು ಪ್ರಚಾರದಲ್ಲಿವೆ, ಆಚರಣೆಯಲ್ಲಿವೆ.

ದೇವರು ಅದೇ ಕೆಲಸವಾಗಿ ಧರ್ಮಗಳನ್ನು ತಿಳಿಸುವ ನಿಮಿತ್ತ ಮನುಷ್ಯನಾಗಿ ಜನ್ಮವನ್ನು ತಯಾರಿ ಮಾಡಿಕೊಂಡು ಬಂದು, ಎಷ್ಟೋ ಶ್ರಮಿಸಿ ಸಮಯ ಬರುವವರೆಗೂ ಕಾದಿದ್ದು, ಸಂದರ್ಭಾನುಸಾರವಾಗಿ ಯುದ್ಧರಂಗದಲ್ಲಿನ ಅರ್ಜುನನಿಗೆ ಧರ್ಮಯುಕ್ತವಾದ ಜ್ಞಾನವನ್ನು ತಿಳಿಸಿದ್ದಾನೆ. ಪರಮಾತ್ಮ ಸಂಕಲ್ಪದಿಂದ ವೇದವ್ಯಾಸನು ಕೃಷ್ಣನು ಹೇಳಿದ ಜ್ಞಾನವನ್ನು ಗ್ರಂಥರೂಪವಾಗಿ ಬರೆದು ಅದಕ್ಕೆ ಭಗವದ್ಗೀತೆಯೆಂದು ಹೆಸರು ಇಟ್ಟಿದ್ದಾನೆ. ಬ್ರಾಹ್ಮಣನಾದ

ವೇದವ್ಯಾಸನು ವೇದಗಳಿಗೆ ವಿರುದ್ಧವಾಗಿ ಧರ್ಮಗಳನ್ನು ತಿಳಿಸುತ್ತಾ ಬರೆದ ಗ್ರಂಥ ಉಳಿದ ಬ್ರಾಹ್ಮಣರಿಗೆ ಸರಿಹೋಗಲಿಲ್ಲ. ತಮಗೆ ಅಭ್ಯಾಸವಾದ ವೇದಗಳನ್ನು, ಯಜ್ಞಗಳನ್ನು, ಧ್ಯಾನಗಳನ್ನು, ದಾನಗಳನ್ನು ಅಧರ್ಮಗಳೆಂದು ಬರೆದ ಭಗವದ್ಗೀತೆಯನ್ನು ಪೂರ್ತಿ ವಿರೋಧಿಸಿ, ಪ್ರಜೆಗಳಿಗೆ ಅದನ್ನು ತಿಳಿಯದಂತೆ ಮಾಡಬೇಕೆಂದು ಎಲ್ಲರೂ ಸೇರಿ ಮಾತನಾಡಿಕೊಂಡಿದ್ದಾರೆ. ಪ್ರಜೆಗಳ ಹತ್ತಿರ ಎಲ್ಲಿಯಾದರೂ ಭಗವದ್ಗೀತೆ ಇದೆಯೆಂದು ತಿಳಿದರೂ ಅದನ್ನು ಓದಬಾರದೆಂಬ ಉದ್ದೇಶದಿಂದ "ಭಗವದ್ಗೀತೆ ಯುದ್ಧದಲ್ಲಿ ಹೇಳಿರುವುದು. ಆ ಗ್ರಂಥ ಮನೆಯಲ್ಲಿ ಇದ್ದರೆ ಹೊಡೆದಾಟಗಳು ಬರುತ್ತವೆ. ಅದರಿಂದ ನಷ್ಟ ಕಷ್ಟ ನಡೆಯುತ್ತದೆಂದು ಹೇಳಿ, ಗ್ರಂಥವನ್ನು ಕೆರೆಯಲ್ಲಾಗಲಿ (ನದಿಯಲ್ಲಾಗಲಿ), ಸಮುದ್ರದಲ್ಲಾಗಲಿ ಹಾಕಬೇಕೆಂದು ಹಾಗೆ ಮಾಡುವುದರಿಂದ ಮುಂಬರುವಂತಹ ವಿಪತ್ತುಗಳು ಹೋಗುತ್ತವೆಂದು" ಹೇಳುತ್ತಿದ್ದರು. ಹಾಗೆ ಎಲ್ಲಾ ತಿಳಿದ ಬ್ರಾಹ್ಮಣರು ಹೇಳಿದರೆ ಪ್ರಜೆಗಳು ಅವರ ಮಾತುಗಳನ್ನು ಕೇಳಿ ಮನೆಯಲ್ಲಿರುವ ಭಗವದ್ಗೀತೆಯನ್ನು ನದಿಯಲ್ಲಿ ಹಾಕಿ ಬರುತ್ತಿದ್ದರು. ನದಿಗಳು ಇಲ್ಲದಕಡೆ ದೇವಾಲಯಗಳಲ್ಲಿ ಇಟ್ಟು ಬರುತ್ತಿದ್ದರು.

ಭಗವಂತನು ಹೇಳಿದ ಭಗವದ್ಗೀತೆಯಲ್ಲಿ ದೈವಜ್ಞಾನ ಹೇಳಲ್ಪಟ್ಟಿದೆ. ಅದರಲ್ಲಿ ಧರ್ಮಗಳು, ಅಧರ್ಮಗಳನ್ನು ದೇವರು ತಿಳಿಸಿದ್ದಾನೆ ಅಲ್ಲವೆ! ಭಗವದ್ಗೀತೆಯನ್ನು ಓದುವುದರಿಂದ ಮುಕ್ತಿಯನ್ನು ಸೇರಬಹುದು ಅಲ್ಲವೆ! ಎಂದು ಯಾರಾದರೂ ಕೇಳಿದರೆ ಅದಕ್ಕೆ ಉತ್ತರವಾಗಿ "ಭಗವದ್ಗೀತೆಗಿಂತ ಮೊದಲು ವೇದಗಳು ಹುಟ್ಟಿವೆ. ವೇದ ಸನಾತನವಾದುದು. ಮುಕ್ತಿ ಬೇಕೆಂದು ಕೊಳ್ಳುವವರು ವೇದಗಳನ್ನೇ ನೋಡಬೇಕು. ವೇದಗಳು ಎಲ್ಲದಕ್ಕು ಪ್ರಮಾಣಗಳಾಗಿ ಇವೆ. ವೇದಗಳಿಂದಲೇ ದೇವರನ್ನು ಸೇರಬಹುದು. ಆದ್ದರಿಂದ ಭಗವದ್ಗೀತೆಯನ್ನು ಬಿಟ್ಟು ವೇದಗಳನ್ನು ಓದಿರಿ ಎಂದು" ಬ್ರಾಹ್ಮಣರು ಹೇಳುತ್ತಿದ್ದಾರೆ. ವೇದಗಳು ಸಂಸ್ಕೃತದಲ್ಲಿ ಇರುವುದರಿಂದ ವೇದಗಳನ್ನು ಪ್ರಜೆಗಳು ಓದಲಾರದೆಹೋಗುತ್ತಿದ್ದಾರೆ. ಅಷ್ಟೇಅಲ್ಲದೆ ತಮ್ಮ ಮನೆಯಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ಬ್ರಾಹ್ಮಣರಿಂದ

ವೇದಮಂತ್ರಗಳನ್ನು ಓದಿಸಿಕೊಳ್ಳುತ್ತಿದ್ದಾರೆ. ನಾಲ್ಕು ವೇದಗಳನ್ನು ಉಳಿದ ಬ್ರಾಹ್ಮಣರೆಲ್ಲರೂ ಓದಲಾರರು. ಅವರ ಕೆಲಸಕ್ಕೆ ಅಗತ್ಯವಾದ ವೇದಮಂತ್ರಗಳನ್ನು ಮಾತ್ರ ಕಲಿತುಕೊಂಡಿದ್ದಾರೆ. ಬ್ರಾಹ್ಮಣರಲ್ಲಿ ಅಪರೂಪವಾಗಿ ಅಲ್ಲಲ್ಲಿ ಕೆಲವರು ಮಾತ್ರ ವೇದಗಳನ್ನು ಓದಿದವರಿರಬಹುದು. ಅಷ್ಟೇಹೊರತು ಬ್ರಾಹ್ಮಣರು ಎಲ್ಲರೂ ವೇದಗಳನ್ನು ಓದಿಲ್ಲ. ಭಗವದ್ಗೀತೆ ನೂರು ವರ್ಷಗಳ ಕೆಳಗೆ ಕೂಡಾ ಸಂಸ್ಕೃತ ಭಾಷೆಯಲ್ಲಿಯೇ ಇತ್ತು. ಪ್ರಜೆಗಳಿಗೆ ಆಗ ಕನ್ನಡ ಓದೇ ಸರಿಯಾಗಿ ಇಲ್ಲದಿರುವಾಗ ಸಂಸ್ಕೃತ ಭಾಷೆಯಲ್ಲಿರುವ ಭಗವದ್ಗೀತೆಯನ್ನು ಯಾರು ಓದಬಲ್ಲರು? ಈ ಮಧ್ಯ ಕಾಲದಲ್ಲಿ ಸುಮಾರು 80 ವರ್ಷಗಳ ಕಾಲದಿಂದ ಭಗವದ್ಗೀತೆಗಳು ಪ್ರಾಂತೀಯ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಆದರೆ ಭಗವದ್ಗೀತೆಯನ್ನು ಓದುವ ಅವಕಾಶ ಇಲ್ಲದಂತೆ ಬ್ರಾಹ್ಮಣರು ಭಗವದ್ಗೀತೆಗಿಂತ ಮುಖ್ಯ ವೇದಗಳೇಯೆಂದು ಹೇಳಿದ್ದಾರೆ.

ಈ ವಿಧವಾಗಿ ಪ್ರಜೆಗಳು ಭಗವದ್ಗೀತೆಗೆ ದೂರವಾಗಿ ಇರುವಂತೆ ಮಾಡುವುದೇ ಅಲ್ಲದೆ, ಮೊದಲು ವ್ಯಾಸನು ಬರೆದ ತಾಳೆಎಳೆಗಳ ಗ್ರಂಥ ಕೆಲವು ವರ್ಷಗಳಿಗೆ ಶಿಥಿಲಾವಸ್ಥೆಗೆ ಬಂದಾಗ, ಪುನಃ ಅದನ್ನು ಇನ್ನೊಂದು ಗ್ರಂಥವಾಗಿ ಆ ದಿನ ವಿದ್ಯಾವಂತರಾದ ಬ್ರಾಹ್ಮಣರೇ ಬರೆದಿದ್ದಾರೆ. ಆಗ ಅದೇ ಸಮಯವೆಂದು ಕೆಲವು ಕಲ್ಪಿತ ಶ್ಲೋಕಗಳನ್ನು, ಅವರಿಗೆ ಅನುಕೂಲವಾಗಿರುವ ಶ್ಲೋಕಗಳನ್ನು ಭಗವದ್ಗೀತೆಯಲ್ಲಿ ಸೇರಿಸುವುದು ನಡೆದಿದೆ. ಆ ಶ್ಲೋಕಗಳಿರುವು ದರಿಂದ ಅವುಗಳನ್ನು ಗುರುತಿಸಲಾರದವರು ಭಗವದ್ಗೀತೆಯನ್ನು ಓದಿದರೂ ಅದರಲ್ಲಿ ಸಂಶಯಗಳೇ ಹೆಚ್ಚಾಗಿ ಏರ್ಪಡುತ್ತಿವೆ ಹೊರತು, ಸಂಶಯರಹಿತ ಜ್ಞಾನ ಅದರಲ್ಲಿ ಯಾರಿಗೂ ದೊರೆಯುತ್ತಿಲ್ಲ. ಹಾಗೆ ಅವರಿಗೆ ಅನುಕೂಲವಾದ ಶ್ಲೋಕಗಳನ್ನು ಸೇರಿಸಿದಲ್ಲಿಯೂ ಅವುಗಳನ್ನು ನಾನು ಕಂಡುಹಿಡಿದಿದ್ದೇನೆ. ಆದ್ದರಿಂದ ನಾನು ಬರೆದ **ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿ** ಅವುಗಳನ್ನು ಕಲ್ಪಿತ ಶ್ಲೋಕಗಳಾಗಿ ಶ್ಲೋಕಗಳ ಪಕ್ಕದಲ್ಲಿಯೇ ತೋರಿಸಿದ್ದೇವೆ. ನಾವು ಹಾಗೆ ಬರೆಯುವುದರಿಂದ ಕಲಿಯುಗದ ಮೊದಲಿನಲ್ಲಿಯೇ ಭಗವದ್ಗೀತೆ ಮೇಲೆ

ಅವರು ಮಾಡಿದ ಕುತಂತ್ರ ಭಗ್ನವಾಗಿಹೋಗಿದೆಯೆಂದು, ಅದರಿಂದ ದೇವರ ನಿಜ ಭಾವನೆಯನ್ನು ಇಂದು ಪ್ರಜೆಗಳು ತಿಳಿಯುವುದಕ್ಕೆ ಅವಕಾಶವಿದೆಯೆಂದು ಹೇಳುತ್ತಿದ್ದೇನೆ. **ಮೊದಲು ಭಗವದ್ಗೀತೆ ಸಕ್ರಮವಾಗಿ ಹುಟ್ಟಿ, ನಂತರ ಸ್ವಲ್ಪ ಸಂಕರವಾಗಿಹೋಗಿ ಈ ದಿನ ತ್ರೈತ ಸಿದ್ಧಾಂತ ಭಗವದ್ಗೀತೆ ಮೂಲಕ ಪುನಃ ಸಕ್ರಮವಾಗಿ ಹೋಗಿದೆ.** ಈ ವಿಧವಾಗಿ ಭಗವದ್ಗೀತೆ ಹುಟ್ಟಿ ಬೆಳೆದರೂ, ಈ ದಿನ ಕೂಡಾ ಬ್ರಾಹ್ಮಣರು ವೇದಗಳನ್ನೇ ಭಗವದ್ಗೀತೆಗಿಂತ ದೊಡ್ಡದಾಗಿ ಹೇಳುತ್ತಿದ್ದಾರೆ.

**3) ಪ್ರಶ್ನೆ :– ಭಗವದ್ಗೀತೆ ಹುಟ್ಟನ್ನು, ಬೆಳವಣಿಗೆಯನ್ನು, ಅಕ್ರಮವಾದ ವಿಧಾನವನ್ನು, ಪುನಃ ಈಗ ಸಕ್ರಮವಾದ ವಿಧಾನವನ್ನು ತಿಳಿಸಿದ್ದೀರ. ಅಷ್ಟೇಅಲ್ಲದೆ ಭಗವದ್ಗೀತೆಗಿಂತ ವೇದಗಳು ಶ್ರೇಷ್ಠವಾದವೆಂದು ಹೇಳುವುದು ವಿಷಪೂರಿತವಾದ ಕುತಂತ್ರವೆಂದು ಹೇಳಿದ್ದೀರ. ಇಂದಿಗೂ ಬ್ರಾಹ್ಮಣರು ವೇದಗಳನ್ನೇ ದೊಡ್ಡದಾಗಿ ಹೇಳುತ್ತಿದ್ದರೂ ನೀವು ಬರೆದ ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿ ಭಗವದ್ಗೀತೆ ಮೇಲೆ ನಡೆದ ಕುತಂತ್ರವನ್ನು ತಿಳಿಸಿ ಕಲ್ಪಿತ ಶ್ಲೋಕಗಳನ್ನು ಪ್ರಕಟಿಸುವುದರಿಂದ ತಾವು ಬರೆದ ಭಗವದ್ಗೀತೆಯಿಂದ ಪ್ರಜೆಗಳು ಜ್ಞಾನವನ್ನು ಹೊಂದುತ್ತಿದ್ದಾರಾ?**

**ಉತ್ತರ :–** ನಾವು ಬರೆದ "**ತ್ರೈತ ಸಿದ್ಧಾಂತ ಭಗವದ್ಗೀತೆ**" ಮೂಲಕ ಬಹಳಜನ ದೈವಜ್ಞಾನವನ್ನು ಸಂಶಯರಹಿತವಾಗಿ ತಿಳಿದುಕೊಳ್ಳುತ್ತಿದ್ದಾರೆ. ಆದರೆ ತ್ರೈತ ಎಂದರೂ, ತ್ರೈತ ಸಿದ್ಧಾಂತ ಎಂದರೂ ಕ್ರೈಸ್ಥರಿಗೆ ಸಂಬಂಧಿಸಿದ ಬೈಬಲ್ ಬೋಧನೆಗಳಿಂದ ಕೂಡಿಕೊಂಡಿದೆಯೆಂದು ಕೆಲವರು ಬ್ರಾಹ್ಮಣರು ರಹಸ್ಯವಾಗಿ ಪ್ರಚಾರ ಮಾಡಿದ್ದಾರೆ. ಈ ದಿನ ಧರ್ಮರಕ್ಷಣೆ ಎಂದು ಹೆಸರು ಇಟ್ಟುಕೊಂಡು ಮತ ರಕ್ಷಣೆ ಮಾಡುವ ಹಿಂದೂ ನಾಯಕರನ್ನು, ಕೆಲವರು ಸ್ವಾಮೀಜಿಗಳನ್ನು ರೊಚ್ಚಿಗೆಬ್ಬಿಸಿ ನಾವು ಹಿಂದೂ ಮುಸುಗಿನಲ್ಲಿ ಕ್ರೈಸ್ಥವವನ್ನು ಪ್ರಚಾರ ಮಾಡುವ

ವರಾಗಿ ಚಿತ್ರೀಕರಿಸುವುದರಿಂದ ಸ್ವಲ್ಪಜನರನ್ನು ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಓದದಂತೆ ತಡೆದಿದ್ದಾರೆ. ಆದರೆ ಅವರನ್ನು ನಂಬದವರೆಲ್ಲರೂ ನನ್ನ ಭಗವದ್ಗೀತೆಯನ್ನು ಓದುವುದು ನಡೆದಿದೆ. ಹಾಗೆ ಓದಿದವರು ಯಾರಿಷ್ಟಕ್ಕವರು ಭಗವದ್ಗೀತೆ ಬಹಳ ದೊಡ್ಡದಾಗಿದೆಯೆಂದು ಪ್ರಚಾರ ಮಾಡುವುದರಿಂದ ಈ ದಿನ ಬಹಳಮಟ್ಟಿಗೆ ಹಿಂದೂಗಳು ಭಗವದ್ಗೀತೆಯನ್ನು ಓದಿದ್ದಾರೆ. ಅಷ್ಟೇಅಲ್ಲದೆ ನಾವು ಹೇಳುವ ಮತ ಸಾಮರಸ್ಯ ಬೋಧನೆಗಳನ್ನು ಕೇಳಿ ಬಹಳಜನ ಕ್ರೈಸ್ಥರು, ಮುಸ್ಲಿಮ್‌ರು ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಇಷ್ಟವಾಗಿ ಓದಿದ್ದಾರೆ. ಭಗವದ್ಗೀತೆಯಲ್ಲಿನ ಬೋಧನೆಗಳು, ಬೈಬಲ್‌ನಲ್ಲಿಯು, ಖುರ್‌ಆನ್‌ನಲ್ಲಿಯು ಇವೆಯೆಂದು ತೋರಿಸಿ, ಅವುಗಳ ವಿವರಗಳನ್ನು ಕೂಡಾ ಬರೆಯುವುದರಿಂದ ನನ್ನನ್ನು **ತ್ರಿಮತ ಏಕೈಕ ಗುರುವಾಗಿ** ಹೇಳಿಕೊಳ್ಳುವುದಲ್ಲದೆ **ದೇವರು ಒಬ್ಬನೇ, ದೇವರ ಜ್ಞಾನ ಒಂದೇ**ಯೆಂದು ಮೂರು ಮತದವರು ತಿಳಿದು ನಮ್ಮ ಹತ್ತಿರ ಮೂರು ಮತದವರು ಸಾಮರಸ್ಯವಾಗಿ ಇರುವುದು ಪ್ರತ್ಯಕ್ಷವಾಗಿ ನೋಡಬಹುದು. ನಮ್ಮ ಬೋಧನೆಗಳಲ್ಲಿ ತಿಳಿದ ಜ್ಞಾನದಿಂದ **ಮೂರು ಮತದವರು ಅವರ ಹಣೆಯಮೇಲೆ ಒಂದೇ ಚಿಹ್ನೆಯನ್ನು ಧರಿಸಿ,** ತಿರುಗುವುದನ್ನು ಯಾರಾದರೂ ನೋಡಬಹುದು. ಉಳಿದ ಎರಡು ಮತದವರು ನನ್ನನ್ನು, ನನ್ನ ಹಿರಿಮೆಯನ್ನು ಅರ್ಥ ಮಾಡಿಕೊಂಡು, ನನ್ನನ್ನು ಗೌರವಿಸುತ್ತಿರುವಾಗ, ಕೇವಲ ಹಿಂದೂಗಳಲ್ಲಿ ಕೆಲವರು ಬ್ರಾಹ್ಮಣರಿಂದ ಪ್ರೇರೇಪಿಸಲ್ಪಟ್ಟು ನನ್ನನ್ನು ವಿರೋಧಿಸುತ್ತಿದ್ದಾರೆ.

**4) ಪ್ರಶ್ನೆ :– ಸೃಷ್ಠಿ ಆದಿಯಲ್ಲಿ ಸೋಮಕಾಸುರನು ವೇದಗಳನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದರೆ ವಿಷ್ಣು ಮತ್ಸ್ಯಾವತಾರವನ್ನು ಧರಿಸಿ ಸೋಮಕಾಸುರನನ್ನು ಸಾಯಿಸಿ ವೇದಗಳನ್ನು ಕಾಪಾಡಿ ಸಮುದ್ರ ಗರ್ಭದಿಂದ ಹೊರಗೆ ತಂದು ದೇವತೆಗಳಿಗೆ ಕೊಟ್ಟಿದ್ದಾನೆ ಎಂದು ಹೇಳುತ್ತಿರುವರು. ಕೃತಯುಗದ ಮೊದಲಿನಲ್ಲಿಯೇ ವೇದಗಳು ಇದ್ದಂತೆ ತಿಳಿಯುತ್ತಿದೆ ಅಲ್ಲವೆ! ನೀವು ದ್ವಾಪರಯುಗದ ಕೊನೆಯಲ್ಲಿ ವ್ಯಾಸನು**

**ವೇದಗಳನ್ನು ಬರೆದಿದ್ದಾನೆ ಎಂದು ಹೇಳುತ್ತಿದ್ದೀರ. ವಾಸ್ತವವಾಗಿ ವೇದಗಳು ಕೃತಯುಗದಲ್ಲಿನವಾ? ಅಥವಾ ದ್ವಾಪರಯುಗದಲ್ಲಿನವಾ? ನಮ್ಮ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಕೋರುತ್ತಿದ್ದೇವೆ.**

**ಉತ್ತರ :–** ಕೃತಯುಗದ ಕೊನೆಯಿಂದ ನಾವು ಜ್ಞಾನಿಗಳು ಎಂದುಕೊಂಡವರು ಕೆಲವರು, ಅವರಿಗೆ ತಿಳಿದ ಸಮಾಚಾರವನ್ನು ವ್ಯಾಸಗಳ ರೂಪದಲ್ಲಿ ಬರೆದಿದ್ದಾರೆ. ಹಾಗೆ ಕೆಲವರು ಮಹರ್ಷಿಗಳು, ಋಷಿಗಳು, ಜ್ಞಾನಿಗಳು ಎನ್ನುವವರು ಬರೆಯುತ್ತಾ ಬಂದಿರುವ ವ್ಯಾಸಗಳು ದ್ವಾಪರಯುಗದ ಕೊನೆಗೆ ಹತ್ತುಸಾವಿರಕ್ಕು ಮೇಲಿವೆ. ಆ ಕಾಲದಲ್ಲಿ ಗ್ರಂಥಗಳು ಬರೆಯುವ ಸಾಮರ್ಥ್ಯ ಒಬ್ಬ ವ್ಯಾಸನಿಗೇ ಇತ್ತು. ಅಲ್ಲಿಯವರೆಗೂ ಇದ್ದ ಹತ್ತು ಸಾವಿರ ವ್ಯಾಸಗಳಲ್ಲಿ ಶೇ.ಹತ್ತರಷ್ಟು 1108 ವ್ಯಾಸಗಳನ್ನು ಗ್ರಂಥರೂಪವಾಗಿ ಬರೆದು, ವ್ಯಾಸಗಳನ್ನು ಬರೆದವನು ವ್ಯಾಸನು ಎಂದು ಹೆಸರು ಹೊಂದಿದ್ದಾನೆ. ವೇದಗಳು ಅಲ್ಲಿಯವರೆಗು ಗ್ರಂಥರೂಪದಲ್ಲಿ ಇಲ್ಲ. ಗ್ರಂಥರೂಪವಾದ ವೇದಗಳು ನಾಲ್ಕು ದ್ವಾಪರ ಯುಗದ ಕೊನೆಯಲ್ಲಿ ವ್ಯಾಸನ ಮುಖಾಂತರ ಹೊರಗೆ ಬಂದಿವೆ. ಅಲ್ಲಿಯವರೆಗೂ ಇಲ್ಲದ ವೇದಗಳನ್ನು ಪ್ರಚಾರ ಮಾಡಬೇಕೆಂಬ ಸ್ವಾರ್ಥ ಬುದ್ಧಿಯಿಂದ, ತನ್ನವರ ಮೇಲಿರುವ ಮೋಹಬುದ್ಧಿಯಿಂದ ಪುರಾಣಗಳನ್ನು ಬರೆದು ಅದರಲ್ಲಿ ಕಥೆಗಳ ಮೂಲಕ ವೇದಗಳಿಗೆ ಬೆಲೆ ತಂದಿದ್ದಾನೆ. ಆಗ ಆತನು ಬರೆದ ಪುರಾಣಗಳು ಹದಿನೆಂಟು. ಅದರಲ್ಲಿ 'ಭಾಗವತ' ಎನ್ನುವ ಪುರಾಣದಲ್ಲಿ ಒಂದು ಕಲ್ಪಿತ ಕಥೆಯಲ್ಲಿ ಹಿರಣ್ಯಾಕ್ಷನ ವಿಷಯವನ್ನು ಬರೆದಿದ್ದಾನೆ. ಹಿರಣ್ಯಾಕ್ಷನನ್ನು ಸಾಯಿಸಿರುವುದು ವಿಷ್ಣು ಎಂದು ಬರೆದಿದ್ದಾನೆ. ವೇದಗಳನ್ನು ಕಾಪಾಡಿದವನು ವಿಷ್ಣು ಎಂದು ಹೇಳಿದ್ದಾರೆ. ಭಾಗವತದಲ್ಲಿನ ಕಥೆಗಳೆಲ್ಲ ಕಲ್ಪಿತ ಕಥೆಗಳೇ. ಹದಿನೆಂಟು ಪುರಾಣಗಳು ಊಹಿಸಿ, ಕಲ್ಪಿಸಿ ಬರೆದಿರುವವೇ ಹೊರತು ವಾಸ್ತವಗಳಲ್ಲ. ಆದ್ದರಿಂದ ಭಗವದ್ಗೀತೆಯನ್ನು ವ್ಯಾಸನು ಬರೆದ ನಂತರ, ಭಗವದ್ಗೀತೆಯಲ್ಲಿನ ಜ್ಞಾನವನ್ನು ವ್ಯಾಸನು ತಿಳಿದ ನಂತರ ತಾನು ಬರೆದ ಪುರಾಣಗಳನ್ನು **"ಪುಕ್ಕಟೆ ಪುರಾಣಗಳೆಂದು"** ತಾನೇ

ಹೇಳಿದ್ದಾನೆ. ಅಸತ್ಯಗಳಾದರೆ ಪುಕ್ಕಡಿಯಿಂದ ಬಂದಿರುವವೆಂದೂ, ವಾಸ್ತವ ವಾದವುಗಳಾದರೆ ಹೊಕ್ಕಳ ಹತ್ತಿರದಿಂದ ಬಂದಿರುವವೆಂದು (ಹೊಕ್ಕಳು ಗ್ರಂಥಗಳೆಂದು) ಹೋಲಿಕೆಯಿಂದ ಹೇಳುತ್ತಿದ್ದರು. ಪುರಾಣಗಳನ್ನು ಬರೆದ ವ್ಯಾಸನೇ ಅವುಗಳನ್ನು ಅಸತ್ಯ ಪುರಾಣಗಳೆಂದು, ಪುಕ್ಕಟೆ ಪುರಾಣಗಳೆನ್ನುವುದು ನಡೆದಿದೆ. ಆದ್ದರಿಂದ ವಿಷ್ಣು, ಹಿರಣ್ಯಾಕ್ಷನು ಎಲ್ಲರೂ ಕಲ್ಪಿತವೆಂದು, ಕೃತಯುಗದಲ್ಲಿ ವೇದಗಳು ಇಲ್ಲವೆಂದು ತಿಳಿಯಬೇಕು.

**5) ಪ್ರಶ್ನೆ :– ವಿಷ್ಣು, ಈಶ್ವರ, ಬ್ರಹ್ಮಯೆನ್ನುವ ತ್ರಿಮೂರ್ತಿಗಳು ಇರುವ ಮಾತು ವಾಸ್ತವವೇ ಅಲ್ಲವೆ! ನೀವು ವಿಷ್ಣುವನ್ನೇ ಕಲ್ಪಿತವೆಂದು ಹೇಳುತ್ತಿದ್ದೀರ. ನೀವು ಯಾವ ಆಧಾರದಿಂದ ಹೇಳುತ್ತಿದ್ದೀರಾ? ನೀವು ರಾಮಾಯಣ ನಡೆದ ಚರಿತ್ರೆಯೆಂದು ಹೇಳುತ್ತಾ, ಅದರಲ್ಲಿ ಸೀತೆ ರಾವಣನ ಸಾಕು ಮಗಳೆಂದು ಹೇಳಿದ್ದೀರ. ರಾಮಾಯಣದಲ್ಲಿ ನಾವು ಕೇಳಿದವುಗಳನ್ನು ಸತ್ಯ ಅಲ್ಲವೆಂದಿದ್ದೀರ. ರಾವಣನು ಸೀತೆಯನ್ನು ತೆಗೆದುಕೊಂಡು ಹೋಗಿರುವುದು ವಾಸ್ತವವೇಯೆಂದು, ಆದರೆ ಸೀತೆಯನ್ನು ತನ್ನ ಮಗಳಾಗಿ ತೆಗೆದುಕೊಂಡುಹೋಗಿದ್ದಾನೆಂದು ಹೇಳಿದ್ದೀರ. ಇದೇ ವಿಷಯವನ್ನೇ ನೀವು ಯಾವ ಆಧಾರದಿಂದ ಬರೆದಿದ್ದೀರೆಂದು ಇತರರು ಕೂಡಾ ನಿಮ್ಮ ಭಕ್ತರನ್ನು ಪ್ರಶ್ನಿಸಿದ್ದಾರೆ. ನೀವು ಹೇಳಿರುವವು ಯಾವ ಆಧಾರದಿಂದ ಬರೆದಿದ್ದೀರೆಂದು ನಾವು ಕೂಡಾ ಕೇಳುತ್ತಿದ್ದೇವೆ? ಉತ್ತರ ಹೇಳಿರಿ.**

**ಉತ್ತರ :–** ನಾನು ಚಿಕ್ಕಂದಿನಿಂದ ಅಸಲು, ನಕಲೀ ಎಂದು ಎರಡು ಪದಗಳನ್ನು ಕೇಳುತ್ತಿದ್ದೇನೆ. ಅದನ್ನೇ ಇನ್ನೊಂದು ಭಾಷೆಯಲ್ಲಿ ಒರಿಜಿನಲ್, ಡೂಪ್ಲಿಕೇಟ್ ಎಂದು ಕೂಡಾ ಹೇಳುತ್ತಿರುತ್ತಾರೆ. ಒಂದು ಸಮಯದಲ್ಲಿ ನೂರು ರೂಪಾಯಿಗಳ ನೋಟನ್ನು ಬ್ಯಾಂಕಿನಲ್ಲಿ ನಕಲೀ ನೋಟೆಂದು ತೀರ್ಮಾನಿಸಿದ್ದಾರೆ. ಅದರ

ಪಕ್ಕದಲ್ಲಿಯೇ ಇರುವ ಮತ್ತೊಂದು ನೂರು ರೂಪಾಯಿಗಳ ನೋಟನ್ನು ಅಸಲು ನೋಟಾಗಿ ಹೇಳುತ್ತಿದ್ದಾರೆ. ಬ್ಯಾಂಕಿನವರಿಗೆ ಆ ಎರಡು ನೋಟುಗಳಲ್ಲಿ ಏನು ವ್ಯತ್ಯಾಸ ಕಾಣಿಸಿದೆಯೋ ನನಗೆ ತಿಳಿದಿಲ್ಲ. ನಾನು ನೋಡಿದರೆ ಎರಡು ನೋಟುಗಳೂ ಒಂದೇ ವಿಧವಾಗಿ ಕಾಣಿಸುತ್ತಿವೆ. ನನಗೆ ಎರಡೂ ಒಂದೇ ವಿಧವಾಗಿ ಇದ್ದರೂ, ಬ್ಯಾಂಕಿನವರು ಅದರಲ್ಲಿರುವ ಚಿಕ್ಕ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಆ ವ್ಯತ್ಯಾಸವನ್ನು ನಾನು ಗುರುತಿಸಲಾರದೆ ಹೋಗಿದ್ದೇನೆ. ಅದರ ಪ್ರಕಾರ ಹಣದ ವಿಷಯದಲ್ಲಿ ಬ್ಯಾಂಕಿನವರಿಗೆ ಇರುವ ಜಾಣತನ, ತಿಳುವಳಿಕೆಯಾಗಲಿ ನನಗೆ ಇಲ್ಲವೆಂದು ತಿಳಿದಿದೆ. ಅದೇ ವಿಧವಾಗಿ ದೈವಜ್ಞಾನ ವಿಷಯದಲ್ಲಿ ಕೂಡಾ **ಅಸಲು, ನಕಲಿ** ಇರುವುದು ಇದೆ. ಆಧ್ಯಾತ್ಮಿಕವನ್ನು ಜ್ಞಾನ ಧನಕ್ಕೆ ಹೋಲಿಸಿ ಹೇಳಬಹುದು. ಪ್ರಪಂಚ ಧನದಲ್ಲಿ ಅಸಲು ನಕಲಿ ಇದ್ದರೂ ಬ್ಯಾಂಕಿನವರು ಹೊರತುಪಡಿಸಿ ಉಳಿದ ಪ್ರಜೆಗಳು ಗ್ರಹಿಸದಂತೆ **'ಜ್ಞಾನ ಧನ'** ಎನ್ನುವ ಆಧ್ಯಾತ್ಮಿಕವನ್ನು ಪ್ರಜೆಗಳೆಲ್ಲರೂ ಯಾವುದು ಅಸಲೋ, ಯಾವುದು ನಕಲಿಯೋ ತಿಳಿಯದ ಸ್ಥಿತಿಯಲ್ಲಿದ್ದಾರೆ. ಪ್ರಸ್ತುತ ಕಾಲದಲ್ಲಿ ನಕಲಿ ಧನವನ್ನು ಅಸಲು ಧನವಾಗಿ ನಂಬಿ ಎಲ್ಲರೂ ಅದನ್ನೇ ಚಲಾವಣೆ ಮಾಡಿ ಕೊಳ್ಳುತ್ತಿದ್ದಾರೆ. ಪ್ರಪಂಚ ಧನದಲ್ಲಿ ಬ್ಯಾಂಕಿನವರು ಕೆಲವು ರಹಸ್ಯವಾಗಿರುವ ಗುರುತುಗಳನ್ನು ತೋರಿಸಿ ಇವು ಕಳ್ಳನೋಟುಗಳೆಂದು ಹೇಳಿದರೂ, ಆ ಗುರುತುಗಳನ್ನು ತಿಳಿಯಲಾರದವರು ಕಳ್ಳನೋಟುಗಳನ್ನೇ ಒಳ್ಳೆಯ ನೋಟುಗಳಾಗಿ ನಂಬುತ್ತಿದ್ದಾರೆ. ಕೊನೆಗೆ ಬ್ಯಾಂಕು ಹತ್ತಿರಕ್ಕೆ ಹೋಗುವಷ್ಟರಲ್ಲಿ, ಆ ಧನವನ್ನು ಬ್ಯಾಂಕಿನವರು ಒಳ್ಳೆಯದನ್ನಾಗಿ ಆಮೋದಿಸುವುದಿಲ್ಲ. ಅವರ ಹತ್ತಿರ ಅದನ್ನು ಜಮ ಮಾಡಿಕೊಳ್ಳುವುದಿಲ್ಲ. ಬ್ಯಾಂಕಿಗೆ ಹೋದ ಮನುಷ್ಯ ಹಿಂತಿರುಗಿ ಬರಬೇಕಾಗಿದ್ದೆ.

ಅದೇ ವಿಧವಾಗಿ ಜ್ಞಾನಧನ ಆಧ್ಯಾತ್ಮಿಕ ಅಲ್ಲದಿರುವುದು, ಆಧ್ಯಾತ್ಮಿಕ ವಾದುದು ಎರಡು ವಿಧಗಳು ಇದೆ. ಆಧ್ಯಾತ್ಮಿಕವಾಗಿರುವುದಾದರೆ ಆತ್ಮಗೆ ಸಂಬಂಧಿಸಿರುವುದು. ಆಧ್ಯಾತ್ಮಿಕ ಅಲ್ಲದಿರುವುದಾದರೆ ಆತ್ಮಕ್ಕೆ ಸಂಬಂಧಿಸಿರುವುದು

ಅಲ್ಲ. ಆಧ್ಯಾತ್ಮಿಕವಾಗಿರುವುದು ಒಳ್ಳೆಯ ನೋಟು ಆದಂತೆ ಒಳ್ಳೆಯ ಜ್ಞಾನ ಎಂದೂ, ಆಧ್ಯಾತ್ಮಿಕ ಅಲ್ಲದಿರುವುದು ಕಳ್ಳನೋಟು ಆದಂತೆ ಕಳ್ಳ ಜ್ಞಾನ ಎಂದು ಹೇಳಲ್ಪಡುತ್ತದೆ. ಅಸಲು, ನಕಲಿ ಎರಡು ನೋಟುಗಳು ಪ್ರಪಂಚ ಧನದಲ್ಲಿ ಇದ್ದಂತೆ ಅಸಲು ಆಧ್ಯಾತ್ಮಿಕ, ನಕಲಿ ಆಧ್ಯಾತ್ಮಿಕ ಎಂದು ಎರಡು ಇವೆಯೆಂದು ಹೇಳಬಹುದು. ಅಸಲು ಆಧ್ಯಾತ್ಮಿಕದಲ್ಲಿ **ಮೂರು ಆತ್ಮಗಳು** ಇರುವಾಗ, ಆಧ್ಯಾತ್ಮಿಕವಲ್ಲದ ನಕಲಿ ಆಧ್ಯಾತ್ಮಿಕದಲ್ಲಿ ಮೂವರು ಮೂರ್ತಿಗಳು ಇದ್ದಾರೆ. ನಿಜವಾದ ಆಧ್ಯಾತ್ಮಿಕದಲ್ಲಿ ಪರಮಾತ್ಮ, ಆತ್ಮ, ಜೀವಾತ್ಮಯೆಂದು ಮೂರು ಆತ್ಮಗಳು ಇರುವಾಗ, ಅಸತ್ಯ (ಸುಳ್ಳು) ಆಧ್ಯಾತ್ಮಿಕದಲ್ಲಿ ಅಂದರೇ ಆಧ್ಯಾತ್ಮಿಕ ಅಲ್ಲದಿರುವುದರಲ್ಲಿ ವಿಷ್ಣು, ಈಶ್ವರ, ಬ್ರಹ್ಮಯೆಂದು ಮೂವರು ದೇವತೆಗಳು ಇದ್ದಾರೆ. ನಿಜವಾದ ಆಧ್ಯಾತ್ಮಿಕದಲ್ಲಿ ಪರಮಾತ್ಮ ದೊಡ್ಡವನಾದಾಗ, ನಕಲಿ ಆಧ್ಯಾತ್ಮಿಕದಲ್ಲಿ ವಿಷ್ಣು ದೊಡ್ಡವನಾಗಿ ಇದ್ದಾನೆ. ಈ ದಿನ ಆಧ್ಯಾತ್ಮಿಕದಲ್ಲಿ ಇದ್ದೇವೆನ್ನುತ್ತಾ ಆಧ್ಯಾತ್ಮಿಕ ಅಲ್ಲದಿರುವಂತಹ ದೇವತೆಗಳನ್ನು ಎಲ್ಲರೂ ಆರಾಧಿಸುತ್ತಿದ್ದಾರೆ.

ಅಸಲಾದ ಆಧ್ಯಾತ್ಮಿಕದಲ್ಲಿ ದೊಡ್ಡದಾಗಿರುವ ಪರಮಾತ್ಮ ಯಾರಿಂದಲೂ ಸೃಷ್ಟಿಸಲ್ಪಡದವನು. ಅದೇ ನಿಜವಾದ ಆಧ್ಯಾತ್ಮಿಕ ಆದರೆ, ನಕಲಿ ಆಧ್ಯಾತ್ಮಿಕದಲ್ಲಿ ಹೇಳಲ್ಪಡುವ ದೊಡ್ಡ ದೇವರಾದ ವಿಷ್ಣುವು ಸೃಷ್ಟಿಸಲ್ಪಟ್ಟವನು. ಅದೇ ವಿಧವಾಗಿ ಸೃಷ್ಟಿಸಲ್ಪಡದ ಪರಮಾತ್ಮನನ್ನು ಬ್ರಹ್ಮಯೆಂದೂ, ಪರಮಾತ್ಮನನ್ನು ತಿಳಿಯುವ ವಿದ್ಯೆಯನ್ನು **ಬ್ರಹ್ಮವಿದ್ಯೆ** ಎಂದೂ ಹೇಳುತ್ತಿದ್ದಾರೆ. ಬ್ರಹ್ಮವಿದ್ಯೆಯಲ್ಲಿ ಆತ್ಮವನ್ನು ಆರಾಧಿಸುವುದು ಇರುತ್ತದೆ. ಸೃಷ್ಟಿಸಲ್ಪಟ್ಟ ವಿಷ್ಣುವನ್ನು ಕುರಿತು ತಿಳಿಯುವುದನ್ನು ಜ್ಞಾನ ಎಂದು ಕೆಲವರು ಹೇಳಿಕೊಂಡರೂ, ವಿಷ್ಣುವನ್ನು ಕುರಿತು ತಿಳಿಯುವುದು ಪುರಾಣಯೆಂದು ಹೇಳಬಹುದು. ಪುರಾಣದಲ್ಲಿ (ವೇದವಿದ್ಯೆಯಲ್ಲಿ) ವಿಷ್ಣುವನ್ನು ಆತನ ಕೆಳಗಿರುವ ದೇವತೆಗಳನ್ನು ಆರಾಧಿಸುವುದು ಇರುತ್ತದೆ. ಈ ದಿನ ಸ್ವಾಮೀಜಿಗಳು ಎಂದು ಹೇಳಿಕೊಳ್ಳುವವರು, ಬೋಧಕರೆಂದು ಹೇಳಿಕೊಳ್ಳುವ ಗುರುಗಳು, ಪೀಠಾಧಿಪತಿಗಳೆಂದು ಹೇಳಿಕೊಳ್ಳುವವರೆಲ್ಲರೂ ಸೇರಿ ಶೇ.99

ರಷ್ಟು ಜನ ವೇದವಿದ್ಯೆಯನ್ನು ಆಶ್ರಯಿಸಿ ದೇವತೆಗಳನ್ನು ಆರಾಧಿಸುವವರೇ ಇದ್ದಾರೆ. 'ನೂರಕ್ಕೆ ಒಬ್ಬನು' ಎಂದು ಈ ಪರಿಸ್ಥಿತಿಯಲ್ಲಿ ಹೇಳಲಾರೆವು ಆದರೆ, ಭಗವದ್ಗೀತೆಯಲ್ಲಿ ಹೇಳಿದಂತೆ 'ಸಾವಿರಕ್ಕೆ ಒಬ್ಬನು' ಕೂಡಾ ಆತ್ಮಜ್ಞಾನವನ್ನು ತಿಳಿಯುತ್ತಿದ್ದಾನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲವು ಸಾವಿರಾರು ಮಂದಿಗೊ, ಅಥವಾ ಕೆಲವು  ಲಕ್ಷಗಳ ಮಂದಿಗೊ ಅಸಲಾದ ಆಧ್ಯಾತ್ಮಿಕದ ಪ್ರಕಾರ ಪರಮಾತ್ಮನನ್ನು, ಆತ್ಮನನ್ನು ತಿಳಿಯಬೇಕೆನ್ನುವವರು ಅಪರೂಪವಾಗಿ ಇದ್ದಾರೆಂದು ಹೇಳಬಹುದು. ಕೆಲವು ಲಕ್ಷಜನರಿಗೆ ಅದೂ ಅಪರೂಪವಾಗಿ ಆತ್ಮಜ್ಞಾನವನ್ನು ತಿಳಿಯುವವರಿರುವಾಗ, ಉಳಿದವರೆಲ್ಲರೂ ನಕಲಿ ಆಧ್ಯಾತ್ಮಿಕದಲ್ಲಿ ಇದ್ದೂ ವೇದವಿದ್ಯೆ ಮೇಲೆಯೇ ಆಧಾರಪಟ್ಟು, ದೇವತೆಗಳನ್ನೇ ಆರಾಧಿಸುತ್ತಿದ್ದಾರೆ.

ಬ್ರಹ್ಮವಿದ್ಯೆ ಪ್ರಕಾರ ಆತ್ಮಜ್ಞಾನದಿಂದ ಕೂಡಿಕೊಂಡಿರುವುದೇ ಅಸಲಾದ ಆಧ್ಯಾತ್ಮಿಕ ಎಂದು ನಾವು ಮೊದಲಿನಿಂದ ಹೇಳುತ್ತಲೇ ಇದ್ದೇವೆ. ವೇದಗಳು, ವೇದಗಳನ್ನು ಪ್ರಚಾರ ಮಾಡುವ ಪುರಾಣಗಳು, ವೇದಗಳ ಪ್ರಕಾರ ದೊಡ್ಡದಾಗಿ ಹೇಳಲ್ಪಡುವ ವಿಷ್ಣು, ಈಶ್ವರ ಮೊದಲಾದ ದೇವತೆಗಳು ಕಲ್ಪಿತವೆಂದು ಹೇಳುತ್ತಲೇ ಇದ್ದೇವೆ. ದೇವತೆಗಳು ಸೃಷ್ಟಿಸಲ್ಪಟ್ಟವರೆಂದು, ಅವರನ್ನು ದೊಡ್ಡದಾಗಿ ಹೇಳುವುದು ಎಲ್ಲವೂ ಕಲ್ಪಿತವೆಂದು, ನಾನು ಭಗವದ್ಗೀತೆಯನ್ನು ಆಧಾರ ಮಾಡಿಕೊಂಡು ಹೇಳುತ್ತಿದ್ದೇನೆ. ಬ್ರಹ್ಮವಿದ್ಯೆಯನ್ನು ಆಶ್ರಯಿಸಿದ ನಾನು ಆತ್ಮವಾದಿ, ಉಳಿದ ಸ್ವಾಮಿಗಳು ವೇದವಿದ್ಯೆ ಆಶ್ರಯಿಸಿದವರಾಗಿ ದೇವತಾವಾದಿಗಳಾಗಿ ಇದ್ದಾರೆ. ಆತ್ಮವನ್ನು ಆರಾಧಿಸುವವರೇ ನಾನು ನಿಜವಾದ ಜ್ಞಾನಿಗಳೆಂದು ಅವರ ಕಡೆಯೇ ವಾದಿಸುತ್ತಿರುತ್ತೇನೆ. ಉಳಿದ ಸ್ವಾಮಿಗಳು ದೇವತೆಗಳನ್ನು ಆರಾಧಿಸುವವರೇ ನಿಜವಾದ ಜ್ಞಾನಿಗಳು ಎಂದು ಹೇಳುತ್ತಿದ್ದಾರೆ. ತ್ರೈತಾಯುಗದಲ್ಲಿನ ರಾವಣಬ್ರಹ್ಮನನ್ನು ಕುರಿತು ನಾನು ಕೆಲವು ಸತ್ಯಗಳನ್ನು ಹೇಳಿದ್ದೇನೆ. ಆದರೆ ನಾನು ಹೇಳಿದ ಮಾತುಗಳು ಕೆಲವರಿಗೆ ಜೀರ್ಣವಾಗದೆ ನಾನು ಆಧಾರ ರಹಿತವಾಗಿ ಮಾತನಾಡುತ್ತಿದ್ದೇನೆಂದು ಹೇಳುತ್ತಿದ್ದಾರೆ. ನನಗೆ ಹಾಗೆ ಮಾತ ನಾಡಬೇಕಾದ ಅಗತ್ಯವಿಲ್ಲ. ನಾನು ಏನು ಮಾತನಾಡಿದರೂ ಅದು

ಶಾಸ್ತ್ರಬದ್ಧತೆಯಿಂದಲೂ, ಹೇತುಬದ್ಧತೆಯಿಂದಲೂ ಕೂಡಿಕೊಂಡಿರುತ್ತದೆ. ನಾನು ಯಾರಿಗೂ ತಿಳಿಯದ ರಹಸ್ಯಗಳನ್ನು ಹೇಳಿದಾಗ ನನ್ನನ್ನು ಅದೇ ಕೆಲಸವಾಗಿ ವಿಮರ್ಶಿಸುವವರು ಯಾರಿಗೂ ತಿಳಿಯದಿರುವುದು ನೀವು ಹೇಗೆ ಹೇಳಿದ್ದೀರಾ? ಯಾವ ಆಧಾರದಿಂದ ಹೇಳಿದ್ದೀರೆಂದು ಕೇಳುತ್ತಿದ್ದಾರೆ.

**ಒಂದು ಹೊಸ ರಹಸ್ಯ ಹೇಳಿದಾಗ ಹೇಳಿದವನೇ ಅದಕ್ಕೆ ಆಧಾರ. ಹೇಳಲ್ಪಟ್ಟಿರುವುದು ರಹಸ್ಯವಾದಾಗ ಅದಕ್ಕೆ ಇನ್ನೊಂದು ಆಧಾರ ಎನ್ನುವುದು ಇರುವುದಿಲ್ಲ.** ಹಾಗೆ ಮೊದಲೇ ಅದು ಆಧಾರದಿಂದ ಕೂಡಿಕೊಂಡಿದ್ದರೆ ಹೇಳಲ್ಪಟ್ಟಿರುವುದು ರಹಸ್ಯವೇ ಅಲ್ಲ. ಮೊದಲು ಮಾರ್ಕೋನಿ ಎನ್ನುವಾತನು ರೇಡಿಯೋವನ್ನು ಕಂಡುಹಿಡಿದಿದ್ದಾನೆ. ಅಲ್ಲಿಯವರೆಗು ರೇಡಿಯೋ ಯಾರಿಗೂ ತಿಳಿದಿಲ್ಲ. ಆದರೆ ಮಾರ್ಕೋನಿ ಎನ್ನುವಾತನು ರೇಡಿಯೋವನ್ನು ಕುರಿತು ಯಾವ ಆಧಾರದಿಂದ ಹೇಳುತ್ತಿದ್ದಾನೆ. ಯಾವ ಆಧಾರದಿಂದ ಕಂಡು ಕೊಂಡಿದ್ದಾನೆಂದು ಪ್ರಶ್ನಿಸಿದರೆ ಅದು ತಿಳುವಳಿಕೆಯಿಲ್ಲದ ಪ್ರಶ್ನೆ ಆಗುತ್ತದೆ. ರೇಡಿಯೋವನ್ನು ಕುರಿತು ಮೊದಲೇ ಆಧಾರವಿದ್ದರೆ ಅದು ರಹಸ್ಯವಾದುದು ಅಲ್ಲ. ಅಲ್ಲಿಯವರೆಗು ಯಾರಿಗೂ ತಿಳಿಯದ ರೇಡಿಯೋವನ್ನು ತಯಾರಿ ಮಾಡಿದವನೇ ರೇಡಿಯೋಗೆ ಆಧಾರವೆಂದು ಹೇಳಬಹುದು. ಅಷ್ಟೇ ಹೊರತು ರೇಡಿಯೋಗೆ ಅದಕ್ಕುಮುನ್ನ ಆಧಾರವಿಲ್ಲ ಅಲ್ಲವೇ! ಕೃಷ್ಣನು ಭಗವದ್ಗೀತೆಯನ್ನು ಹೇಳಿದ್ದಾನೆ, ಅಲ್ಲಿಯವರೆಗೂ ತಿಳಿಯದ ಆತ್ಮಗಳ ವಿವರವನ್ನು ಕೃಷ್ಣನು ಹೇಳುವುದು ನಡೆದಿದೆ. ಆದರೆ ಕೃಷ್ಣನು ಯಾವ ಆಧಾರದಿಂದ ಆತ್ಮವಿದೆಯೆಂದು ಹೇಳಿದ್ದಾನೆ ಎಂದರೇ 'ಅದಕ್ಕು ಮುನ್ನ ತಿಳಿಯದಿರುವುದು ತಿಳಿಯಲ್ಪಟ್ಟಾಗ ಮೊದಲು ಹೇಳಿದವನೇ ಅದಕ್ಕೆ ಅಸಲಾದ ಆಧಾರ' ಎಂದು ಹೇಳಬಹುದು. ಏನನ್ನು ಕೇಳಬಹುದು, ಏನನ್ನು ಕೇಳಬಾರದೆಂಬ ಪರಿಜ್ಞಾನ ಇದ್ದಾಗಲೇ ಪ್ರಶ್ನಿಸಬಹುದು. ಹಾಗಲ್ಲದೆ ಅವಶ್ಯವಿಲ್ಲದ ಪ್ರಶ್ನೆ ಹಾಕಿದರೆ ಅದು ಸೊಪ್ಪೆದಂಟು ಪ್ರಶ್ನೆ ಆಗುತ್ತದೆ. 'ಕರು ಮೊಳುದ್ದಾ, ದಂಟು ಬಾರುದ್ದಾ' ಇದ್ದಾಗ ಕರು

ದಂಟನ್ನು ತಿಂದಿದೆಯೆಂದರೇ ಕರುವಿನ ಹಿಂದೆ ಹೊರಗೆ ಬರಲಿಲ್ಲವಲ್ಲಾ ಎಂದು ಕೇಳಿದಂತಿರುತ್ತದೆ. ಅದು ಸೊಪ್ಪೆದಂಟು ಪ್ರಶ್ನೆ ಎಂದು ಹೇಳಲಾಗುತ್ತದೆ. ಆದ್ದರಿಂದ ಕೇಳುವವನಿಗೆ ವಿಚಕ್ಷಣ ಮತ್ತು ವಿವೇಕವು ಇರಬೇಕೆಂದು ಹಿರಿಯರು ಹೇಳುತ್ತಿರುತ್ತಾರೆ.

ರಾವಣಬ್ರಹ್ಮ 99 ವರ್ಷಗಳ ವಯಸ್ಸಿನಲ್ಲಿ ಅರಣ್ಯದಲ್ಲಿರುವ ಸೀತೆಯನ್ನು ತೆಗೆದುಕೊಂಡು ಹೋಗಿರುವುದು ವಾಸ್ತವ. ಸೀತಾದೇವಿ ರಾವಣನು ಕರೆಯುತ್ತಲೇ ಬದಲಿ ಮಾತು ಹೇಳದಂತೆ ಆತನ ಹಿಂದೆ ಹೋಗಿರುವುದು ವಾಸ್ತವವೇ. ಸೀತೆಯನ್ನು ರಾವಣಬ್ರಹ್ಮ ಪುತ್ರಿಕಾ ವಾತ್ಸಲ್ಯದಿಂದ ಲಂಕಗೆ ತೆಗೆದುಕೊಂಡು ಹೋಗಿದ್ದಾನೆ. ಸ್ವಲ್ಪ ಎತ್ತರವಾಗಿದ್ದ ಪುಷ್ಪಕ ವಿಮಾನವನ್ನು ಸೀತೆ ಹತ್ತಲಾರಳೆಂದು ಸೀತೆ ಕಾಲು ಕೆಳಗಿರುವ ಭೂಮಿಯೊಂದಿಗೆ ಸಹಾ ಎತ್ತಿ ವಿಮಾನದಲ್ಲಿ ಇಟ್ಟಿದ್ದಾನೆಂದು ನಾವು ಹೇಳಿದ್ದೇವೆ. ಅದಕ್ಕೆ ಒಬ್ಬ ಬ್ರಾಹ್ಮಣನು 99 ವರ್ಷಗಳ ಮುದುಕನಾದ ರಾವಣನು ಭೂಮಿಯೊಂದಿಗೆ ಸಹಾ ಎತ್ತಿ ಇಟ್ಟಿದ್ದಾನೆಂದು ಬರೆದಿದ್ದಾರೆ ಅಲ್ಲವೆ! ಭೂಮಿಯೊಂದಿಗೆ ಸಹಾ ಎತ್ತಿದ ಬಲ ಹೊಂದಿದ ರಾವಣನಿಗೆ ಗಂಡಸುತನದಲ್ಲಿ ಕೂಡಾ ಬಲ ಇರುತ್ತದೆ ಅಲ್ಲವೇ! ಆಕೆಯನ್ನು ಕಾಮಗುಣದಿಂದಲೇ ಎತ್ತಿಕೊಂಡು ಹೋಗಿದ್ದಾನೆಂದು ವಾಲ್ಮೀಕಿ ರಾಮಾಯಣ ದಲ್ಲಿದೆ. ವಾಲ್ಮೀಕಿ ರಾಮಾಯಣ ಆಧಾರವಾಗಿ ಆಕೆಯನ್ನು ಕಾಮಗುಣದಿಂದಲೇ ಎತ್ತಿಕೊಂಡು ಹೋಗಿದ್ದಾನೆಂದು ಹೇಳುತ್ತಿದ್ದೇವೆ ಎಂದು ಅಂದಿದ್ದಾರೆ. ಅಷ್ಟೇ ಅಲ್ಲದೆ ನೀವು ಬರೆದಿರುವುದರಲ್ಲಿ 99 ವರ್ಷಗಳ ವಯಸ್ಸಿನಲ್ಲಿ ಭೂಮಿಯನ್ನು ಎತ್ತುವ ಬಲ ಇರುವಾಗ, ಸೀತೆಯನ್ನು ಅನುಭವಿಸಬೇಕೆಂಬ ಬಲ ಏಕೆ ಇರುವುದಿಲ್ಲ? ಎಂದು ಕೇಳುತ್ತಿದ್ದಾರೆ. ಶರೀರ ಬಲಕ್ಕು, ಗುಣ ಬಲಕ್ಕು ಮುಡಿಹಾಕಿ ಮಾತನಾಡುವುದು ತಿಳುವಳಿಕೆ ಇಲ್ಲದ ಮಾತಲ್ಲವೇ! ಎಂದು ಕೇಳುತ್ತಿದ್ದೇನೆ.

ಮುದುಕರಾಗಿದ್ದರೂ ಎಷ್ಟೋಜನ ಬಲವಾದ ಶರೀರ ಇರುವವರು ಇರಬಹುದು. ಬಲವಿದ್ದಷ್ಟು ಮಾತ್ರಕ್ಕೆ ಶರೀರದಲ್ಲಿ ಶೃಂಗಾರ ಸಾಮರ್ಥ್ಯ ಇದ್ದಂತೇನಾ? ಈ ಮಾತು ಕೇಳಿರುವುದು ಒಬ್ಬ ಟೀವಿ ಯಾಂಕರಾಗಿ ಕೆಲಸ

ಮಾಡುವ ಬ್ರಾಹ್ಮಣನು. ಈ ಪ್ರಶ್ನೆ ಕೇಳುವುದರಲ್ಲಿಯೇ ಅವರ ದುರ್ಬುದ್ಧಿ ಹೊರಬೀಳುತ್ತಿದೆ. ನಾವು ಹೇಳಿರುವುದೇ ನೀವು ಕೇಳಬೇಕು. ನಾವು ಹೇಳಿರುವುದೇ ಸತ್ಯ ಎಂದು ಹೇಳುತ್ತಾ ಪ್ರಜೆಗಳನ್ನು ತಪ್ಪು ದಾರಿ ಹಿಡಿಸುತ್ತಿದ್ದಾರೆ. ಅವರು ಹೇಳುವುದು ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ ವಿಷಯವನ್ನೇ ಹೇಳುತ್ತಿದ್ದಾರೆ. ಅರಣ್ಯದಲ್ಲಿ ನಿವಾಸಿಸುವ ವಾಲ್ಮೀಕಿಗೆ ಹೊರಗಿನ ಪ್ರಪಂಚದಲ್ಲಿ ಏನು ನಡೆದಿರುವುದು ತಿಳಿದಿಲ್ಲ. ಸೀತೆ ತನ್ನ ಆಶ್ರಮಕ್ಕೆ ಬಂದ ನಂತರ ರಾಮನ ವಿಷಯ ಸ್ವಲ್ಪ ಸೀತೆ ಮೂಲಕ ತಿಳಿದಿದೆ. ರಾಮನದ್ದು ತಪ್ಪೆಂದು ತಿಳಿದ ವಾಲ್ಮೀಕಿ ತಿಳಿದಿದೆ ಸೀತ, ರಾಮನ ಪುತ್ರರಾದ ಲವಕುಶ ಎಂಬ ಇಬ್ಬರಿಗು ರಾಮನು ತಮ್ಮ ತಂದೆಯೆನ್ನುವ ವಿಷಯ ತಿಳಿಯದಂತೆ ಬೆಳೆಸಿದ್ದಾರೆ. ರಾಮನು ಒಬ್ಬ ರಾಜ ಎಂದು ತಿಳಿದರೂ, ಆತನೇ ತಮ್ಮ ತಂದೆಯೆಂದು ತಿಳಿದಿಲ್ಲವೆನ್ನುವ ವಿಷಯ ರಾಮನು ಅಶ್ವಮೇಧಯಾಗ ಮಾಡಿದಾಗ, ರಾಮನ ಅಶ್ವವನ್ನು ಬಂಧಿಸಿದಾಗ, ಲವಕುಶರು ರಾಮನನ್ನು ಎದುರಿಸಿ ಮಾತನಾಡಿದಾಗ ನಮಗೆ ತಿಳಿದಿದೆ. ವಾಲ್ಮೀಕಿ ಮಹರ್ಷಿಗೆ ಸ್ವಲ್ಪ ಸತ್ಯ ಸೀತೆಯ ಮುಖಾಂತರ ತಿಳಿದರೂ, ಆ ವಿಷಯಗಳನ್ನು ರಾಮಾಯಣ ಗ್ರಂಥದಲ್ಲಿ ಬರೆಯದಂತೆ ತಾವು ಹೇಳಿದಂತೆ ಬಲವಂತ ಮಾಡಿ ವಾಲ್ಮೀಕಿ ಮೂಲಕ ಬರೆಯಿಸಿದವರು ಯಾರೋ ಹೊರಗಿನ ಪ್ರಪಂಚಕ್ಕೆ ತಿಳಿದಿಲ್ಲ. ಅದು ತಿಳಿಯಬೇಕಾದ ಅವಶ್ಯವೂ ಸಹ ಈಗ ನಮಗೆ ಇಲ್ಲ. ಆದರೂ ಆ ಕಾಲದಲ್ಲಿ ಪ್ರಪಂಚದಲ್ಲಿಯೇ ಗ್ರಂಥಗಳು ಬರೆಯುವ ಸಾಮರ್ಥ್ಯವಿರುವ ಕವಿ ವಾಲ್ಮೀಕಿ ಒಬ್ಬನೇ. ಅಷ್ಟೇ ಅಲ್ಲದೆ ಪ್ರಪಂಚಕ್ಕೆಲ್ಲದಕ್ಕೂ ಆದಿ ಕವಿ ವಾಲ್ಮೀಕಿ ಒಬ್ಬನೇ. ವಾಲ್ಮೀಕಿ ವಲ್ಮೀಕದಲ್ಲಿ (ಹುತ್ತದಲ್ಲಿ) ಸ್ವಲ್ಪ ಕಾಲ ತಪಸ್ಸು ಮಾಡಿದ್ದಾನೆ, ಆದ್ದರಿಂದ ಆತನಿಗೆ ವಾಲ್ಮೀಕಿ ಎನ್ನುವ ಹೆಸರು ಬಂದಿದೆ. ವಾಲ್ಮೀಕಿ ಬೋಯಕುಲದಲ್ಲಿ ಹುಟ್ಟಿದವನು.

ಬೋಯಕುಲದಲ್ಲಿ ಹುಟ್ಟಿದ ವಾಲ್ಮೀಕಿ ಹೊರತು ಆ ದಿನಗಳಲ್ಲಿ ಇತರ ಕವಿ ಎನ್ನುವವನು ಇಲ್ಲ. ಅಂತಹ ಸಂದರ್ಭದಲ್ಲಿ ರಾಮನ ಚರಿತ್ರೆಯನ್ನು ವಾಲ್ಮೀಕಿಯಿಂದ ಬರೆಯಿಸಿ, ರಾಮನ ತಪ್ಪುಗಳು ಹೊರಬೀಳದಂತೆ

ನೋಡಿದವನು ಆ ದಿನದ ವಿಶ್ವಾಮಿತ್ರನೆಂದು ಕೆಲವರಿಗೆ ತಿಳಿದಿದೆ. ತಾನು ಮದುವೆ ಮಾಡಿದರೆ ರಾಮನು ಸೀತೆ ಬಗ್ಗೆ ಅನುಚಿತವಾಗಿ ಪ್ರವರ್ತಿಸುವುದರಿಂದ, ಮದುವೆ ಮಾಡಿದ ತನಗೆ ಕೆಟ್ಟ ಹೆಸರು ಬರುತ್ತದೆಂದು ಆಲೋಚಿಸಿದ ವಿಶ್ವಾಮಿತ್ರನು, ವಾಲ್ಮೀಕಿಯಿಂದ ಒಪ್ಪಿಸಿ ಆಯನವನ್ನು ರಾಮನ ಕಡೆ ತಿರುಗಿಸಿದ ರಾಮಾಯಣದಲ್ಲಿ ಕೆಲವು ಅಸತ್ಯಗಳನ್ನು ಬರೆಯಿಸಿದ್ದಾನೆ. ರಾಮಾಯಣವನ್ನು ಕುರಿತು ಆಲೋಚಿಸಿದರೆ ರಾಮಾಯಣದಲ್ಲಿ ಕೆಲವು ಸತ್ಯಗಳು, ಮತ್ತೆ ಕೆಲವು ಅಸತ್ಯಗಳು ಇರುವಂತೆ ಬುದ್ಧಿ ಇರುವವರಿಗೆ ಯಾರಿಗಾದರೂ ತಿಳಿಯಬಲ್ಲದು. ರಾಮಾಯಣವನ್ನು ಬರೆದವನು ವಾಲ್ಮೀಕಿಯೆಂದು ಪ್ರಚಾರ ಮಾಡಿದವರು ಬ್ರಾಹ್ಮಣರೇ. ನಂತರ ವಾಲ್ಮೀಕಿ ಬೋಯವಾಡನಿ ಅಸೂಯಪಟ್ಟವರು ಬ್ರಾಹ್ಮಣರೇ. ನಂತರ ರಾಮಾಯಣವನ್ನು ಬರೆದವನು ವಾಲ್ಮೀಕಿ ಒಬ್ಬನೇ ಅಲ್ಲವೆಂದು ದ್ವಾಪರಯುಗ ದಲ್ಲಿ ವಿದ್ಯಾವಂತರಾದ ಬ್ರಾಹ್ಮಣರು ತಮ್ಮ ಹೆಸರಿನ ಮೇಲೆ ಪ್ರತ್ಯೇಕವಾಗಿ ರಾಮಾಯಣ ಚರಿತ್ರೆಗಳು ಬರೆದಿದ್ದಾರೆ. ಅಂತಹ ರಾಮಾಯಣಗಳು ಸುಮಾರು ಎರಡು ಹತ್ತುಗಳ ಸಂಖ್ಯೆಯಲ್ಲಿ ಇವೆ. ಇಪ್ಪತ್ತು ಗ್ರಂಥಗಳಾಗಿರುವ ರಾಮಾಯಣಗಳಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ಅವರ ಗುರುತುಗಳು ಬರುವಹಾಗೆ ಮಾಡಿಕೊಂಡಿದ್ದಾರೆ. ಅಂತಹ ರಾಮಾಯಣ ದಲ್ಲಿ ಜೈನ್ ಅಥವಾ ಜೈನಿ ರಾಮಾಯಣ ಎನ್ನುವ ಗ್ರಂಥದಲ್ಲಿ ಸೀತೆ, ರಾವಣಬ್ರಹ್ಮನ ಮಗಳು ಎಂದು ಬರೆದಿದ್ದಾರೆ. ಅದು ವಾಸ್ತವವಾದ ವಿಷಯವೇ, ಸೀತೆ ರಾವಣಬ್ರಹ್ಮನಿಗೆ ಸ್ವಂತ ಮಗಳಲ್ಲ, ಭೂಮಿಯಲ್ಲಿ ದೊರಕಿದ ಮಗಳು ಯೆಂದು ಸಹ ಬರೆದಿದ್ದಾರೆ.

ನನ್ನ ಲೆಕ್ಕದ ಪ್ರಕಾರ ಸೀತೆ ಭೂಮಿಯಲ್ಲಿ ದೊರಕಿದ ಮಗಳುಯೆಂದು ಬರೆದರೂ, ಅದರಲ್ಲಿ ಇತರರಿಗೆ ತಿಳಿಯದ ಒಂದು ಸತ್ಯ ಇದೆ. ಅದು ಏನೆಂದರೆ! ಸೀತೆ ಯಾರಿಗೆ ಹುಟ್ಟಿದ ಮಗಳೊ ಆ ದೇವರಿಗೇ ತಿಳಿಯಬೇಕೇ ಹೊರತು ಇತರರಿಗೆ ಯಾರಿಗೂ ತಿಳಿದಿಲ್ಲ. ಮನುಷ್ಯರು ಯಾರೂ ಭೂಮಿಯಲ್ಲಿ ಹುಟ್ಟುವುದಿಲ್ಲ. ಸೀತೆ ಮನುಷ್ಯರಿಗೆ ಹುಟ್ಟಿದ ಮಗಳೇ. ಆದರೇ ಆಕೆಯ ಹೆತ್ತ

ತಾಯಿ ಯಾರಾಗಿರುವುದು ತಿಳಿದಿಲ್ಲ ಆದರೆ, ಆಕೆಯ ತಾಯಿತಂದೆಯರು ಲಂಕದೊಳಗಿನವರೇ, ರಾವಣನಿದ್ದ ಪಟ್ಟಣದೊಳಗಿನವರೇಯೆಂದು ತಿಳಿಯುತ್ತಿದೆ. ಸೀತೆ ಪ್ರಸವಿಸಲ್ಪಟ್ಟ ಸಮಯದಲ್ಲಿ ಆಕೆ ಶರೀರದೊಳಗೆ ಜೀವಿಯು ಪ್ರವೇಶಿಸಲಿಲ್ಲ. ಮೊದಲ ಶ್ವಾಸ ಬಾರದಿರುವುದರಿಂದ ಆತ್ಮ, ಜೀವಾತ್ಮ ಶಿಶು ಶರೀರದಲ್ಲಿ ಪ್ರವೇಶಿಸದಿರುವುದರಿಂದ, ಮರಣಿಸಿದ ಶಿಶು ಹುಟ್ಟಿದೆಯೆಂದು ಅಂದುಕೊಂಡ ತಾಯಿ ತಂದೆಯರು ಶಿಶು ಶರೀರವನ್ನು ಊರಿನ ಪಕ್ಕದಲ್ಲಿ ಆಳವಾದ ಕುಣಿಯಲ್ಲಿ ಬಿಸಾಡಿ ಹೋಗಿದ್ದಾರೆ. ಹಾಗೆ ಬಿಸಾಡಿ ಹೋದ ಸ್ವಲ್ಪ ಸಮಯಕ್ಕೆ ಶಿಶುವಿಗೆ ಪ್ರಾಣ ಬಂದು ಅಳುತ್ತಿರುವಾಗ ನೋಡಿದ ಸೈನಿಕರು, ಆ ವಿಷಯವನ್ನು ನಿಮಿಷಗಳ ಅವಧಿಯಲ್ಲಿ ರಾವಣಬ್ರಹ್ಮಗೆ ತಿಳಿಸಿದಾಗ, ಲಂಕೆಗೆ ಚಕ್ರವರ್ತಿಯಾದ ರಾವಣನು ಕೂಡಲೇ ಹೋಗಿ ಆಳವಾದ ಕುಣಿಯಲ್ಲಿಂದ ಶಿಶುವನ್ನು ತಂದುಕೊಂಡು ಆಕೆಗೆ ಸೀತಾ ಎಂದು ಹೆಸರಿಟ್ಟು ಮಗಳಂತೆ ಪೋಷಿಸುತ್ತಿದ್ದನು. ಹಾಗೆ ನಾಲ್ಕು ವರ್ಷಗಳು ಕಳೆದ ನಂತರ ರಾವಣಬ್ರಹ್ಮನಿಗೆ ಶಿಷ್ಯನಾದ ಜನಕ ಮಹಾರಾಜ ತನಗೆ ಸಂತಾನ ಇಲ್ಲವೆಂದು, ಸೀತೆಯನ್ನು ತಾನು ಮಗಳಂತೆ ಸಾಕಿ ದೊಡ್ಡವಳನ್ನು ಮಾಡುತ್ತೇನೆಂದು ರಾವಣಬ್ರಹ್ಮನನ್ನು ಕೋರಿದಾಗ, ಆ ವಿಧವಾಗಿಯೇ ರಾವಣಬ್ರಹ್ಮ ಸೀತೆಯನ್ನು ಜನಕನಿಗೆ ದತ್ತಿಗೆ ಕೊಟ್ಟಿದ್ದಾನೆ. ಆಗಿನಿಂದ ಸೀತೆ ಜನಕ ಮಹಾರಾಜನ ಸಾಕು ಮಗಳಾಗಿ ಬೆಳೆದಿದ್ದಾಳೆ. ಸೀತೆ ದೊಡ್ಡವಳಾದ ನಂತರ ಮೊದಲು ರಾವಣಬ್ರಹ್ಮ ಹತ್ತಿರ ನಾಲ್ಕು ವರ್ಷಗಳು ಬೆಳೆದಿದ್ದೇನೆಂದು ತಿಳಿದುಕೊಂಡಿದ್ದಾಳೆ. ಅಷ್ಟೇಅಲ್ಲದೆ ತನ್ನ ತಂದೆಯಾದ ಜನಕನಿಗೆ ರಾವಣಬ್ರಹ್ಮ ಆಧ್ಯಾತ್ಮಿಕ ಗುರುವೆಂದು ಕೂಡಾ ಜನಕನ ಮುಖಾಂತರ ತಿಳಿದುಕೊಂಡಿದ್ದಳು. ಅಂದಿನಿಂದ ರಾವಣಬ್ರಹ್ಮ ದರ್ಶನಕ್ಕಾಗಿ ಕಾದಿದ್ದಳು. ವನವಾಸ ಸಮಯದಲ್ಲಿ ರಾವಣ ಬ್ರಹ್ಮ ತನ್ನ ವಿಮಾನದಲ್ಲಿ ಸೀತೆ ಹತ್ತಿರಕ್ಕೆ ಬರುವುದು ಸೀತೆಗೆ ಸಂತೋಷವಾಗಿದೆ. ಆತನ ದರ್ಶನದಿಂದ ಆಕೆ ಸಂತೋಷ ಪಡುವುದಲ್ಲದೆ ಕೈಗಳೆತ್ತಿ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡಿದ್ದಾಳೆ. ಅದಕ್ಕೆ ರಾವಣನು ಕೂಡಾ ಸಂತೋಷಿಸಿ ಸೀತೆಯನ್ನು ಲಂಕೆಗೆ ತೆಗೆದುಕೊಂಡು

ಹೋಗುತ್ತಿದ್ದೇನೆಂದು ಹೇಳಿ ತೆಗೆದುಕೊಂಡು ಹೋಗುವುದು ನಡೆದಿದೆ. ರಾಮನಿಗೆ ಹೇಳದೆಯೇ ತೆಗೆದುಕೊಂಡು ಹೋಗಬೇಕೆಂದು ಕೂಡಾ ಹೇಳಿ ಸೀತೆ ಒಪ್ಪಿಗೆಯಿಂದಲೇ ತೆಗೆದುಕೊಂಡು ಹೋಗುವುದು ನಡೆದಿದೆ. ನಡೆದ ವಾಸ್ತವವನ್ನು ವಕ್ರೀಕರಿಸಿ ವಾಲ್ಮೀಕಿ ರಾಮಾಯಣದಲ್ಲಿ ಬರೆಯಿಸುವುದು ನಡೆದಿದೆ.

ವಾಲ್ಮೀಕಿ ರಾಮಾಯಣದಲ್ಲಿ ಕೆಲವು ಸತ್ಯಗಳು ಕೆಲವು ಅಸತ್ಯಗಳು ಎರಡೂ ಇವೆ. ತ್ರೇತಾ ಯುಗದಲ್ಲಿಯೇ ಆರ್ಯರ ಪ್ರಭಾವ ಭಾರತದೇಶದಲ್ಲಿ ಇರುವುದರಿಂದ ರಾಮನಿಗೆ ಲಂಕ ಯುದ್ಧದಲ್ಲಿ ಉಪಯೋಗಪಟ್ಟು ಯುದ್ಧ ಮಾಡಿದ ಗಿರಿಜನರನ್ನು ಮನುಷ್ಯರಾಗಿ ನೋಡದೆ, ಮನುಷ್ಯರಿಗಿಂತ ಹೀನವಾಗಿ ಕೋತಿಗಳಾಗಿ ಚಿತ್ರೀಕರಿಸಿ ರಾಮಾಯಣದಲ್ಲಿ ಬರೆಯಿಸಿದ್ದಾರೆ. ಮನುಷ್ಯರನ್ನು ಕೋತಿಗಳೆಂದು ಹೇಳಿದ ರಾಮಾಯಣವನ್ನು ಕುರುಡರಹಾಗೆ ನಂಬುವಂತೆ ಬ್ರಾಹ್ಮಣರೇ ಮಾಡಿದ್ದಾರೆ. ಅದರಲ್ಲಿನ ಅಸತ್ಯಗಳನ್ನು ಎಲ್ಲಿಯಾದರೂ, ಯಾರಾದರೂ ಪ್ರಶ್ನಿಸಿದರೆ ಅವನನ್ನು ರಾಮನು ದೇವರು ಅಲ್ಲಯೆಂದಿದ್ದಾನೆಂದು ಆರೋಪಣೆ ಮಾಡಿ, ಎಲ್ಲರಿಗೂ ಶತ್ರುವಾಗುವಂತೆ ಮಾಡುತ್ತಿದ್ದಾರೆ. ಅದೇ ಉದ್ದೇಶದಿಂದಲೇ ನನ್ನನ್ನು ಕೂಡಾ ಪ್ರಜೆಗಳಿಗೆ ಶತ್ರುವಿನಂತೆ ತೋರಿಸಬೇಕೆಂದು ಮಾಡುವ ಪ್ರಯತ್ನದಲ್ಲಿ ರಾಮನು ದೇವರು ಅಲ್ಲವೆಂದಿದ್ದೇನೆಂದು ನನ್ನನ್ನು ದುಷ್ಪ್ರಚಾರ ಕೂಡಾ ಮಾಡಿದ್ದಾರೆ. ರಾಮನು ದೇವರೋ ಅಲ್ಲವೋ ನನಗೆ ತಿಳಿದಿಲ್ಲ ಆದರೆ ನಾನು ಅಸಲು ಆಧ್ಯಾತ್ಮಿಕವನ್ನು ಬೋಧಿಸುತ್ತಿದ್ದೇನೆ. ನಕಲಿ ಆಧ್ಯಾತ್ಮಿಕವನ್ನು ಬೋಧಿಸುವವರೆಲ್ಲರೂ ಕಾಣಿಸುವ ರಾಮನನ್ನೇ ಅಲ್ಲದೆ, ಕಾಣಿಸದ ದೇವತೆಗಳನ್ನು ಕೂಡಾ ದೇವರಾಗಿ ಚಿತ್ರಿಸಿ ತೋರಿಸುತ್ತಿದ್ದಾರೆ. ದೇವರು ಮನುಷ್ಯನಾಗಿ ಬಂದರೂ ಅಸಲಾದ ಆಧ್ಯಾತ್ಮಿಕದ ಪ್ರಕಾರ ಆತನನ್ನು ದೇವರು ಎಂದು ಹೇಳಬಾರದು. ದೇವರ ಅವತಾರವಾದ ಮನುಷ್ಯನನ್ನು **'ಭಗವಂತ'** ಎಂದು ಹೇಳಬೇಕು. ಅಷ್ಟೇ ಹೊರತು ಯಾವ ಮನುಷ್ಯನನ್ನು ದೇವರೆಂಬ ಹೆಸರಿನಿಂದ ಹೇಳಬಾರದು. ಮನುಷ್ಯನನ್ನು ದೇವರು ಅನ್ನಬಾರದೆಂದು, ದೇವರೇ

ಮನುಷ್ಯನಾಗಿ ಬಂದರೂ ಆತನನ್ನು ಭಗವಂತನೆನ್ನಬೇಕೆನ್ನುವುದು ಆಧ್ಯಾತ್ಮಿಕ ಸಿದ್ಧಾಂತ, ಆ ಸಿದ್ಧಾಂತವನ್ನು ನಾವು ಹೇಳಿದ್ದೇವೆ ಹೊರತು ಪ್ರತ್ಯೇಕಿಸಿ ರಾಮನನ್ನು ಕುರಿತು ಹೇಳಲಿಲ್ಲ.

ವೇದವಾದವು ಅಸಲಾದ ಆಧ್ಯಾತ್ಮಿಕವನ್ನು ಸೂಚಿಸುವುದಿಲ್ಲವೆಂದು, ವೇದವಾದಿಗಳು ಸುಖಗಳನ್ನು ಸ್ವರ್ಗವನ್ನು ಕುರಿತು ಹೇಳುತ್ತಿರುತ್ತಾರೆ ಆದರೆ, ಮೋಕ್ಷವನ್ನು ಕುರಿತು ಅಲ್ಲವೆಂದು, ಅಸಲಾದ ಆಧ್ಯಾತ್ಮಿಕವು ತಿಳಿಯಬೇಕೆಂದರೇ ಗುಣ ವಿಷಯಗಳೊಂದಿಗೆ ಕೂಡಿಕೊಂಡ ವೇದಗಳನ್ನು ವರ್ಜಿಸಬೇಕೆಂದು (ಬಿಟ್ಟುಹಾಕಬೇಕೆಂದು) ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿ ವರಸೆಯಾಗಿ 41, 42, 43, 44, 45, 46ನೇ ಶ್ಲೋಕಗಳಲ್ಲಿ ಹೇಳಿದ್ದಾರೆ ನೋಡಿರಿ.

**ಶ್ಲೋ॥ 42. ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದ ನ್ತ್ಯವಿಪಶ್ಚಿತಃ।**
**ವೇದವಾದರತಾಃ ಪಾರ್ಥ! ನಾನ್ಯ ದಸ್ತೀತಿ ವಾದಿನಃ ॥**

**ವಿವರ :–** ಸ್ವರ್ಗಕ್ಕೆ ಸಮಾನವಾದ ಸೌಖ್ಯವು ಇಲ್ಲವೆಂದು ವೇದಗಳನ್ನು ತಿಳಿದವರು, ವೇದವನ್ನು ತಿಳಿಸುವ ವೇದವಾದಿಗಳು ಹೇಳುತ್ತಿರುತ್ತಾರೆ. ಅಂತವರು ಜ್ಞಾನ ಇಲ್ಲದವರಾಗಿ ಪುಷ್ಪಗಳಲ್ಲಿನ ಜೇನಿನಂತೆ ಸಿಹಿಯಾದ ಮಾತುಗಳು ಹೇಳುತ್ತಿರುತ್ತಾರೆ.

**ಶ್ಲೋ 43. ಕಾಮಾತ್ಮಾನ ಸ್ವರ್ಗ ಪರಾ ಜನ್ಮ ಕರ್ಮಫಲ ಪ್ರದಾಮ್।**
**ಕ್ರಿಯಾವಿಶೇಷ ಬಹುಳಾಂ ಭೋಗೈಶ್ವರ್ಯಗತಿಂ ಪ್ರತಿ ॥**

**ವಿವರ :–** ಸ್ವರ್ಗ ಸುಖಗಳಲ್ಲಿ ಆಸೆ ಉಂಟಾದ ವೇದಗಳನ್ನು ಮಾತನಾಡುವವರ, ಬೋಧಿಸುವವರ ಮಾತುಗಳು ಜನ್ಮ ಕರ್ಮಗಳನ್ನು ಉಂಟುಮಾಡುವವು, ಅನೇಕ ಕಾರ್ಯಗಳನ್ನು ಮಾಡಿಸುವವು, ಸುಖಭೋಗಗಳನ್ನು ಕೊಡುವ ವಾಗಿರುತ್ತವೆ.

**ಶ್ಲೋ 44. ಭೋಗೈಶ್ವರ್ಯ ಪ್ರಸಕ್ತಾನಾಂ ತಯಾ ಪಹೃತ ಚೇತಸಾಮ್ ।**
**ವ್ಯವಸಾಯಾತ್ಮಿಕಾ ಬುದ್ಧಿ ಸ್ಸಮಾಧೌನ ವಿಧೀಯತೇ॥**

**ವಿವರ :–** ಅಂತಹ ಕೋರಿಕೆಗಳಿಂದ ತುಂಬಿದ ಮನಸ್ಸಿರುವವರು ಸುಖವನ್ನೇ ಕೋರಿಕೊಳ್ಳುವ ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಅವರ ಮನಸ್ಸಿಗೆ ಎಂದಿಗೂ ಆತ್ಮವನ್ನು ತಿಳಿಯುವ ಜ್ಞಾನ ರುಚಿಸುವುದಿಲ್ಲ. ಅವರಿಗೆ ವೇದಗಳೇ ಜ್ಞಾನವಾಗಿ ಕಾಣಿಸುತ್ತಿರುತ್ತವೆ.

**ಶ್ಲೋ 45. ತ್ರೈಗುಣ್ಯ ವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ! ।**
**ನಿರ್ದ್ವಂದ್ವೋ ನಿತ್ಯ ಸತ್ತ್ವಸ್ಥೋ ನಿರ್ಯೋಗ ಕ್ಷೇಮ ಆತ್ಮವಾನ್ ॥**

**ವಿವರ :–** ವೇದಗಳೆಂದರೇ ಮೂರು ಗುಣಗಳ ವಿಷಯಗಳೆಂದು ತಿಳಿಯಿರಿ ಮೂರು ಗುಣ ವಿಷಯಗಳಾದ ವೇದಗಳು ಸೂಚಿಸುವ ದ್ವಂದ್ವಗಳಾದ ಸುಖ ದುಃಖ, ಲಾಭ ನಷ್ಟಗಳನ್ನು ಬಿಟ್ಟಿರಬೇಕು.

ಈ ವಿಧವಾಗಿ ನಾಲ್ಕು ಶ್ಲೋಕಗಳಲ್ಲಿ ವೇದಗಳನ್ನು ಬೋಧಿಸುವವರ ವಿಷಯವನ್ನು ಭಗವಂತನು ಹೇಳಿದ್ದಾನೆ. ವೇದಗಳಿಂದ ಸುಖಗಳ ಆಸೆ ಹೊರತು ಏನು ಇಲ್ಲವೆಂದು ಹೇಳಿದ್ದಾರೆ. ವೇದಗಳಿಂದ ಮನುಷ್ಯ ಆತ್ಮಜ್ಞಾನವನ್ನು ಯಾವಮಾತ್ರ ತಿಳಿಯಲಾರನೆಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ವೇದಗಳು ಅನೇಕ ಗುಣವಿಷಯಗಳನ್ನು ಪ್ರೇರೇಪಿಸಿ ಅವುಗಳ ಕಾರ್ಯಗಳನ್ನೇ ಮಾಡುವಂತೆ ಮಾಡುತ್ತವೆಂದು ಕೂಡಾ ಹೇಳಿದ್ದಾನೆ. ನಂತರ ಕೊನೆಯಲ್ಲಿ 46ನೇ ಶ್ಲೋಕದಲ್ಲಿ ಈ ವಿಧವಾಗಿ ಹೇಳಿದ್ದಾರೆ.

**46ನೇ ಶ್ಲೋ॥ ಯಾವಾನರ್ಥ ಉದಾಪಾನೇ ಸರ್ವತ ಸ್ಸಂಪ್ಲುತೋದಕೇ।**
**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥**

**ಭಾವಾರ್ಥ :** ಸಮೃದ್ಧಿಯಾಗಿರುವ ಕೆರೆಯಲ್ಲಿನ ನೀರನ್ನು ಮನುಷ್ಯ ಅವಶ್ಯಕತೆಗೆ

ತಕ್ಕ ರೀತಿಯಲ್ಲಿ ಬಳಸಿಕೊಳ್ಳುವಂತೆ, ವೇದಗಳಲ್ಲಿನ ಸರ್ವವಿಷಯಗಳಲ್ಲಿಯೂ ಜ್ಞಾನಿಯಾದ ಮನುಷ್ಯ ತನಗೆ ಬೇಕಾಗಿರುವುದನ್ನು ಮಾತ್ರ ಅಗತ್ಯಕ್ಕೆ ತಕ್ಕಂತೆ ತೆಗೆದುಕೊಳ್ಳುತ್ತಾನೆ.

ಇಲ್ಲಿ ಈ ಶ್ಲೋಕದಲ್ಲಿ ಪ್ರಪಂಚದಲ್ಲಿ ವ್ಯವಹರಿಸುವ ಮನುಷ್ಯ, ದೊಡ್ಡ ಕೆರೆಯಿಂದ ತನಗೆ ಅಗತ್ಯವಿರುವ ಸ್ವಲ್ಪಮಟ್ಟಿನ ನೀರನ್ನು ತೆಗೆದುಕೊಂಡು ಉಪಯೋಗಿಸಿಕೊಂಡಂತೆ, ಅನೇಕ ವಿಷಯಗಳಿಂದ ತುಂಬಿದ ವೇದಗಳಿಂದ ತನಗೆ ಅಗತ್ಯವಾದ ವಿಷಯವನ್ನು ಮಾತ್ರ ಸ್ವೀಕರಿಸುತ್ತಾನೆ. ಕೆರೆಯಲ್ಲಿನ ನೀರನ್ನೆಲ್ಲಾ ಮನುಷ್ಯ ಬಳಸಿಕೊಂಡಂತೆ, ಜ್ಞಾನಿಯಾದವನು ವೇದಗಳ ವಿಷಯಗಳೆಲ್ಲವನ್ನು ನೋಡದೆ (ತೆಗೆದುಕೊಳ್ಳದೆ) ತನಗೆ ಪ್ರಪಂಚದಲ್ಲಿ ಉಪಯೋಗಪಡುವ ಸ್ವಲ್ಪಮಟ್ಟಿನ ವಿಷಯವನ್ನು ಸ್ವೀಕರಿಸುತ್ತಾನೆ. ವೇದಗಳ ಬಳಿ ಜಾಣ್ಮೆಯಿಂದ ಪ್ರವರ್ತಿಸಿ ಅಜ್ಞಾನವನ್ನುಂಟುಮಾಡುವವುಗಳನ್ನು ಬಿಟ್ಟು ಆಧ್ಯಾತ್ಮಿಕವನ್ನುಂಟುಮಾಡುವ ವೇದಾಂತದೊಳಗೆ ಹೋಗುತ್ತಾನೆ. ವೇದಗಳ ಹಂತದಲ್ಲಿ ಅಂದರೇ ಮೂರು ಗುಣಗಳ ನಂತರ ಇರುವ ಆತ್ಮ ನಿಲಯವಾದ ಆತ್ಮಜ್ಞಾನವನ್ನು ತಿಳಿಸುವುದು ಎಂದು ಅರ್ಥ.

ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ವೇದಗಳನ್ನು ಕುರಿತು ದೇವರು (ಭಗವಂತನು) ಹೇಳಿದ ವಿಧಾನವನ್ನು ಸಾಂಖ್ಯಯೋಗ ಎನ್ನುವ ಅಧ್ಯಾಯದಲ್ಲಿ ವರಸೆ ಕ್ರಮದಲ್ಲಿ ಐದು ಶ್ಲೋಕಗಳಲ್ಲಿ ನೋಡಿದ್ದೇವೆ ಅಲ್ಲವೆ! ವೇದಗಳಿಂದ ಜ್ಞಾನ ಉಂಟಾಗುವುದಿಲ್ಲ ಎಂದು ಹೇಳಿದ್ದರೂ, ದೇವರು ಹೇಳಿದ ಮಾತಿಗೆ ವಿರುದ್ಧವಾಗಿ ಇಂದಿಗೂ ವೇದಗಳನ್ನು ಬಿಡದಂತಿರುವ ಬ್ರಾಹ್ಮಣರು, ನಮ್ಮಂತವರು ವೇದಗಳನ್ನು ಅಲ್ಲಗಳೆದು ಆತ್ಮವಿದ್ಯೆಯನ್ನು ಹೇಳಿದರೆ, ಹಾಗೆ ಹೇಳುವವರು ಹಿಂದೂಗಳು ಅಲ್ಲವೆಂದು, ಹಿಂದೂಗಳಿಗೆ ವಿರುದ್ಧವಾಗಿ ಬೋಧಿಸುವ ಅನ್ಯಮತ ಪ್ರಚಾರಕರೆಂದು ಆರೋಪಿಸುತ್ತಾ ಹಿಂದೂಗಳಲ್ಲಿನ ಸ್ವಲ್ಪ ಜನರನ್ನು ಪ್ರೇರೇಪಿಸಿ ನಮ್ಮಂತಹ ದೈವಜ್ಞಾನವನ್ನು, ಆಧ್ಯಾತ್ಮಿಕವನ್ನು

ಬೋಧಿಸುವವರ ಮೇಲೆ ಕಳಿಸಿ ದಾಳಿಗಳು ಮಾಡಿಸುತ್ತಿದ್ದಾರೆ. ಅಂತಹ ಬ್ರಾಹ್ಮಣರ ಬಲೆಯಲ್ಲಿ ಬಿದ್ದವರು ಹಿಂದೂ ಧರ್ಮಗಳನ್ನು ರಕ್ಷಿಸುವವರಾಗಿ ಹೇಳಿಕೊಳ್ಳುವಂತೆ ಜಾಣ್ಮೆಯಿಂದ ಬ್ರಾಹ್ಮಣರೇ ತಯಾರಿ ಮಾಡಿದ್ದಾರೆ. ಈ ದಿನ ಹಿಂದೂ ಧರ್ಮರಕ್ಷಣೆ ಎಂಬ ಹೆಸರಿನಿಂದ ಯಾವ ಸಂಘಗಳು ತಯಾರಾದರೂ ಅವುಗಳ ಹಿಂದೆ ಮೂಲಾಧಾರವಾಗಿ ಬ್ರಾಹ್ಮಣರೇ ಇದ್ದಾರೆ. ಬ್ರಾಹ್ಮಣರು ಹಿಂದೂ ಸಮಾಜದವರೆಲ್ಲರನ್ನು ತಮ್ಮ ಕೈ ಕೆಳಗೆ ಇಟ್ಟುಕೊಳ್ಳುವ ನಿಮಿತ್ತ ಅನೇಕ ಹೆಸರುಗಳಿರುವ ಹಿಂದೂ ಸಂಸ್ಥೆಗಳನ್ನು ತಯಾರುಮಾಡಿ, ಜ್ಞಾನ ತಿಳಿದ ಗುರುಗಳ ಮೇಲೆ, ವೇದಗಳಿಗೆ ವಿರುದ್ಧವಾಗಿ ಬೋಧಿಸುವ ಆಧ್ಯಾತ್ಮಿಕ ವಾದಿಗಳ ಮೇಲೆ ಹುರಿದುಂಬಿಸುತ್ತಾ, ಹಿಂದೂಗಳಿಂದಲೇ ಹಿಂದೂ ಗುರುಗಳನ್ನು ಅಡಗಿಸುತ್ತಾ ಅವರ ದಾರಿಗೆ ಅಡ್ಡ ಇಲ್ಲದಂತೆ ಮಾಡಿಕೊಳ್ಳುತ್ತಿದ್ದಾರೆ. ಅಂತಹವರ ಪ್ರಯತ್ನದಲ್ಲಿ ಭಾಗವಾಗಿ ಹೈದರಾಬಾದ್‌ನಲ್ಲಿ ದಿಲ್‌ಸುಖ್ ನಗರದಲ್ಲಿರುವ ನಮ್ಮ ಭಕ್ತರ ಮೇಲೆ, ನೀವು ಅನ್ಯಮತ ಪ್ರಚಾರಕರೆಂದು ಧೀರಜ್‌ರೆಡ್ಡಿ ಎಂಬ ವ್ಯಕ್ತಿ ಆತನ ಗುಂಪಿನೊಡನೆ ಬಂದು ದಾಳಿಮಾಡಿ ಹೋಗಿದ್ದಾನೆ. ಆತನ ಪರಿಚಯ ಏನೋ ತಿಳಿಯದ ನಾವು ಆತನು ಯಾರು ಎಂದು ವಿಚಾರಿಸಿದಾಗ, ತಪ್ಪು ಆರೋಪಣೆಗಳಿಂದ ಏಕೆ ದಾಳಿ ಮಾಡಿದ್ದಾನೆ ಎಂದು ತಿಳಿದಾಗ, ಆತನು ಹಿಂದೂ ಧರ್ಮರಕ್ಷಣೆ ಮಾಡುವ ಒಂದು ಸಂಘದಲ್ಲಿ ಕೆಲಸ ಮಾಡುತ್ತಿರುವ ಒಬ್ಬ ನಾಯಕನು ಎಂದು ತಿಳಿದಿದೆ. ದಾಳಿ ಮಾಡಿದವನು ರೆಡ್ಡಿನೇ (ಧೀರಜ್ ರೆಡ್ಡಿ), ದಾಳಿ ಮಾಡಿರುವುದು ರೆಡ್ಡಿ ಮೇಲೆಯೇ (ಭಾಸ್ಕರ್‌ರೆಡ್ಡಿ ಮೇಲೆ). ಒಬ್ಬ ರೆಡ್ಡಿ ಇನ್ನೊಬ್ಬ ರೆಡ್ಡಿಯನ್ನು ಹೊಡೆದಿದ್ದಾನೆಂದರೇ ರೆಡ್ಡಿ ಬೆರಳಿನಿಂದ ರೆಡ್ಡಿ ಕಣ್ಣನ್ನು ತಿವಿದಂತಿದೆ. ಹಾಗೆ ಒಬ್ಬ ರೆಡ್ಡಿ ಇನ್ನೊಬ್ಬ ರೆಡ್ಡಿಯನ್ನು ಅನ್ಯಮತ ಪ್ರಚಾರವೆನ್ನುವ ನೆಪದಿಂದ ದಾಳಿಮಾಡುವುದರ ಹಿಂದೆ ವೇದವಾದಿಗಳಾದ ಬ್ರಾಹ್ಮಣರ ಹಸ್ತವಿದೆಯೆಂದು ನಾವು ಗ್ರಹಿಸಿದ್ದೇವೆ. ಈ ವಿಧವಾಗಿ ವೇದಗಳನ್ನು ಅಲ್ಲಗಳೆದು ಆಧ್ಯಾತ್ಮಿಕದ ಕಡೆ ಹೋಗುವವನು ಹಿಂದೂವೇ ಆಗಿದ್ದರೂ ಆತನನ್ನು ಹಿಂದೂವಿನಿಂದಲೇ ವೇದಿಸುತ್ತಾ, ಭೌತಿಕ ದಾಳಿಗಳು ಮಾಡುತ್ತಾ, ಅವರ

ಕೈಗೆ ಮಣ್ಣು ಅಂಟದಂತೆ, ಅವರ ಹೆಸರು ಹೊರಗೆ ಬರದಂತೆ ಕೆಲವರು ಬ್ರಾಹ್ಮಣರು ಪ್ರವರ್ತಿಸುತ್ತಿರುತ್ತಾರೆ. ಇದೇ ವಿಷಯವನ್ನೇ (10 ಟೀವಿ) ಛಾನಲ್‌ನಲ್ಲಿ ದಿನಾಂಕ 28.12.2017 ರಾತ್ರಿ 8.00 ಗಂಟೆಗಳ ಸಮಯದಲ್ಲಿ **"ಮಲ್ಲನ್ನ ಮುಚ್ಚಟ್ಲು"** ಎನ್ನುವ ಕಾರ್ಯಕ್ರಮದಲ್ಲಿ ಹೇಳಿದ ವಿಷಯವನ್ನು ನೋಡೋಣ.




## "ಮಲ್ಲನ್ನ ಮುಚ್ಚಟ್ಲು"

(ದಿನಾಂಕ :28.12.2017–ರಾತ್ರಿ 8.00 ಗಂಟೆಗಳಿಗೆ)

**ಯಾಂಕರ್ :–** ಮನುಧರ್ಮಶಾಸ್ತ್ರವನ್ನು ಕುರಿತು ಹೇಳಿದ್ದೇನಲ್ವಾ! ನಮ್ಮ ದೇಶದಲ್ಲಿ ಕುಲಗಳನ್ನು ತಯಾರಿ ಮಾಡಿದ ಪವಿತ್ರ ಗ್ರಂಥವನ್ನು ಕುರಿತು, ಅಗೋ ಅದನ್ನು ಕುರಿತು ಪಂಚಾಯಿತಿ ಜೋರಾಗಿಯೇ ಆಗುತ್ತಾಯಿದೆ ತೆಲಂಗಾಣದಲ್ಲಿ. ಮನುಷ್ಯನನ್ನು ಮನುಷ್ಯನಾಗಿ ಗುರುತಿಸಲಾರದ ಶಾಸ್ತ್ರವನ್ನು ಬೆಂಕಿ ಇಡಬೇಕು, ಹೂತಿಡಬೇಕೆಂದು ಎನ್ನುತ್ತಿದ್ದಾನೆ ತಮ್ಮಿನೇನಿ ವೀರಭದ್ರಂ ಸಾರ್. ಭಾರತದೇಶದಲ್ಲಿ ಮನುಧರ್ಮಶಾಸ್ತ್ರ ಮನುಗಡೆಯಲ್ಲಿ ಇನ್ನೂ ಏಕೆ ಇದೆಯೆಂಬ ವಿಷಯ ಒಂದು ನೋಡಿರಿ.

**ತಮ್ಮಿನೇನಿ ವೀರಭದ್ರಂ :–** ಮನುಧರ್ಮಶಾಸ್ತ್ರವನ್ನು ದ್ವೇಷಿಸಬೇಕು. ವಾಸ್ತವವಾದ ಹಿಂದೂಗಳು ಕೂಡಾ ಮನುಧರ್ಮಶಾಸ್ತ್ರವನ್ನು ದ್ವೇಷಿಸಬೇಕಾದ ಅಗತ್ಯ ಇದೆ. ಏಕೆಂದರೇ ಹಿಂದೂ ಮತ ಎಂದರೇ ಕೇವಲ ಬ್ರಾಹ್ಮಣ, ವೈಶ್ಯ ಅಥವಾ ಅಗ್ರ ಕುಲಗಳ ದೊಡ್ಡಸ್ತಿಕೆಯೇ ಅಲ್ಲ. ಉಳಿದ ಕುಲಗಳೆಲ್ಲರನ್ನು ಹಿಂದೂಗಳು ಎಂದಾಗ ಆ ಕುಲಗಳನ್ನು ದ್ವೇಷಿಸುವ ಶಾಸ್ತ್ರವನ್ನು ಹಿಂದೂ ಧರ್ಮಶಾಸ್ತ್ರ ಎಂದು ಹೇಗೆ ಅನ್ನುತ್ತಾರೆ?

**ಯಾಂಕರ್ :–** ಅದೇ ಅಲ್ಲವೇ ಬಂದಿರುವ ಅಸಲು ಪಂಚಾಯಿತಿ BC, SC, ST ಪ್ರಜೆಗಳೇ! ನಿಮ್ಮನ್ನು ಅಂಟಬಾರದವರನ್ನಾಗಿ ಮಾಡಿದ ಮನುಧರ್ಮ ಶಾಸ್ತ್ರವನ್ನು ಬೆಂಕಿ ಹಚ್ಚಿರೆಂದು BJP ಅವರು, RSS ಅವರು ಪಂಚಾಯಿತಿಗಳು ಮಾಡುತ್ತಿದ್ದಾರೆ. ಮನುಧರ್ಮಶಾಸ್ತ್ರ ಏನು ಹೇಳಿದೆ. ಬ್ರಾಹ್ಮಣರು ದೊಡ್ಡವರು ಎಂದು ಹೇಳಿದೆ. ಆದರೆ ಭಾರತದೇಶದಲ್ಲಿ ಬ್ರಾಹ್ಮಣರ ಜನಸಂಖ್ಯೆ ಎಷ್ಟು ಇದೆ. ಬಹುಜನರು ಜೋರಾಗಿ ಸೀನಿದರೆ ಹೊಡೆದುಕೊಂಡು ಹೋಗುತ್ತಾರೆ ಗಾಳಿಗೆ. ಅಷ್ಟು ಕಡಿಮೆ ಇರುವ ಅವರು ಇನ್ನೂ ಹೇಗೆ ಈ ಶಾಸ್ತ್ರವನ್ನು ಕಾಪಾಡುತ್ತಿದ್ದಾರೊ ತಿಳಿದಿದೆಯಾ ನಮ್ಮದೇಶದಲ್ಲಿ? ಅವರಿಗೆ ಬಹುಜನರನ್ನು ಎದುರಿಸುವ ಧೈರ್ಯವಿಲ್ಲದೆ ಇದೇ BC, SC, ST ಮಕ್ಕಳಿಗೆ ಹಿಂದೂಧರ್ಮ ಎಂದು ತಗಲಿಸಿ ಮನುಧರ್ಮ ಶಾಸ್ತ್ರವನ್ನು ರಕ್ಷಿಸಿಕೊಳ್ಳುವುದಕ್ಕೆ ಬಹುಜನ ಮಕ್ಕಳನ್ನೇ ಸೈನ್ಯವಾಗಿ ತಯಾರಿಸಿ ಬಹುಜನರ ಮೇಲಿಯೇ ದಾಳಿಗಳು ಮಾಡಿಸುತ್ತಿರುತ್ತಾರೆ. ಹೀಗೆ ಒಬ್ಬ ಬ್ರಾಹ್ಮಣನಿಗು ಕೂಡಾ ಹೊಡೆತ ಬೀಳುವುದಿಲ್ಲ. ಅವರು ದಡದಮೇಲೆ ಕುಳಿತುಕೊಂಡು ನಮ್ಮ ಬೆರಳಿನಿಂದಲೇ ನಮ್ಮ ಕಣ್ಣನ್ನೇ ತಿವಿಯುತ್ತಿರುತ್ತಾರೆನ್ನುವಂತೆ ನಮ್ಮ ಮಕ್ಕಳಿಗೆ ಮನುಧರ್ಮಶಾಸ್ತ್ರದಲ್ಲಿರುವ ಅಸಲಾದ ವಿಷಯ ತಿಳಿದರೆ ಆಗ RSS, BJP ಕಡೆ ನಿಲ್ಲುವುದಿಲ್ಲವೆನ್ನುವಂತೆ. ಆದರೆ ನಮ್ಮ ಹುಡುಗರಿಗೆ ಅದು ತಿಳಿಯಲು ಬಿಡುವುದಿಲ್ಲ. ಕೇವಲ ಬ್ರಾಹ್ಮಣರು ಬದುಕುವುದಕ್ಕಾಗಿ ನಮ್ಮ ಹುಡುಗರನ್ನು ಪಾಪಿಗಳನ್ನು ಮಾಡಿ ಆಡಿಸುತ್ತಿದ್ದಾರೆ. BC, SC, ST ಮಕ್ಕಳೇ! ನಿಮಗೆ ತಿಳಿಯದಂತೆಯೇ ನೀವು ಬ್ರಾಹ್ಮಣರ ಟ್ರಾಕ್‌ನಲ್ಲಿ ಬಿದ್ದು ನಿಮ್ಮ ಜಾತಿಗಳಿಗೆ ಅನ್ಯಾಯ ಮಾಡುತ್ತಿದ್ದೀರ. ಇಂದಿಗಾದರೂ ಎಚ್ಚರಗೊಳ್ಳಿರಿ! ನಿನ್ನ ಹಣೆಗೆ ಕುಲವನ್ನು ಬರೆದವನನ್ನು ಬಿಟ್ಟು ಅವನ ಮಾಯೆಯಲ್ಲಿ ಬಿದ್ದು ಅವನು ಹೊಡೆದುಕೊಂಡು ಹೋಗುವುದಿಲ್ಲವೆಂದರೆ ನಿನ್ನ ಶವವನ್ನು ನೀನೇ ಭುಜದಮೇಲೆ ಹಾಕಿಕೊಂಡು ಹೊತ್ತುಕೊಂಡು ಹೋದಂತೇ ಎನ್ನುವ ಮಾತು ನೆನಪಿಟ್ಟುಕೊಳ್ಳಿ.

**ಹಾಡು :–** **ಸಮತ ಮಮತಲ ರಾಜ್ಯಂ ಪಂಚೇ**
**ಹೃದಯಂ ಮಾಕುಂದಿ**
**ಕುಲಾಲ ಮತಾಲ ಎಲ್ಲಲು ಎರುಗನಿ**
**ಸ್ಫೂರ್ತಿ ಬಹು ಜನುಲದಿ!**
**ಅರೇ! ಮನುವಾ! ದಾನಿಕಿ ಮರಣ ಶಾಸನಂ**
**ವ್ರಾಸ್ತುನ್ನಾಮು ಇದಿಗೋ!**
**ಕೌಟಿಲ್ಯಾನಿಕಿ ಪಾಡಿ ಕಟ್ಟೆಲು ಮೋಸ್ತು**

ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದು ನನ್ನನ್ನು ಯಾರೂ ನೋಡಿಲಿಲ್ಲ ಎನ್ನುವಂತೆ ಪ್ರವರ್ತಿಸಿದರೂ, ಆ ಕಳ್ಳ ಕೆಲಸವನ್ನು ಇತರರು ಯಾರೋ ಒಬ್ಬರು ನೋಡಿರುತ್ತಾರೆ. ಅದೇ ವಿಧವಾಗಿ ಅಜ್ಞಾನ ಭೂಯಿಷ್ಟವಾದ, ವಿಷಯಗಳೊಂದಿಗೆ ಕೂಡಿದ, ಆಧ್ಯಾತ್ಮಿಕಕ್ಕೆ ವಿರುದ್ಧವಾದ, ಇಂದೂ (ಹಿಂದೂ) ಧರ್ಮವನ್ನು ತಿಳಿಯದಂತೆ ಮಾಡಿ ಅಧರ್ಮಗಳನ್ನು ಪ್ರಚಾರ ಮಾಡುವ ವೇದಗಳನ್ನು ಬ್ರಾಹ್ಮಣರು ಇಷ್ಟವಾಗಿ ಸ್ವೀಕರಿಸಿ ದೇವರು ಹೇಳಿದ ದೈವಗ್ರಂಥಕ್ಕು ಸಹ ವಿರುದ್ಧವಾಗಿದ್ದಾರೆ. ಆ ವಿಷಯವನ್ನು ಮರೆಮಾಚುವುವುದಕ್ಕೆ ಅನೇಕ ಮಂದಿ ಬ್ರಾಹ್ಮಣರು ಸ್ವಾಮೀಜೀಗಳಾಗಿ ಬದಲಾಗಿ, ವೇದಗಳು ಹಿಂದೂಗಳ ಪ್ರಮಾಣ ಗ್ರಂಥಗಳೆಂದು, ವೇದಗಳಲ್ಲಿ ಸನಾತನ ಧರ್ಮವಿದೆಯೆಂದು ಹೇಳುತ್ತಾ, ಅಧರ್ಮಗಳನ್ನು ಧರ್ಮಗಳಾಗಿ ತೋರಿಸುತ್ತಿದ್ದಾರೆ. ಅವರ ದಾರಿಗೆ ಅಡ್ಡ ಬಂದ ನಮ್ಮಂತಹವರನ್ನು ಹಿಂದೂಗಳೇ ದೂಷಿಸುವಂತೆ ಪ್ರೇರೇಪಿಸುತ್ತಿದ್ದಾರೆ. ಅದೇ ಕುತಂತ್ರ ಇಂದಿಗೂ ನಮ್ಮ ಮೇಲೆ ನಡೆಯುತ್ತಲೇ ಇದೆ. ಹಿಂದೂಗಳಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಸಿದ್ಧಾಂತ ಕರ್ತರಹಾಗೆ ನಾನು **ತ್ರೈತ ಸಿದ್ಧಾಂತವನ್ನು** ಪ್ರತಿಪಾದಿಸುವುದೇ ಅಲ್ಲದೆ, ಒಂದೇ ಸಿದ್ಧಾಂತದ ಮೇಲೆ ನೂರು (100) ಗ್ರಂಥಗಳಿಗೆ ಮೇಲ್ಪಟ್ಟು ಬರೆದ ನನ್ನನ್ನು, ಹಿಂದೂಗಳಿಂದಲೇ ಆರೋಪಣೆಗಳನ್ನು ಮಾಡಿಸುವುದೇ ಅಲ್ಲದೆ, ಪ್ರತಿ ದಿನ ಯಾವುದೋ ಒಂದು ಆರೋಪಣೆಯನ್ನು ಸೃಷ್ಟಿಸಿ ಸೋಷಲ್ ಮೀಡಿಯಾ

ಆದ ಫೇಸ್ ಬುಕ್‌ನಲ್ಲಿ ಇಡುವುದು ನಡೆಯುತ್ತಿದೆ. ಇತರರಿಂದ ಹಣ ತೆಗೆದುಕೊಂಡು ನನ್ನ ಮೇಲೆ ಆರೋಪಣೆಗಳು ಮಾಡುತ್ತಾ ಮಾತನಾಡುವ ಹಿಂದೂಗಳು ಈ ದಿನ ಇದ್ದಾರೆ. ಇದಕ್ಕೆ ಪೂರ್ತಿ ಬುನಾದಿಯಾಗಿ ಇರುವವರು ಸ್ವಾಮೀಜೀ ವೇಷದಲ್ಲಿರುವ ಬ್ರಾಹ್ಮಣರೇಯೆಂದು ನನಗೆ ಚೆನ್ನಾಗಿ ತಿಳಿದಿದೆ. ಅವರಹಾಗೆ ನಾನು ವೇದಗಳನ್ನು ಹೇಳುವುದಿಲ್ಲ. ಉಪನಿಷತ್ತುಗಳನ್ನು ಹೇಳುವುದಿಲ್ಲ. **ನಾನು ಹೇಳಿರುವುದು ಸ್ವಚ್ಛವಾದ ಆಧ್ಯಾತ್ಮಿಕ.**

ನನ್ನ ಗ್ರಂಥಗಳನ್ನು ಓದಿದವರು ಯಾರೂ ನನ್ನನ್ನು ಆರೋಪಿಸುತ್ತಿಲ್ಲ. ನನ್ನ ಗ್ರಂಥದಲ್ಲಿನ **ಆತ್ಮಜ್ಞಾನಕ್ಕೆ** ಎಷ್ಟೋ ಜನರು ಆಸಕ್ತರಾಗಿ ಸಂಪೂರ್ಣ ಜ್ಞಾನಿಗಳಾಗಿ ಬದಲಾಗಿದ್ದಾರೆ. ಸಂಪೂರ್ಣವಾದ ಆತ್ಮಜ್ಞಾನ ತಿಳಿದ ನಂತರ ವೇದವಾದಿಗಳು ಎಷ್ಟಾಗಿ ನನ್ನನ್ನು ವಿಮರ್ಶಿಸಿದರೂ ಅವೆಲ್ಲವೂ ತಪ್ಪು ಆರೋಪಣೆಗಳೆಂದು ಪ್ರಜೆಗಳೇ ಗ್ರಹಿಸುತ್ತಿದ್ದಾರೆ. ನಮ್ಮ ಹತ್ತಿರ ಸ್ವಚ್ಛವಾದ ಜ್ಞಾನಿಗಳ ಸಂಖ್ಯೆ ಪ್ರತಿ ತಿಂಗಳು ಹೆಚ್ಚುತ್ತಲೇ ಇದೆ. ನಾನು ಬೋಧಿಸುವ ಆತ್ಮಜ್ಞಾನ ಮೂರು ಮತದವರನ್ನು ಆಕರ್ಷಿಸುತ್ತಿದೆ. ಉಳಿದ ಮತದವರು ಸಹ ಅವರ ಗ್ರಂಥಗಳಲ್ಲಿರುವುದು ನಾನು ಹೇಳುತ್ತಿರುವ ಜ್ಞಾನವೇಯೆಂದು ತಿಳಿದು ನನ್ನನ್ನು ಮೂರು ಮತದವರು ಗುರುವಾಗಿ ಭಾವಿಸಿ ಗೌರವಿಸುತ್ತಿದ್ದಾರೆ. ವೇದಗಳನ್ನು ಬೋಧಿಸುತ್ತಾ, ವೇದಗಳನ್ನು ಅಧ್ಯಯನ ಮಾಡುವವರನ್ನು **ಆಧ್ಯಾತ್ಮಿಕ ಜ್ಞಾನ** ತಿಳಿದ ಹಿಂದೂಗಳೇ ಒಪ್ಪಿಕೊಳ್ಳುತ್ತಿಲ್ಲ. ಅವರನ್ನು ಇತರ ಮತದವರು ಸಹ ಯಾವ ಮಾತ್ರ ಒಪ್ಪಿಕೊಳ್ಳುತ್ತಿಲ್ಲ. ದೇವರು ಹೇಳಿದ ಧರ್ಮಗಳ ಮುಂದೆ ವೇದಗಳನ್ನು ಬೋಧಿಸುವವರು ಪಾಪಾತ್ಮರಾಗಿ ಅನೇಕ ಕರ್ಮ ಪೀಡಿತರಾಗಿ ಹೋಗುತ್ತಿದ್ದಾರೆ. ಅದಕ್ಕೆ ಕಾರಣ ಅವರು ಅಧರ್ಮಗಳನ್ನು ಬೋಧಿಸುವುದೇ ಯೆಂದು ಹೇಳಬಹುದು. **ನಮ್ಮ ಜ್ಞಾನ ಧರ್ಮಗಳೊಂದಿಗೆ ಕೂಡಿಕೊಂಡಿದೆ, ಶಾಸ್ತ್ರಬದ್ಧವಾದುದು**. ವೇದಗಳಲ್ಲಿ ಶಾಸ್ತ್ರಬದ್ಧತೆ ಇಲ್ಲ, ದೈವ ಧರ್ಮಗಳು ಇಲ್ಲ.

**6) ಪ್ರಶ್ನೆ :– ವೇದಗಳು ಭಾರತದೇಶದ ಪ್ರಜೆಗಳಿಗೇನಾ, ಒಂದು ಹಿಂದೂ ಮತಕ್ಕೇನಾ, ಇತರ ದೇಶದವರಿಗೆ ಅನ್ವಯಿಸುವುದಿಲ್ಲವಾ? ಇತರ ಮತದವರಿಗೆ ಉಪಯೋಗಪಡುವುದಿಲ್ಲವಾ? ವೇದಗಳು ಮಾನವರೆಲ್ಲರಿಗೂ ಸಂಬಂಧಿಸಿರುವವು ಅಲ್ಲವಾ?**

**ಉತ್ತರ :–** ಚೆನ್ನಾಗಿ ಅರ್ಥವಾಗುವುದಕ್ಕೆ ಹೇಳಿದರೆ ದೇವರು ಸೂಕ್ಷ್ಮವಾದವನು. ಅಂದರೆ ಕಾಣಿಸುವುದಿಲ್ಲ. ಧರ್ಮಸಂಸ್ಥಾಪನೆಗೆ ದೇವರು ಅವತರಿಸಿ ಬಂದರೆ ಆತನನ್ನು ದೇವರು ಎಂದು ಕರೆಯಬಾರದು, ಭಗವಂತನು ಎಂದು ಕರೆಯಬೇಕು. ಒಂದೇ ದೇವರೇ ಕಾಣಿಸದೆ ಹೋದರೆ ದೇವರು, ಕಾಣಿಸಿದರೆ ಭಗವಂತನು. ಒಂದು ಸೂಕ್ಷ್ಮ ಎರಡನೆಯದು ಸ್ಥೂಲ. ಹಾಗೆಯೇ ವೇದಗಳು ಸೂಕ್ಷ್ಮವಾಗಿಯೂ, ಸ್ಥೂಲವಾಗಿಯೂ ಎರಡು ವಿಧಗಳು ಇವೆ. ಸೂಕ್ಷ್ಮವಾಗಿ ಮನುಷ್ಯನ ತಲೆಯಲ್ಲಿ ಗುಣಗಳ ರೂಪದಲ್ಲಿ ವೇದಗಳು ಇವೆ. ಹಾಗೆಯೇ ಗುಣ ವಿಷಯಗಳೊಂದಿಗೆ ಕೂಡಿಕೊಂಡ ಸಮಾಚಾರ ವೇದಗಳು ಎನ್ನುವ ಗ್ರಂಥರೂಪದಲ್ಲಿ ಇವೆ. ಸೂಕ್ಷ್ಮವಾಗಿ ಮೂರು ಗುಣ ಭಾಗಗಳಾಗಿ ಇರುವ ಅವುಗಳನ್ನೇ ಹೊರಗೆ ಸ್ಥೂಲವಾಗಿ ನಾಲ್ಕು ವೇದಗಳ ಹಾಗೆ ಇವೆ. ಒಳಗೆ ಮೂರು, ಹೊರಗೆ ನಾಲ್ಕಾಗಿ ವಿಭಜಿಸಲ್ಪಟ್ಟಿದ್ದರೂ ಎರಡರಲ್ಲಿ ಒಂದೇ ಇದೆ. ಮನುಷ್ಯನ ತಲೆಯಲ್ಲಿ ಗುಣಚಕ್ರದಲ್ಲಿರುವ ಮೂರು ಗುಣಭಾಗಗಳನ್ನು 'ಮಾಯೆ' ಎಂದು ಕರೆಯುತ್ತಿದ್ದೇವೆ. ಮೂರು ಗುಣಭಾಗಗಳಾಗಿರುವ ಮಾಯೆ ಆತ್ಮಜ್ಞಾನಕ್ಕೆ ವಿರುದ್ಧವಾಗಿದೆ. ಹಾಗೆಯೇ ಹೊರಗೆ ವೇದಗಳ ರೂಪದಲ್ಲಿರುವ ನಾಲ್ಕು ಗ್ರಂಥಗಳ ಸಮಾಚಾರವನ್ನು ಸಹ ಮಾಯೆ ಎನ್ನುತ್ತಿದ್ದೇವೆ. ಆದ್ದರಿಂದ ವೇದಗಳು ಆತ್ಮಜ್ಞಾನವಲ್ಲ ಎಂದೂ, ವೇದಗಳು ಕೆಲವರಿಗೆ ಆತ್ಮಜ್ಞಾನದ ಹಾಗೆ ಕಾಣಿಸುವ ಅಜ್ಞಾನ ಎಂದೂ ತಿಳಿಯಬೇಕು. ಹಾಗಿರುವಾಗ ಒಳಗೆ ಗುಣಗಳ ತಂಟೆಗಾಗಲೀ, ಹೊರಗೆ ವೇದಗಳ ತಂಟೆಗಾಗಲಿ ಮನುಷ್ಯ ಹೋಗಬಾರದು. ಹಾಗಲ್ಲದೆ ಹೊರಗೆ ಕಾಣಿಸುವಂತೆ ವೇದಗಳ ಹಿಂದೆಬಿದ್ದು, ವೇದಗಳೇ ಧರ್ಮಗಳೆಂದಾಗಲೀ,

ಸನಾತನ ಧರ್ಮಗಳೆಂದಾಗಲೀ ಅಂದರೂ, ಅಥವಾ ಒಳಗೆ ಗುಣಗಳ ಹಿಂದೆ ಬಿದ್ದಿದ್ದರೂ, ಅವನಿಗೆ ಆಧ್ಯಾತ್ಮಿಕ ಜ್ಞಾನ ಸ್ವಲ್ಪವಾದರೂ ಅರ್ಥವಾಗುವುದಿಲ್ಲ ಎಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ.

ಮೇಲೆ ಹೇಳಿರುವುದರ ಪ್ರಕಾರ ಭಾರತದೇಶ ಪ್ರಜೆಗಳಿಗಾಗಲೀ, ಕೇವಲ ಹಿಂದೂ ಸಮಾಜಕ್ಕಾಗಲೀ, ಇತರ ಮತದವರಿಗಾಗಲೀ, ಇತರ ದೇಶ ದವರಿಗಾಗಲೀ, ಯಾರಿಗೂ ವೇದಗಳು ಉಪಯೋಗಪಡುವುದಿಲ್ಲ. ವೇದಗಳು ಮಾನವರಿಗೆ ಸಂಬಂಧಪಟ್ಟಿರುವವೇ, ಮನುಷ್ಯನ ಶರೀರದಲ್ಲಿ ಸೂಕ್ಷ್ಮವಾಗಿರುವ ಅಂತರ್ಭಾಗಗಳೇ. ವೇದಗಳ ಹೆಸರಿನಿಂದ ಗ್ರಂಥಗಳಾಗಿ ಹೊರಗೆ, ಗುಣಗಳ ಹೆಸರಿನಿಂದ ವಿಷಯಗಳಾಗಿ ಒಳಗೆ ಇವೆಯೆಂದು ಹೇಳಬಹುದು. ಹೊರಗಾಗಲೀ, ಒಳಗಾಗಲೀ ಅವುಗಳ ತಂಟೆಗೆ ಹೋಗುವ ಮನುಷ್ಯ ಯಾವ ಮತಸ್ಥನಾಗಲೀ, ಯಾವ ದೇಶಸ್ಥನಾಗಲೀ ಅಜ್ಞಾನದ ಕಡೆ ಹೋದಂತೇಯೆಂದು ಹೇಳಬಹುದು. ವೇದಗಳೆನ್ನುವ ಪದವು ವೇದನೆಗಳು ಎನ್ನುವ ಪದದಿಂದ ಬಂದಿದೆಯೆಂದು ಮೊದಲೇ ತಿಳಿದುಕೊಂಡಿದ್ದೇವೆ. ಮನುಷ್ಯ ವೇದ ವಿಷಯಗಳಿಂದ ಅಜ್ಞಾನ ದೊಳಗೆ ಹೋಗುವುದೇ ಅಲ್ಲದೆ, ಸುಖಗಳ ಆಸಕ್ತಿಯಿಂದ ಅನೇಕ ಕೆಲಸಗಳು ಮಾಡುವುದಕ್ಕೆ ಅವನ ಬುದ್ಧಿ ಎಷ್ಟೋ ವಿಧಗಳ ಶಾಖೋಪಶಾಖೆಗಳಾಗಿ ಸೀಳಿ ಆಲೋಚಿಸುತ್ತಿರುತ್ತದೆ. ಅದರಿಂದ ಅವನಿಗೆ ಕರ್ಮಬರುವುದು, ಕರ್ಮದಿಂದ ಜನ್ಮಗಳು ಬರುವುದು ನಡೆಯುತ್ತಿದೆ. ವೇದಗಳ ತಂಟೆಗೆ ಹೋಗುವವನಿಗೆ ಶ್ರದ್ಧೆಯಿಂದ ಆಧ್ಯಾತ್ಮಿಕವನ್ನು ತಿಳಿಯುವುದರಿಂದ ಆತನಿಗೆ ಆತ್ಮದ ಮೇಲೆ, ಮೋಕ್ಷದ ಮೇಲೆ ಹೊರತು ಬೇರೆ ಗಮನ ಇರುವುದಿಲ್ಲ. ಮೋಕ್ಷದ ಮೇಲೆ ಗಮನ ಇರುವವನ ಬುದ್ಧಿ ಆತ್ಮದ ಮೇಲೆಯೇ ನಿಂತಿರುವುದಾಗಿ ಇರುತ್ತದೆ. ಈ ವಿಷಯವನ್ನು ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಸಾಂಖ್ಯಯೋಗವೆನ್ನುವ ಅಧ್ಯಾಯದಲ್ಲಿ 41 ನೇ ಶ್ಲೋಕದಲ್ಲಿ ನೋಡಿರಿ.

**ಶ್ಲೋ॥ 41. ವ್ಯವಸಾಯಾತ್ಮಿಕಾ ಬುದ್ಧಿ ರೇಕೇಹ ಕುರುನಂದನ!**

**ಬಹು ಶಾಖಾ ಹ್ಯನನ್ತಾಶ್ಚ ಬುದ್ಧಯೋ ವ್ಯವಸಾಯಿನಾಮ್॥**

**ಭಾವಾರ್ಥ :–** ಮನುಷ್ಯರಲ್ಲಿ ಮೋಕ್ಷದಲ್ಲೇ ಆಶಯ ಉಂಟಾಗುವ ಅವರ ಬುದ್ಧಿ ಒಂದನ್ನೇ ಆಲೋಚಿಸುತ್ತಿರುತ್ತದೆ. ಅವರಿಗೆ ದೇವರ (ಆತ್ಮ) ಮೇಲೆ ಗಮನ ಹೊರತು ಏನೂ ಇರುವುದಿಲ್ಲ. ಬೇರೆ ಅಭಿಪ್ರಾಯಗಳೊಂದಿಗೆ ಗುಣಗಳ ವಿಷಯಗಳಲ್ಲಿ (ವೇದ ವಿಷಯಗಳಲ್ಲಿ) ಸಿಲುಕಿಕೊಂಡವರ ಬುದ್ಧಿ ಶಾಖೋಪ ಶಾಖೆಗಳಾಗಿ ಆಲೋಚಿಸುತ್ತಿರುತ್ತದೆ.

ಈ ವಿಧವಾಗಿ ವೇದಗಳನ್ನಾಶ್ರಯಿಸಿದವನಿಗೆ ಇರುತ್ತದೆಂದು ಇಲ್ಲಿ 41, 42, 43, 44, 45, 46 ಶ್ಲೋಕಗಳವರೆಗು ಹೇಳಿದ್ದಾರೆ.

**7) ಪ್ರಶ್ನೆ :– ನೀವು ದೈವಗ್ರಂಥವೆಂದು ಹೇಳಲ್ಪಡುತ್ತಿರುವ ಭಗವದ್ಗೀತೆ ಯಲ್ಲಿ ದೇವರು (ಭಗವಂತನು) ವೇದಗಳಿಗೆ ವಿರುದ್ಧವಾಗಿ ಹೇಳಿದ್ದಾ ನೆಂದು ಅನ್ನುತ್ತಿದ್ದಾರಲ್ವಾ! ಭಗವದ್ಗೀತೆಯಲ್ಲಿ ವೇದಗಳ ಹೆಸರು ಹೇಳಿ, ಎಷ್ಟು ಕಡೆ ವೇದಗಳಿಗೆ ವಿರುದ್ಧವಾಗಿ ಹೇಳಿದ್ದಾನೆ?**

**ಉತ್ತರ :–** ಭಗವದ್ಗೀತೆ ಸರ್ವ ಮಾನವರಿಗೂ ಹೇಳಿದ ಗ್ರಂಥ. ಅಧರ್ಮಗಳನ್ನು ಅಡಗಿಸುತ್ತಾ ಧರ್ಮಗಳನ್ನು ತಿಳಿಸುವುದು ದೈವಗ್ರಂಥಗಳಲ್ಲಿ ನಡೆದಿದೆ. ವೇದ ವ್ಯಾಸನು ತನ್ನ ಕುಲದವರು ಬರೆದ ಅನೇಕ ವ್ಯಾಸಗಳನ್ನು ಶೇಕರಿಸಿ ಗ್ರಂಥರೂಪ ಮಾಡಿದ್ದನೆ. ಆ ಗ್ರಂಥಗಳೇ ವೇದಗಳು. **ವ್ಯಾಸಗಳು ಬರೆದವನು ಆದ್ದರಿಂದ ವ್ಯಾಸನು** ಎನ್ನುವ ಹೆಸರು ಆತನಿಗೆ ಬರುವುದು ನಡೆದಿದೆ. ವ್ಯಾಸನು ಅಧರ್ಮ ಗಳಿಂದ ಕೂಡಿದ ವೇದಗಳನ್ನು, ಪುರಾಣಗಳನ್ನು ಬರೆಯುವು ದರಿಂದ ಬ್ರಾಹ್ಮಣರು ವಿದ್ಯೆ ಇರುವವರಾಗಿದ್ದು ವಿದ್ಯೆ ಇಲ್ಲದ ಇತರ ಕುಲದವರಿಗೆ ಹೇಳಿ ಅವರನ್ನು ವೇದಗಳನ್ನು ಗೌರವಿಸುವವರಾಗಿ ತಯಾರಿ ಮಾಡಿದ್ದಾರೆ. ವಿದ್ಯೆಇರುವ ಬ್ರಾಹ್ಮಣರು ಪ್ರಜೆಗಳ ಶುಭಕಾರ್ಯಗಳಲ್ಲಿ ಹಿರಿಯರಾಗಿದ್ದು ಕಾರ್ಯಕ್ರಮಗಳನ್ನು

ವೇದ ಮಂತ್ರಗಳಿಂದ ಮಾಡುತ್ತಾ, ವೇದಮಂತ್ರಗಳಿಂದ ಅಶುಭಗಳು ಹೋಗುತ್ತವೆಂದು ಪ್ರಜೆಗಳನ್ನು ನಂಬಿಸುತ್ತಿದ್ದರು. ಆ ವಿಧವಾಗಿ ಪ್ರಜೆಗಳು ಸಹ ಅಧರ್ಮಗಳ ಹಿಂದೆ ಹೋಗುತ್ತಿದ್ದಾರೆಂದು, ಪ್ರಜೆಗಳಿಗೆ ಧರ್ಮಗಳು ತಿಳಿಯದಂತೆ ಹೋಗಿವೆಯೆಂದು, ತಿಳಿದ ದೇವರು ತನ್ನ ಧರ್ಮಗಳನ್ನು ತಾನೇ ಭಗವಂತನಾಗಿ ಬಂದು ಸಂದರ್ಭಾನುಸಾರ ದ್ವಾಪರಯುಗದಲ್ಲಿ ಅರ್ಜುನನಿಗೆ ಹೇಳಿಹೋಗುವುದು ನಡೆದಿದೆ. ಹಾಗೆ ಹೇಳಿದ ಬೋಧನೆಯನ್ನು ಕೇಳಿದ ವ್ಯಾಸನು, ವೇದಗಳನ್ನು ಬರೆದು ತಪ್ಪು ಮಾಡಿದ್ದೇನೆಂದು ಗ್ರಹಿಸಿ, ಪಶ್ಚಾತ್ತಾಪವನ್ನು ಹೊಂದಿ, ಕೊನೆಗೆ ಶ್ರೀಕೃಷ್ಣನು ಹೇಳಿದ ಧರ್ಮಯುಕ್ತವಾದ ಬೋಧನೆಯನ್ನು ಗ್ರಂಥರೂಪವಾಗಿ ಬರೆದಿದ್ದಾನೆ. ಅದಕ್ಕೇ ಭಗವದ್ಗೀತೆಯೆಂದು ವ್ಯಾಸನು ಹೆಸರಿಟ್ಟಿದ್ದಾನೆ. ಹಾಗೆ ಗ್ರಂಥ ರೂಪವಾಗಿ ಬದಲಾದ ಭಗವದ್ಗೀತೆಯಲ್ಲಿ ಸಾಂಖ್ಯಯೋಗ ಎನ್ನುವ ಅಧ್ಯಾಯದಲ್ಲಿ 41 ನೇ ಶ್ಲೋಕದಿಂದ 46ನೇ ಶ್ಲೋಕದವರೆಗು ವೇದಗಳನ್ನು ಕುರಿತು ಹೇಳಿದ್ದಾನೆ.

ವೇದಗಳಿಂದ ಅಜ್ಞಾನಿಯಾಗಿ ಬದಲಾಗುವುದಕ್ಕೆ ಅವಕಾಶ ವಿದೆಯೆಂದೂ, ವೇದಗಳಿಂದ ಸುಖಗಳಲ್ಲಾಸಕ್ತಿ ಬೆಳೆದು ಅನೇಕ ಕಾರ್ಯಾಚರಣೆ ನಡೆಯುತ್ತದೆಂದು, ಹಾಗೆ ಕಾರ್ಯಗಳನ್ನು ಮಾಡುವುದರಿಂದ ಕರ್ಮಗಳು, ಜನ್ಮಗಳು ಬರುತ್ತಿರುತ್ತವೆಂದು ಹೇಳಿದ್ದಾನೆ. ವೇದಗಳ ಮೇಲೆ ಲಕ್ಷ್ಯ ಇಲ್ಲದವರಿಗೆ ಆಧ್ಯಾತ್ಮಿಕ ತಿಳಿಯುತ್ತದೆಂದು ಸಹ ಹೇಳಿದ್ದಾನೆ. ಅಲ್ಲಿ ಹಾಗೆ ಹೇಳುವುದೇ ಅಲ್ಲದೆ ವಿಜ್ಞಾನಯೋಗ ಎನ್ನುವ ಅಧ್ಯಾಯದಲ್ಲಿ 14ನೇ ಶ್ಲೋಕದಲ್ಲಿ ಹೀಗೆ ಹೇಳಿದ್ದಾನೆ.

**ಶ್ಲೋ॥ 14. ದೈವೀಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ।**
**ಮಾಮೇವ ಯೇ ಪ್ರಪದ್ಯನ್ತೇ ಮಾಯಾ ಮೇತಾಂ ತರನ್ತಿತೇ ॥**

**ಭಾವಾರ್ಥ :–** "ದೇವರಾದ ನಾನು ತಯಾರಿ ಮಾಡಿದ ಗುಣಗಳೊಂದಿಗೆ

ಕೂಡಿಕೊಂಡ ನನ್ನ ಮಾಯೆಯನ್ನು ದಾಟುವುದು ದುಸ್ಸಾಧ್ಯವಾದ ಕೆಲಸ. ಆದರೇ ನನ್ನನ್ನು ಶರಣುಬೇಡಿದ ಮನುಷ್ಯರು ಮಾಯೆಯನ್ನು ಸುಲಭವಾಗಿ ದಾಟಿ ಹೋಗಬಲ್ಲರು" ಎಂದು ಹೇಳಿದ್ದಾನೆ.

ಭಗವದ್ಗೀತೆಯಲ್ಲಿ ಇನ್ನೊಂದು ಕಡೆ ಅಕ್ಷರ ಪರಬ್ರಹ್ಮ ಯೋಗವೆನ್ನುವ ಅಧ್ಯಾಯದಲ್ಲಿ 28ನೇ ಶ್ಲೋಕದಲ್ಲಿ ಕೂಡಾ ವೇದ ಪ್ರಸ್ತಾವನೆ ಬಂದಿದೆ ನೋಡಿರಿ.

**ಶ್ಲೋ॥ 28.**

**ವೇದೇಷು ಯಜ್ಞೇಷು ತಪಸ್ಸು ಚೈವ ದಾನೇಷು ಯತ್ಪುಣ್ಯ ಫಲಂ ಪ್ರದಿಷ್ಟಮ್।**
**ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀಪರಂ ಸ್ಥಾನಮುಪೈತಿ ಚಾದ್ಯಮ್ ॥**

**ಭಾವಾರ್ಥ :–** ನಾನು ಹೇಳಿದ ಈ ಜ್ಞಾನವನ್ನು ತಿಳಿದವನು ವೇದಗಳನ್ನು, ತಪಗಳನ್ನು, ಯಜ್ಞಗಳನ್ನು, ದಾನಗಳಿಂದ ಬರುವ ಪುಣ್ಯ ಫಲಗಳನ್ನು ಅತಿಕ್ರಮಿಸಿ ಜ್ಞಾನಿಯಾಗಿ ಮೋಕ್ಷವನ್ನು ಹೊಂದುವನು.

ಅಕ್ಷರ ಪರಬ್ರಹ್ಮ ಯೋಗದಲ್ಲಿ ವೇದಗಳಿಂದ, ಯಜ್ಞಗಳಿಂದ, ತಪಸ್ಸು ಗಳಿಂದ, ದಾನಗಳಿಂದ ಪುಣ್ಯ ಬರುತ್ತದೆಂದು, ಅವುಗಳ ಸಂಬಂಧ ಇಲ್ಲದಂತೆ ಆತ್ಮಜ್ಞಾನ ತಿಳಿದವನು ಮುಕ್ತಿಯನ್ನು ಹೊಂದುವನೆಂದು, ಹೇಳುವುದೇ ಅಲ್ಲದೆ ವಿಶ್ವರೂಪ ಸಂದರ್ಶನ ಯೋಗ ಎನ್ನುವ ಅಧ್ಯಾಯದಲ್ಲಿ 48,53 ನೇ ಶ್ಲೋಕಗಳಲ್ಲಿ ಈ ವಿಧವಾಗಿ ಹೇಳುವುದು ನಡೆದಿದೆ ನೋಡಿರಿ.

**ಶ್ಲೋ॥ 48.**

**ನವೇದಯಜ್ಞಾಧ್ಯಯನೈರ್ನ ದಾನೈರ್ನ ಚಕ್ರಿಯಾಭಿರ್ನ ತಪೋಭಿರುಗ್ರೈಃ ।**
**ಏವಂ ರೂಪ ಶ್ಯಕ್ಯ ಅಹಂ ನೃಲೋಕೇ ದ್ರಷ್ಟುಂ ತ್ವದನ್ಯೇನ ಕುರುಪ್ರವೀರ! ॥**

**ಭಾವಾರ್ಥ :–** ಭೂಮಿಮೇಲೆ ನೀನು ಹೊರತು ಈ ವಿಶ್ವರೂಪವನ್ನು

ನೋಡಿದವರು ಇಲ್ಲ ಅರ್ಜುನಾ, ಅನೇಕ ಯಜ್ಞಕ್ರಿಯೆಗಳಿಂದಾಗಲೀ, ವೇದಗಳ ಅಧ್ಯಯನಗಳಿಂದಾಗಲಿ, ದಾನಗಳಿಂದಾಗಲಿ, ತಪಸ್ಸುಗಳಿಂದಾಗಲೀ ಯಾರೂ ನನ್ನನ್ನು ನೋಡುವುದಕ್ಕೆ ಶಕ್ಯವಾಗುವುದಿಲ್ಲ.

**ಶ್ಲೋ॥ 53. ನಾಹಂ ವೇದೈರ್ನ ತಪಸಾನ ದಾನೇನ ನ ಚೇಜ್ಯಯಾ ।**

**ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾ ನಸಿ ಮಾಂ ಯಥಾ ॥**

**ಭಾವಾರ್ಥ :–** ತಪಸ್ಸಿನಿಂದಾಗಲೀ, ದಾನದಿಂದಾಗಲೀ, ಯಜ್ಞಗಳಿಂದಾಗಲೀ, ವೇದಗಳಿಂದಾಗಲೀ ಈಗ ನೀನು ನೋಡಿದ ಈ ರೂಪವನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ.

**ಭಗವದ್ಗೀತೆಯಲ್ಲಿ (1) ಸಾಂಖ್ಯ ಯೋಗದಲ್ಲಿ (2) ವಿಜ್ಞಾನ ಯೋಗದಲ್ಲಿ (3) ಅಕ್ಷರ ಪರಬ್ರಹ್ಮ ಯೋಗದಲ್ಲಿ (4) ವಿಶ್ವರೂಪ ಸಂದರ್ಶನ ಯೋಗದಲ್ಲಿ ಒಟ್ಟಾರೆ ನಾಲ್ಕು ಕಡೆ ವೇದಗಳನ್ನು ಕುರಿತು, ವೇದಾಧ್ಯಯನವನ್ನು ಕುರಿತು ಹೇಳುವುದಾಗಿದೆ.** ನಾಲ್ಕು ಕಡೆ ಸಹ **"ವೇದಗಳಿಂದ ದೇವರು ತಿಳಿಯುವುದಿಲ್ಲ"** ಎಂದು ಹೇಳುವುದಾಗಿದೆ. **"ವೇದಗಳೇ ಮಾಯೆ"** ಎಂದು ಸಹ ಹೇಳುವುದಾಗಿದೆ. ಇಷ್ಟು ವಿಧಗಳಲ್ಲಿ ವೇದಗಳನ್ನು ಕುರಿತು ದೇವರು ಹೇಳಿದರೂ, ಅದಕ್ಕಿಂತ ಮೀರಿರುವವು ಇಲ್ಲ ಎಂದು ಹೇಳುತ್ತಾ ಅವುಗಳ ಹಿಂದೆ ಬೀಳುವವರನ್ನು ಏನನ್ನಬೇಕೊ ನೀವೇ ಹೇಳಿರಿ!

**8) ಪ್ರಶ್ನೆ :– ವಿಜ್ಞಾನ ಯೋಗವೆನ್ನುವ ಅಧ್ಯಾಯದಲ್ಲಿ 14ನೇ ಶ್ಲೋಕದಲ್ಲಿ "ದೈವೀಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ" ಎಂದು ಹೇಳಿದ್ದಾರಲ್ಲವೆ! ಆ ಮಾತಿನ ಪ್ರಕಾರ "ದೈವ ನಿರ್ಮಿತವಾದುದು, ಗುಣಗಳೊಂದಿಗೆ ಕೂಡಿಕೊಂಡಿರುವುದು ಆದ ನನ್ನ ಮಾಯೆಯನ್ನು ಜಯಿಸುವುದು ದುಸ್ಸಾಧ್ಯ" ಎಂದು ಅಂದಿದ್ದಾರೆ ಅಲ್ಲವೆ! ಹಾಗಿರುವಾಗ**

**ಮಾಯೆ ಕೂಡಾ ದೇವರ ಸೃಷ್ಠಿಯೆಂದು ದೇವರೇ ಹೇಳಿದಾಗ ದೇವರು ತಯಾರು ಮಾಡಿದ ಮಾಯೆಯನ್ನು ವಿಶ್ವಾಸಿಸಿದರೂ ದೇವರನ್ನು ವಿಶ್ವಸಿಸಿದಹಾಗೆ ಅಲ್ಲವೆ! ಮಾಯೆಯಲ್ಲಿನ ಭಾಗಗಳೇ ವೇದಗಳಾದಾಗ ವೇದಗಳನ್ನು ಗೌರವಿಸಿದರೇ ಮಾಯೆಯನ್ನು ಗೌರವಿಸಿದಂತೆ ಅಲ್ಲವೆ! ಮಾಯೆಯನ್ನು ಗೌರವಿಸಿದರೇ ದೇವರನ್ನು ಗೌರವಿಸಿದಂತೆ ಅಲ್ಲವೆ! ಹಾಗಿರುವಾಗ ವೇದಗಳನ್ನು ಅಧರ್ಮಗಳೆಂದು ಏಕೆ ಅನ್ನಬೇಕು**?

**ಉತ್ತರ :–** ಭಗವಂತನಾಗಿ ಬಂದಿರುವ ದೇವರು ಮಾಯೆಯನ್ನು **"ನನ್ನ ಮಾಯೆ"** ಎಂದ ಮಾತು ನಿಜವೇ. ಅದು ಆತನಿಗೆ ಸಂಬಂಧಿಸಿದ ವಿಷಯ. ದೇವರು ಎನ್ನಲ್ಪಡುವ ಪರಮಾತ್ಮ ಸೃಷ್ಠಿಕರ್ತನಾಗಿ ಮೊಟ್ಟಮೊದಲು ಜೀವರಾಶಿಗಳು ಇಲ್ಲದ ಪ್ರಪಂಚವನ್ನು ಸೃಷ್ಠಿಸಿದ್ದಾನೆ. ನಂತರ ಆತ್ಮವಾಗಿರುವ ದೇವರು ಮನುಷ್ಯರನ್ನು ಸೃಷ್ಠಿಸಿದ್ದಾನೆ. ಒಟ್ಟಾರೆ ಇಬ್ಬರು ಸೃಷ್ಠಿಕರ್ತರು ಇದ್ದಾರೆ. ಆ ಸೃಷ್ಠಿಕರ್ತರು ಇಬ್ಬರೂ **'ದೇವರು'** ಎನ್ನುವ ಗುರುತಿನಿಂದಲೇ ಇದ್ದಾರೆ. ಎರಡನೆ ಸೃಷ್ಠಿಕರ್ತನಾದ (ಆತ್ಮ) ದೇವರು ಗುಣಗಳ ರೂಪದಲ್ಲಿರುವ ಮಾಯೆ ಯನ್ನು ತಯಾರಿ ಮಾಡಿರುವುದು 'ನಾನೇ'ಯೆಂದು ಹೇಳುತ್ತಿದ್ದಾನೆ. ಅಷ್ಟೇ ಅಲ್ಲದೆ **"ಮಾಯೆಯನ್ನು ಸೃಷ್ಠಿಸಿದ ನನ್ನನ್ನು ಆರಾಧಿಸಿದಾಗಲೇ ಮಾಯೆಯನ್ನು ಜಯಿಸಿಹೋಗಬಲ್ಲರು"** ಎಂದು ಹೇಳಿದ್ದಾನೆ. ಶರೀರದಲ್ಲಿ ದೇವರಾದ ಆತ್ಮವನ್ನು ಆರಾಧಿಸಬೇಕೆಂದರೆ ಶರೀರದಲ್ಲಿನ ಗುಣಗಳ ಮೇಲೆ ಗಮನ ಬಿಟ್ಟು ಹಾಕಬೇಕಾಗಿದ್ದೇಯೆಂಬ ಅಂತರ್ಗತ ವಿಷಯವನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ.

ಶರೀರದಲ್ಲಿನ ಆತ್ಮವನ್ನು ಜೀವಾತ್ಮ ಆರಾಧಿಸಬೇಕಾದ್ದೇ. ಮೊದಲ ಸೃಷ್ಠಿಕರ್ತನಾದ ಪರಮಾತ್ಮನನ್ನು ಜೀವಾತ್ಮ ಸೇರಿದಾಗ ಜೀವಿಗೆ ಮುಕ್ತಿ ಲಭಿಸುತ್ತದೆ. ಮುಕ್ತಿ ಲಭಿಸಬೇಕೆಂದರೆ ಅಂದರೆ ವಿಶ್ವರೂಪವನ್ನು ಹೊಂದಬೇ ಕೆಂದರೆ, ಮೂರನೆ ಪುರುಷನಾದ ಪರಮಾತ್ಮನನ್ನು ಸೇರಬೇಕೆಂದರೆ ಹೊರಗೆ ವೇದಗಳನ್ನಾಗಲೀ, ಒಳಗಿನ ಗುಣಗಳನ್ನಾಗಲೀ ಬಿಟ್ಟುಹಾಕಬೇಕು. ಹೊರಗಿನ

ವೇದಗಳಿಗು, ಒಳಗಿನ ಗುಣಗಳಿಗು ಅವಿನಾಭಾವ ಸಂಬಂಧವಿದೆ. ವಿಶ್ವರೂಪ ಸಂದರ್ಶನ ಯೋಗ ಎನ್ನುವ ಅಧ್ಯಾಯದಲ್ಲಿ ಸ್ವತಃವಾಗಿ ಪರಮಾತ್ಮ (ಮೊದಲ ದೇವರು) ಹೇಳಿದ 48, 53 ನೇ ಶ್ಲೋಕಗಳಲ್ಲಿ **"ವೇದಗಳಿಂದ ನನ್ನನ್ನು ಸೇರಲಾರರೆಂದು"** ಹೊರಗಿನ ವೇದಗಳನ್ನು ಕುರಿತು ಹೇಳಿದ್ದಾನೆ. ವಿಜ್ಞಾನ ಯೋಗದಲ್ಲಿ 14ನೇ ಶ್ಲೋಕದಲ್ಲಿ **"ನಾನು ತಯಾರು ಮಾಡಿದ ಗುಣಗಳೇ ಶರೀರದಲ್ಲಿ ಮಾಯೆಯಾಗಿ ಇದೆಯೆಂದು, ಮಾಯೆಯನ್ನು ಜಯಿಸುವುದು ಅಂದರೆ ಗುಣಗಳನ್ನು ಜಯಿಸುವುದು ದುಸ್ಸಾಧ್ಯವೆಂದೂ, ಆತ್ಮವನ್ನು ಆರಾಧಿಸಿದಾಗಲೇ ಮಾಯೆಯನ್ನು ಜಯಿಸುವುದಕ್ಕೆ ಸಾಧ್ಯವೆಂದು"** ಹೇಳುವುದಾಗಿದೆ. ಇಲ್ಲಿ ಹೇಳಿರುವುದು ಎರಡನೆ ದೇವರು ಆದ ಆತ್ಮ ಎಂದು ತಿಳಿಯಬೇಕು. ಆತ್ಮ, ಪರಮಾತ್ಮರಲ್ಲಿ ಅಂದರೆ ಇಬ್ಬರು ದೇವರುಗಳಲ್ಲಿ ಯಾವ ದೇವರು ಯಾವ ಶ್ಲೋಕವನ್ನು ಕುರಿತು ಹೇಳಿದ್ದಾನೋ ತಿಳಿಯಬೇಕು. ವೇದಗಳನ್ನು ಗೌರವಿಸಿದರೆ ದೇವರನ್ನು ಗೌರವಿಸಿದಂತೇ ಅಲ್ಲವೆ! ಎಂದು ಕೇಳಿದಾಗ ಯಾವ ದೇವರನ್ನು ಗೌರವಿಸಿದಂತೋ ತಿಳಿದು ಕೇಳುತ್ತಿದ್ದೀರಾ? ವೇದಗಳಿಂದ ಯಾವ ದೇವರನ್ನು ಸೇರಲಾರೆರೋ? ಸ್ವಲ್ಪವಾದರೂ ತಿಳಿದಿದೆಯಾ ಎಂದು ಪ್ರಶ್ನಿಸುತ್ತಿದ್ದೇನೆ. ಮನುಷ್ಯನಿಗೆ ಮುಕ್ತಿ ಬೇಕಾದಾಗ ಯಾವ ದೇವರನ್ನು ಸೇರಬೇಕಾಗಿದೆಯೋ ತಿಳಿದಿದೆಯಾ? ಎಂದು ಕೇಳುತ್ತಿದ್ದೇನೆ. ನಿಮ್ಮ ಮಾತಿನ ಪ್ರಕಾರ ವೇದಗಳನ್ನು ಮಾಯೆಯೆಂದು ತಿಳಿದು ಆತ್ಮವನ್ನು ತಿಳಿಯುವುದಕ್ಕೆ ದಾರಿ ಏರ್ಪಡುತ್ತದೆ. ಆತ್ಮವನ್ನು ಆರಾಧಿಸಿದಂತೆ ಅಲ್ಲ. ಆತ್ಮವನ್ನು ಆರಾಧಿಸಿದರಾಗಲಿ ಒಳಗಿನ ಮಾಯೆಯನ್ನು ಮನುಷ್ಯ ದಾಟಲಾರನು. ಒಳಗಿನ ಮಾಯೆ, ಹೊರಗಿನ ವೇದಗಳು ಎರಡು ವಿಧಗಳಾಗಿ ಇರುವಾಗ ಎರಡೂ ಸ್ಥೂಲ ಸೂಕ್ಷ್ಮವಾಗಿ ಇದ್ದಂತೇ. ದೇವರು ಸಹ ಶರೀರದಲ್ಲಿ ಆತ್ಮ ಒಬ್ಬ ದೇವರಾಗಿ, ಶರೀರದೊಳಗೂ ಹೊರಗೂ ಎಲ್ಲೆಡೆ ಇರುವ ಪರಮಾತ್ಮ ಮತ್ತೊಬ್ಬ ದೇವರಾಗಿ ಇದ್ದಾನೆ. ಹೊರಗಿನ ಪರವಾತ್ಮನನ್ನು ಹೊಂದಬೇಕೆಂದರೆ ಒಳಗಿನ ಆತ್ಮವನ್ನು ಆರಾಧಿಸಬೇಕಾದ್ದೆ. ಒಳಗಿನ ಆತ್ಮವನ್ನು ಆರಾಧಿಸುವುದಕ್ಕೆ ಹೊರಗಿನ ವೇದಗಳನ್ನು

ಬಿಟ್ಟುಹಾಕಬೇಕಾದ್ದೇ. ಅತ್ತ ಮುಕ್ತಿ ಆದ ಪರಮಾತ್ಮ, ಇತ್ತ ಮಾಯೆ ಆದ ವೇದಗಳು ಎರಡೂ ಬೇಕೆಂದರೆ ಆಗುವುದಿಲ್ಲ. **ವೇದಗಳನ್ನು ಹಿಡಿದುಕೊಂಡರೇ ಆತ್ಮ ಸಿಗುವುದಿಲ್ಲ. ಆತ್ಮವನ್ನು ಆರಾಧಿಸಿದರೆ ವೇದಗಳಿಗೆ ದೂರವಾಗಿ ಇರಬೇಕಾದ್ದೇ. ಆತ್ಮವನ್ನು ಆರಾಧಿಸದೇ ಹೋದರೇ ಪರಮಾತ್ಮ ಸಿಗುವುದಿಲ್ಲ.** ಆತ್ಮವನ್ನು ಆರಾಧಿಸಿದಾಗ ಪರಮಾತ್ಮನನ್ನು ಸೇರುವುದಕ್ಕೆ ಅವಕಾಶವಿರುತ್ತದೆ. ಇದನ್ನೆಲ್ಲಾ ತಿಳಿಯುವುದಕ್ಕೆ ಭಗವದ್ಗೀತೆಯಲ್ಲಿ ಹೇಳಿದ ಶ್ಲೋಕಗಳು ಆಧಾರವಾಗಿ ಇವೆ. ಆ ಶ್ಲೋಕಗಳ ಆಧಾರದಿಂದ ಯಾವ ಶ್ಲೋಕ ಯಾವ ದೇವರು ಹೇಳಿದ್ದಾನೆಂದು ಗಮನಿಸಿ ನೋಡಿದರೇ ಮೋಕ್ಷ ಸಿಗುವುದಕ್ಕೆ ಅವಕಾಶವಿದೆ. ಶರೀರದ ಒಳಗಿನ ಮಾಯೆಗು ಹೊರಗಿನ ವೇದಗಳಿಗು, ಶರೀರದಲ್ಲಿನ ಆತ್ಮಕ್ಕು ಹೊರಗಿನ ಪರಮಾತ್ಮಕ್ಕೂ ಇರುವ ಅವಿನಾಭಾವ ಸಂಬಂಧ ತಿಳಿದಾಗಲೇ ಪೂರ್ತಿ ಜ್ಞಾನ ತಿಳಿಯುತ್ತದೆ.

**9) ಪ್ರಶ್ನೆ :– ಭಗವದ್ಗೀತೆ ಪುರುಷೋತ್ತಮ ಪ್ರಾಪ್ತಿ ಯೋಗ ಎನ್ನುವ ಅಧ್ಯಾಯದಲ್ಲಿ ಮೊದಲ ಮೂರು ಶ್ಲೋಕಗಳು ವೇದಗಳನ್ನು ಕುರಿತು ಹೇಳಿರುವವೇ ಇವೆ. ಹಾಗೆಯೇ ಅದೇ ಅಧ್ಯಾಯದಲ್ಲಿ ಹದಿನೈದನೆ ಶ್ಲೋಕದಲ್ಲಿ ಸಹ ವೇದಗಳನ್ನು ಕುರಿತು ಹೇಳಿದ್ದಾರೆ. ನೀವು ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಹೇಳಿದ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಅಲ್ಲಿ ವೇದಗಳನ್ನು ಕುರಿತು ಕೆಟ್ಟದಾಗಿ ಹೇಳಲಿಲ್ಲ ಅಲ್ಲವೆ! 'ವೇದ ಫಲದಾತನು, ವೇದ ವಿಭುಡನು ನಾನು" ಎಂದು 15ನೇ ಶ್ಲೋಕದಲ್ಲಿ ಹೇಳಿದ್ದಾನೆ ಅಲ್ಲವೆ! ಇದಕ್ಕೆ ನೀವು ಏನು ಹೇಳುತ್ತೀರ?**

**ಉತ್ತರ :–** ಅಂತಿಮ ದೈವಗ್ರಂಥದಲ್ಲಿ ಇಬ್ಬರು ಅಲ್ಲಾಹ್‌ರನ್ನು ಹೇಳಿದ್ದರೂ ಅದನ್ನು ಮುಸ್ಲೀಮ್‌ರು ಗ್ರಹಿಸಲಾರದೆ ಹೋಗಿದ್ದಾರೆ. ಅವರಿಗೆ ಇಬ್ಬರು ಅಲ್ಲಾಹ್‌ರು ಎಂದು ತಿಳಿಯದೆ ಹೋಗುವುದು ದೊಡ್ಡ ಜ್ಞಾನ ಲೋಪವಾಗಿದೆ.

ಆದ್ದರಿಂದ ಅವರು ಸಂಪೂರ್ಣ ಜ್ಞಾನಿಗಳು ಆಗಲಾರದೆ ಹೋಗಿದ್ದಾರೆ. ಅವರು ತಮಗೆ ಒಬ್ಬನೇ ಅಲ್ಲಾಹ್‌ಯೆಂದು ಹೇಳುತ್ತಿದ್ದಾರೆ. ಆರಾಧಿಸುವುದಕ್ಕೆ ಒಬ್ಬನೇ ಅಲ್ಲಾಹ್‌ಯೆಂದು, ತಿಳಿದುಕೊಳ್ಳುವುದಕ್ಕೆ ಇಬ್ಬರು ಅಲ್ಲಾಹ್‌ರು ಇದ್ದಾರೆಂದು, ಒಬ್ಬ ಅಲ್ಲಾಹ್‌ನನ್ನು ಆರಾಧಿಸಬೇಕೆಂದು, ಒಬ್ಬ ಅಲ್ಲಾಹ್‌ಗೆ ಭಯಪಡಬೇಕೆಂದು 16ನೇ ಸೂರಾ, 51ನೇ ಆಯತ್‌ನಲ್ಲಿ ಹೇಳಿದ ಮಾತನ್ನು ಅವರು ಗ್ರಹಿಸಿಕೊಳ್ಳ ಲಾರದೆ ಹೋಗಿದ್ದಾರೆ. ಇಬ್ಬರು ಅಲ್ಲಾಹ್‌ರು ಇದ್ದಾರೆಂದು, ಆರಾಧಿಸಲ್ಪಡುವ ಅಲ್ಲಾಹ್‌ನನ್ನು ಸೃಷ್ಠಿಸಿದ ಅಲ್ಲಾಹ್ ಈತನೇ ನಿಮ್ಮ "ಅಲ್ಲಾಹ್" ಎಂದು ತೋರಿಸಿದ್ದಾನೆಂದು ಸೂರಾ 3 ಆಯತ್ 18ರಲ್ಲಿ ಹೇಳಿದ ವಾಕ್ಯವನ್ನು ಕೂಡಾ ಗ್ರಹಿಸಲಾರದೆ ಹೋಗಿದ್ದಾರೆ. ಇಬ್ಬರು ಅಲ್ಲಾಹ್‌ರು ತಿಳಿಯುವವರೆಗು ಅವರ ಜ್ಞಾನದಲ್ಲಿ ಲೋಪವಿದ್ದಂತೇಯೆಂದು ತಿಳಿಯಿರಿ.

ಹಾಗೇ ಕ್ರೈಸ್ತರಲ್ಲಿ ತಮ್ಮ ಗ್ರಂಥವೆಂದು ಹೇಳಿಕೊಳ್ಳುವ ಬೈಬಲ್‌ನಲ್ಲಿ ಕುಮಾರನು ಒಬ್ಬನೇಯೆಂದು ಹೇಳುತ್ತಿರುವರು. ಆದರೇ ಬೈಬಲ್‌ನಲ್ಲಿ ಇಬ್ಬರು ಕುಮಾರರಿರುವ ವಿಷಯ ಅವರು ಗ್ರಹಿಸಲಿಲ್ಲ. ಒಬ್ಬ ಕುಮಾರನೇಯೆಂದು ಹೇಳುತ್ತಿದ್ದಾರೆ. ತಂದೆಯೊಬ್ಬನೇ ಪರಿಶುದ್ಧಾತ್ಮ ಒಂದೇ. ಕುಮಾರರು ಇಬ್ಬರು ಎಂದೂ, ಒಬ್ಬರು ತೀರ್ಪು ತೀರಿಸುವವನು ಶಾಶ್ವತ ಕುಮಾರನು. ಮತ್ತೊಬ್ಬನು ಜ್ಞಾನವನ್ನು ಬೋಧಿಸುವವನು ಅದ್ವಿತೀಯ ಕುಮಾರನು ಇದ್ದಾನೆನ್ನುವ ವಿಷಯ ಅವರಿಗೆ ತಿಳಿದಿಲ್ಲ. ಹಾಗೆಯೇ ಮುಸ್ಲಿಮ್‌ರಿಗೂ ಖುರಾನ್‌ನಲ್ಲಿ ಯಾವ ಅಲ್ಲಾಹ್ ಯಾವಾಗ ಮಾತನಾಡಿದ್ದಾನೆಂದು ತಿಳಿಯದಂತೆ, ಬೈಬಲ್‌ನಲ್ಲಿ ಯಾವ ಕುಮಾರನನ್ನು ಕುರಿತು ಯಾವಾಗ ಹೇಳಿದ್ದಾರೆನ್ನುವ ವಿಷಯ ಕ್ರೈಸ್ತರಿಗೆ ತಿಳಿದಿಲ್ಲ. ಇಬ್ಬರು ಕುಮಾರರನ್ನು ಕುರಿತು ತಿಳಿಯದೆ ಹೋಗುವುದು ಕ್ರೈಸ್ತರಲ್ಲಿರುವ ಲೋಪ. ಆದರೂ ಅವರ ಲೋಪ ಅವರಿಗೆ ತಿಳಿದಿಲ್ಲ. ಹೇಳಿದರೂ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ.

ಅದೇ ರೀತಿಯಾಗಿಯೇ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಆತ್ಮ, ಪರಮಾತ್ಮ ಇಬ್ಬರು ದೇವರುಗಳು ಇದ್ದಾರೆನ್ನುವ ವಿಷಯ ಪೂರ್ತಿಯಾಗಿ

ತಿಳಿದಿಲ್ಲ. ಎಷ್ಟು ತಿಳಿದವರಾದರೂ ಜೀವಿಯು, ದೇವರು ಯೆಂದು ಒಬ್ಬ ದೇವರನ್ನು ಕುರಿತು ಹೇಳುತ್ತಿರುತ್ತಾರೆ ಆದರೆ ಮಧ್ಯದಲ್ಲಿ ಆತ್ಮ ಎರಡನೆ ದೇವರಾಗಿ ಇದ್ದಾನೆನ್ನುವ ವಿಷಯ ತಿಳಿದಿಲ್ಲ. ಭಗವದ್ಗೀತೆಯನ್ನು ಓದಿದರೂ ಅದರಲ್ಲಿ ಮೂವರು ಪುರುಷರು ಮೂರು ಆತ್ಮಗಳಾಗಿ ಇದ್ದಾರೆಂದು, ಒಬ್ಬರು ಜೀವಾತ್ಮವಾದ ನಾವು ಆದಾಗ, ಇಬ್ಬರಲ್ಲಿ ಒಬ್ಬರು ಸೃಷ್ಠಿಕರ್ತನಾದ ದೇವರು. ಇನ್ನೊಬ್ಬರು ಸೃಷ್ಠಿಸಲ್ಪಟ್ಟ ದೇವರುಯೆಂದು ತಿಳಿದಿಲ್ಲ. ಸೃಷ್ಠಿಸಲ್ಪಟ್ಟಿರುವ ದೇವರಾದ ಆತ್ಮ ಮನುಷ್ಯರನ್ನು, ಸಮಸ್ತ ಜೀವರಾಶಿಗಳನ್ನು ಸೃಷ್ಠಿಸಿ. ಮನುಷ್ಯರಿಗೆ ಶಾಶ್ವತ ದೇವರಾಗಿ ಇದ್ದಾನೆಂದು ತಿಳಿದಿಲ್ಲ. ಭಗವದ್ಗೀತೆಯಲ್ಲಿ ಸೃಷ್ಠಿಕರ್ತನಾದ ಪರಮಾತ್ಮ ಸೃಷ್ಠಿಸಲ್ಪಟ್ಟಿರುವ ಆತ್ಮ ಎನ್ನುವ ಇಬ್ಬರು ಮಾತನಾಡಿ ಹೇಳಿದ ವಿಷಯಗಳು ಇವೆ.

ಈಗ ನೀವು ಕೇಳಿದ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಮೊದಲ ಮೂರು ಶ್ಲೋಕಗಳನ್ನು ಮತ್ತು ಅದೇ ಅಧ್ಯಾಯದಲ್ಲಿರುವ 15ನೇ ಶ್ಲೋಕವನ್ನು ನೋಡಿದರೆ ಹೀಗೆ ಇವೆ.

**ಶ್ಲೋ॥ 1. ಊರ್ಧ್ವ ಮೂಲ ಮದಶ್ಶಾಖ ಮಶ್ವತ್ಥಂ ಪ್ರಾಹು ರವ್ಯಯಮ್।**

**ಛನ್ದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥**

**ಭಾವಾರ್ಥ :–** ಮೇಲಕ್ಕೆ ಬೇರುಗಳು ಕೆಳಕ್ಕೆ ರೆಂಬೆಗಳು ಇರುವ ಅಶ್ವರ್ಥ ವೃಕ್ಷ ಅವ್ಯಯವಾದುದೆಂದೂ, ವೇದಗಳು ಎಲೆಗಳಾಗಿ ಇವೆಯೆಂದು ಯಾರು ತಿಳಿಯುವನೋ ಅವನು ವೇದಗಳನ್ನು ತಿಳಿದವನೆಂದು ಹೇಳಬಹುದು.

**ಶ್ಲೋ॥ 2.**

**ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರವೃದ್ಧಾ ವಿಷಯಪ್ರವಾಲಾಃ ।**

**ಅಧಶ್ಚ ಮೂಲಾನ್ಯನುಸನ್ತ ತಾನಿ ಕರ್ಮಾನು ಬನ್ಧೀನಿ ಮನುಷ್ಯಲೋಕೇ ॥**

**ಭಾವಾರ್ಥ :–** ಅಶ್ವರ್ಥ ವೃಕ್ಷವೊಂದರ ಶಾಖೆಗಳು **ಗುಣ ವಿಷಯಗಳಿಂದ** ವೃದ್ಧಿಯಾಗಿರುವವಾಗಿ ಅನೇಕ ದಿಕ್ಕುಗಳಿಗೆ ವ್ಯಾಪಿಸಿವೆ. ಇನ್ನೂ ಅದರ ಬೇರುಗಳು ವಿಸ್ತರಿಸಿರುವವಾಗಿ ಮನುಷ್ಯ ಲೋಕದಲ್ಲಿ ಪೂರ್ತಿ ವ್ಯಾಪಿಸಿವೆ.

**ಶ್ಲೋ॥ 3.**

**ನ ರೂಪ ಮಸ್ಯೇಹ ತಥೋ ಪಲಭ್ಯತೇ ನಾನ್ತೋನ ಚಾದಿ ರ್ನಚಸಮ್ಪ್ರತಿಷ್ಠಾ ।**

**ಅಶ್ವತ್ಥ ಮೇನಂ ಸುವಿರೂಢಮೂಲಂ ಮಸಂಗ ಶಸ್ತ್ರೇಣ ದೃಢೇನ ಛಿತ್ವಾ ॥**

**ಭಾವಾರ್ಥ :–**ಅಶ್ವರ್ಥ ವೃಕ್ಷವೊಂದರ ರೂಪವಾಗಲಿ, ಅದರ ಮೊದಲಾಗಲಿ, ಕೊನೆಯಾಗಲಿ, ಅದು ಇರುವ ಸ್ಥಿತಿಯಾಗಲಿ ಯಾರಿಗೂ ತಿಳಿಯುತ್ತಿಲ್ಲ. ದೃಢವಾದ ಮೂಲಗಳು ಬೇರುಗಳು ಇರುವ ಈ ವೃಕ್ಷವನ್ನು ಅಸಂಗ ಶಸ್ತ್ರದಿಂದ (ಯೋಗದಿಂದ) ಕಡಿಯಬೇಕು.

**ಶ್ಲೋ॥ 15.**

**ಸರ್ವಸ್ಯ ಚಾಹಂಹೃದಿ ಸನ್ನಿವಿಷ್ಟೋ ಮತ್ತಃ ಸೃತಿರ್ಜ್ಞಾನ ಮಪೋಹನಂಚ।**

**ವೇದೈಶ್ಚ ಸರ್ವೈರಹ ಮೇವ ವೇದ್ಯೋ ವೇದಾನ್ತಕೃ ದ್ವೇದವಿ ದೇವ ಚಾಹಮ್॥**

**ಭಾವಾರ್ಥ :–** ಸರ್ವಜೀವರಾಶಿಗಳ ಹೃದಿಸ್ಥಾನದಲ್ಲಿ ನಾನಿದ್ದೇನೆ. ಸ್ಮೃತಿ, ಜ್ಞಾನ, ಊಹೆ, ಅದರ ಮರೆವು ನನ್ನಿಂದಲೇ ಉಂಟಾಗುತ್ತಿವೆ. ವೇದ ವೇದಾಂತಗಳು ನನ್ನನ್ನೇ ತಿಳಿಸುತ್ತಿವೆ. ವೇದಗಳನ್ನು ತಿಳಿದವನು ನಾನೇ.

ಇಲ್ಲಿ ಈ ನಾಲ್ಕು ಶ್ಲೋಕಗಳಲ್ಲಿ ಚೆನ್ನಾಗಿ ಗಮನಿಸಿದರೆ ವೇದಗಳು ಶರೀರದಲ್ಲಿ ಈ ವಿಧವಾಗಿ ತಯಾರಾಗಿ, ಈ ವಿಧವಾಗಿ ವ್ಯಾಪಿಸಿ ಇವೆಯೆಂದು, ಅವು ಮನುಷ್ಯರಲ್ಲಿ ಪೂರ್ತಿ ವಿಸ್ತರಿಸಿದರೂ ಅವುಗಳನ್ನು ಕುರಿತು ಯಾರಿಗೂ ತಿಳಿದಿಲ್ಲವೆಂದು, ವೇದಗಳಿಂದ ಬಲವಾಗಿರುವ ಅಶ್ವರ್ಥ ವೃಕ್ಷವನ್ನು ಅಸಂಗ

ಶಸ್ತ್ರದಿಂದ (ಯೋಗದಿಂದ) ಖಂಡಿಸಬೇಕೆಂದು ಮೊದಲ ಮೂರು ಶ್ಲೋಕಗಳಲ್ಲಿ ಹೇಳಿದ್ದಾನೆ. ನಂತರ 15ನೇ ಶ್ಲೋಕದಲ್ಲಿ **"ನಾನು ಮನುಷ್ಯರ ಹೃದಯಗಳಲ್ಲಿ ಇದ್ದೇನೆಂದು, ನನ್ನಿಂದಲೇ ಮನುಷ್ಯರಿಗೆ ಸ್ಮೃತಿ, ಜ್ಞಾನ, ಊಹೆ ಉಂಟಾಗುತ್ತಿವೆ ಯೆಂದು"** ಹೇಳುವುದಲ್ಲದೆ, ವೇದಗಳು ಶರೀರದಲ್ಲಿ ಮಾಯ ರೂಪವಾಗಿ ತಯಾರಿ ಮಾಡಿದವನು ನಾನೇಯೆಂದು, ವೇದಗಳು ನನ್ನನ್ನು ಸೃಷ್ಟಿಕರ್ತನಾಗಿ ತಿಳಿಸುತ್ತಿರುವಾಗ, ವೇದಾಂತದಿಂದ ನಾನು (ಆತ್ಮ) ತಿಳಿಯಲ್ಪಡುವುದಲ್ಲದೆ, ನಾನು ಸೃಷ್ಟಿಸಿದ ವೇದಗಳು ನನಗೆ ಚೆನ್ನಾಗಿ ತಿಳಿದಿವೆಯೆಂದು ಎರಡನೆ ದೇವರು ಹೇಳಿದ್ದಾನೆ. ಹಿಂದೂ ಸಮಾಜದವರಿಗೆ ಇಬ್ಬರು ದೇವರುಗಳಿದ್ದಾರೆಂದು ತಿಳಿದಿಲ್ಲ. ಅದರಲ್ಲಿ ಆತ್ಮ ದೇವರಿದ್ದಾನೆಂದು ಭಗವದ್ಗೀತೆಯಲ್ಲಿ ಆತ್ಮ ದೇವರು ಗ್ರಂಥವೆಲ್ಲವೂ ಹೇಳಿದಾಗ, ವಿಶ್ವರೂಪ ಸಂದರ್ಶನ ಯೋಗ ಎನ್ನುವ ಅಧ್ಯಾಯದಲ್ಲಿ ಪರಮಾತ್ಮ ದೇವರು ಸ್ವತಃವಾಗಿ 48, 53 ಶ್ಲೋಕಗಳನ್ನು ಹೇಳಿದ್ದಾನೆಂದು ತಿಳಿಯಲಾರದೆಹೋಗಿದ್ದಾರೆ. ಹಿಂದೂಗಳು ಆತ್ಮ, ಪರಮಾತ್ಮ ಯೆನ್ನುವ ವಾಸ್ತವವಾದ ದೇವರುಗಳನ್ನು ಬಿಟ್ಟು, ಮನುಷ್ಯರಂತೆ ಸೃಷ್ಟಿಸಲ್ಪಟ್ಟ ದೇವತೆಗಳ ಜಾತಿಯಲ್ಲಿನ ದೇವರುಗಳನ್ನು ದೊಡ್ಡದಾಗಿ ಭಾವಿಸಿ ಮುಗಿಯುತ್ತಾ ಅಜ್ಞಾನ ಮಾರ್ಗದಲ್ಲಿ ಹೋಗುತ್ತಿದ್ದಾರೆ.

ಮೂರು ಮತಗಳಲ್ಲಿ ಸಂಪೂರ್ಣಜ್ಞಾನ ತಿಳಿಯದೆ, ಇಬ್ಬರು ದೇವರು ಗಳಿದ್ದಾರೆಂಬ ವಿಷಯ ತಿಳಿಯದೆ ಹೋಗಿರುವುದರಿಂದ, ಯಾರು ಯಾವಾಗ ಹೇಳುತ್ತಿದ್ದಾರೆಂದು ಗುರುತಿಸಲಾರದೆ ಹೋಗುತ್ತಿದ್ದಾರೆ. ಒಬ್ಬರು ಆರಾಧಿಸ ಬಹುದಾದ ದೇವರಾದಾಗ, ದೊಡ್ಡ ದೇವರಾದ ಪರಮಾತ್ಮನನ್ನು (ಪರಿಶುದ್ಧಾತ್ಮ ನನ್ನು) ಅಥವಾ ಸೃಷ್ಟಿಕರ್ತನಾದ ಅಲ್ಲಾಹ್‌ನನ್ನು ಸೇರಬೇಕಾಗಿದೆ. ಹಾಗೆ ಸೇರುವುದನ್ನು ಮುಕ್ತಿಹೊಂದುವುದೆಂದು ಕೆಲವರು, ಪರಲೋಕವನ್ನು ಹೊಂದುವು ದೆಂದು ಕೆಲವರು. ಅಲ್ಲಾಹ್ ಹತ್ತಿರಕ್ಕೆ ಸೇರುವುದೆಂದು ಕೆಲವರು ಹೇಳುತ್ತಿರುತ್ತಾರೆ. ಯಾರು ಹೇಗೆ ಹೇಳಿದರೂ ಎಲ್ಲರೂ ಹೇಳುವುದು ಮೋಕ್ಷವನ್ನು ಕುರುತೇ ಎಂದು ತಿಳಿಯಬೇಕು. ಹಾಗೇ **ಭಗವದ್ಗೀತೆಯಲ್ಲಿ ವೇದಗಳು ಅಥವಾ ಮಾಯೆ**

ಎಂದು ಹೇಳಿದರೂ, **ಬೈಬಲ್‌ನಲ್ಲಿ ಸಾತಾನ್ ಇಲ್ಲವೇ ಸರ್ಪ** ಎಂದು ಹೇಳಿದರೂ, **ಖುರ್‌ಆನ್‌ನಲ್ಲಿ ಸೈತಾನ್ ಅಥವಾ ಇಬ್ಲಿಸ್** ಎಂದು ಹೇಳಿದರೂ ಎಲ್ಲಾ ಒಂದೇಯೆಂದು ತಿಳಿಯಬೇಕು. ಸೃಷ್ಠಿಕರ್ತನಾದ ಮೊದಲ ಅಲ್ಲಾಹ್, ಸೃಷ್ಠಿಕರ್ತನಾದ ಪರಮಾತ್ಮ, ಸೃಷ್ಠಿಕರ್ತನಾದ ಪರಿಶುದ್ಧಾತ್ಮ ವೇದಗಳನ್ನು ಬಿಟ್ಟುಹಾಕೆಂದಿದ್ದಾನೆ. ಸೃಷ್ಠಿಸಲ್ಪಟ್ಟ ಅಲ್ಲಾಹ್‌ಯಾಗಲಿ, (ಆತ್ಮವಾಗಲಿ), (ತಂದೆಯಾಗಲಿ) ವೇದಗಳನ್ನು ಅಥವಾ ಮಾಯೆಯನ್ನು ಕುರಿತು ವಿವರವಾಗಿ ಹೇಳುತ್ತಿದ್ದಾನೆ. ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಮೊದಲಿರುವ (3) ಶ್ಲೋಕಗಳನ್ನು ಮತ್ತು 15ನೇ ಶ್ಲೋಕವನ್ನು ಸ್ವತಃವಾಗಿ ಆತ್ಮ ಹೇಳಿದೆ. ಅಲ್ಲಿ ವೇದಗಳ (ಗುಣಗಳ) ವಿವರವನ್ನು ಆತ್ಮ ಹೇಳಿದೆ. ಅದೇ ವಿಶ್ವರೂಪ ಸಂದರ್ಶನ ಯೋಗದಲ್ಲಿ **"ವೇದಗಳಿಂದ ನನ್ನನ್ನು ತಿಳಿಯುವುದಕ್ಕೆ ಶಕ್ಯವಾಗುವುದಿಲ್ಲ"** ಎಂದು ಹೇಳಿರುವುದು ಸೃಷ್ಠಿಕರ್ತನಾದ ಪರಮಾತ್ಮಯೆಂದು ತಿಳಿಯಬೇಕು. ಈ ವಿವರವನ್ನು ತಿಳಿಯದೆಹೋದರೆ ವೇದಗಳು ಕೆಲವರಿಗೆ ದೊಡ್ಡವಾಗಿ ಕಾಣಿಸಬಹುದು. ಈ ವಿಧವಾಗಿ ಜೀವನದಲ್ಲಿ ಇಬ್ಬರು ದೇವರುಗಳ ವಿಷಯ ತಿಳಿಯದಿದ್ದರೆ, ದೇವರಿಗು, ಮಾಯೆಗು ಇರುವ ತಾರತಮ್ಯ ತಿಳಿಯದಂತೆ ಹೋಗುತ್ತದೆ. ಹಾಗೆ ದೇವರ ಬೆಲೆಯನ್ನು, ಮಾಯೆ ಕೆಡುಕನ್ನು ತಿಳಿಯದವರು ಹೊರಗಿನ ವೇದಗಳನ್ನು ಆಶ್ರಯಿಸಿರುತ್ತಾರೆ.

**10) ಪ್ರಶ್ನೆ :- ಶರೀರವೆಲ್ಲಾ ವಿಷಯಗಳ ಪ್ರಭಾವ ವ್ಯಾಪಿಸಿದ್ದು, ವಿಷಯಗಳಲ್ಲಿಯೇ ಮನುಷ್ಯ (ಜೀವಿ) ನಿವಾಸಿಸುತ್ತಿದ್ದಾನೆಂದು ಹೇಳುವುದಕ್ಕೆ ಶರೀರವನ್ನು ಅಶ್ವರ್ಥ ವೃಕ್ಷಕ್ಕೆ ಹೋಲಿಸಿ, ರೆಂಬೆಗಳು ಎಲೆಗಳು ಶರೀರವೆಲ್ಲಾ ವ್ಯಾಪಿಸಿರುವಂತೆ ಹೋಲಿಕೆಯಿಂದ ಹೇಳಿದ್ದಾರೆ. ಹೋಲಿಕೆ ಇರುವ ವೃಕ್ಷವನ್ನು ಅಶ್ವರ್ಥ ವೃಕ್ಷವೆಂದು ಭಗವದ್ಗೀತೆ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಮೊದಲ ಶ್ಲೋಕದಲ್ಲಿಯೇ ಹೇಳಿದ್ದಾರೆ ಅಲ್ಲವೇ! ಅಶ್ವರ್ಥ ವೃಕ್ಷ ಎಂದರೇ ರಾಗಿ ಗಿಡ (ಆಲದ ಮರ) ಎಂದು ಕೆಲವರು**

**ಹೇಳುತ್ತಿದ್ದಾರೆ. ಹೊರಗೆ ರಾಗಿ ಗಿಡವನ್ನು ನೋಡಿದ್ದೇವೆ. ಹೊರಗಿನ ರಾಗಿಗಿಡವನ್ನು ಒಳಗಿರುವ ಅಶ್ವರ್ಥವೃಕ್ಷವಾಗಿ ಏಕೆ ಹೇಳಿದ್ದಾರೆ? ಹಾಗೆ ಹೇಳುವುದಕ್ಕೆ ಕಾರಣ ಏನಾದರೂ ಇದೆಯಾ? ನಾವು ಈ ವಿಷಯವನ್ನು ಕೇಳಿದಾಗ ದೇವತೆಗಳಲ್ಲಿ ದೊಡ್ಡ ದೇವರಾದ ವಿಷ್ಣುವಿಗೆ ನಿಲಯ ಅಶ್ವರ್ಥ ವೃಕ್ಷವೆಂದು ಹೇಳುತ್ತಿದ್ದಾರೆ. ಅವರು ಹೇಳುವುದು ಎಷ್ಟರಮಟ್ಟಿಗೆ ವಾಸ್ತವ? ನಮಗೆ ಅರ್ಥವಾಗುವಂತೆ ಹೇಳಬೇಕೆಂದು ಕೋರುತ್ತಿದ್ದೇವೆ?**

**ಉತ್ತರ :–** 'ಅಶ್ವರ್ಥ' ಎನ್ನುವ ಪದದಿಂದ ಹೇಳಲ್ಪಟ್ಟ ವೃಕ್ಷ ಶರೀರ ಹೋಲಿಕೆಯಲ್ಲಿಯೇ ಇದ್ದರೂ, ಹೊರಗೆ ರಾಗಿ ಗಿಡವಾಗಿ ಕಾಣಿಸುವುದು ವಾಸ್ತವವೇ. ಆದರೆ 'ಅಶ್ವರ್ಥ' ಎಂಬ ಪದಕ್ಕು, ರಾಗಿ ಗಿಡ ಎಂಬ ಪದಕ್ಕು ಅರ್ಥದಲ್ಲಿ ಯಾವ ಸಂಬಂಧವಿಲ್ಲ ಆದರೂ 'ಅಶ್ವರ್ಥ' ಎಂಬ ಹೆಸರಿಗೆ 'ರಾಗಿ' ಎಂಬ ಹೆಸರಿಗೆ ಏಕೆ ಮುಡಿಹಾಕಿದ್ದಾರೊ ಹೇಳುವವರಿಗೇ ತಿಳಿಯಬೇಕು. ವಾಸ್ತವವಾಗಿ ಅವರಿಗು ಕೂಡಾ ತಿಳಿದಿಲ್ಲ. ಒಬ್ಬರನ್ನು ನೋಡಿ ಇನ್ನೊಬ್ಬರು ಹೇಳುತ್ತಿದ್ದಾರೆ ಹೊರತು ಅರ್ಥವನ್ನು ತಿಳಿದು ಹೇಳಲಿಲ್ಲವೆಂದು ತಿಳಿಯುತ್ತಿದೆ. **ಅರ್ಥ ಎಂದರೇ ಧನ ಅಥವಾ ಸಾರಾಂಶವಾದುದೆಂದು** ತಿಳಿಯುತ್ತಿದೆ. **ಅಶ್ವ ಎಂದರೇ ವೇಗವಾಗಿ ಓಡುವುದು ಕುದುರೆ** ಎಂದು ತಿಳಿಯುತ್ತಿದೆ. ತಲೆಯಲ್ಲಿರುವ ಗುಣಗಳು ಕುದುರೆಯಂತೆ ವಿಷಯಚಿಂತನಗಳಲ್ಲಿ ಶರೀರವೆಲ್ಲ ಓಡುತ್ತಿವೆಯೆಂದು ಅರ್ಥವಾಗುವಂತೆ ಹೇಳುವುದಕ್ಕೆ ಶರೀರವನ್ನು ಅಶ್ವರ್ಥವೃಕ್ಷ ಎಂದಿದ್ದಾರೆ. ಕುದುರೆಯಲ್ಲಿ ಧನವಾದದು ಅಥವಾ ಸಾರವಾದುದು ವೇಗ. ಗುಣಗಳು ವೇಗವಾಗಿ ಚಲಿಸುತ್ತಿವೆಯೆಂದು ಹೇಳುವುದಕ್ಕೆ ಅಶ್ವರ್ಥ ಎಂದು ಹೆಸರಿಟ್ಟು, ಶರೀರವನ್ನು ವೃಕ್ಷಕ್ಕೆ ಹೋಲಿಸಿ ಅಶ್ವರ್ಥ ವೃಕ್ಷ ಎಂದಿದ್ದಾರೆ.

'ಅಶ್ವರ್ಥ ವೃಕ್ಷ' ಎಂದು ಶರೀರಕ್ಕೆ ಹೆಸರಿಟ್ಟು ಅದೇ ವೃಕ್ಷವನ್ನು ರಾಗಿಗಿಡವಾಗಿ ತೋರಿಸಿದ್ದಾರೆ. ವಾಸ್ತವಕ್ಕೆ ರಾಗಿಗಿಡಕ್ಕೆ ಅಶ್ವರ್ಥ ವೃಕ್ಷಕ್ಕು ಅರ್ಥದಲ್ಲಿ

ಸ್ವಲ್ಪವೂ ಹೋಲಿಕೆಯಿಲ್ಲ. ರಾಗಿಗಿಡವನ್ನು ಪೂರ್ವದಲ್ಲಿ ಹಾವಿನ ಗಿಡವಾಗಿ (ಪಾಮುಚೆಟ್ಟು) ಕರೆಯುತ್ತಿದ್ದರು. ರಾಗಿಗಿಡದ ಎಲೆಗಳೆಲ್ಲ 'ಹಾವಿನ ಹೆಡೆ' ಆಕಾರವನ್ನು ಹೋಲಿರುತ್ತವೆ. ರಾಗಿಗಿಡ ಎಲೆಗಳೆಲ್ಲ 'ಮನುಷ್ಯನ ಪ್ರಾಣವನ್ನು ಇಲ್ಲದಂತೆ ಮಾಡುವ ವಿಷಕ್ಕೆ ಸೂಚನೆಯಾಗಿ' ಇವೆ. ಮನುಷ್ಯನಲ್ಲಿನ ಗುಣಗಳು ಮನುಷ್ಯನನ್ನು (ಜೀವಿಯನ್ನು) ಕರ್ಮಗಳಲ್ಲಿ ಸಿಲುಕಿಕೊಂಡು ಬಾಧೆಪಡುವಂತೆ ಮಾಡುವುದರಿಂದ ಮನುಷ್ಯನನ್ನು ಬಾಧಿಸುವ ವಿಷಕ್ಕೆ ಗುರುತಾಗಿರುವ ರಾಗಿ ಗಿಡವನ್ನು ಅಶ್ವರ್ಥ ವೃಕ್ಷ ಎಂದು ಹೇಳಿದ್ದಾರೆ. ಅಷ್ಟೇ ಹೊರತು ರಾಗಿ ಗಿಡ ಬೇರೆ, ಅಶ್ವರ್ಥ ವೃಕ್ಷ ಬೇರೆಯಾಗಿ ಇವೆಯೆಂದು ಹೇಳಬಹುದು. ಗುಣಗಳಿಂದ ಮನುಷ್ಯ ರಕ್ಷಿಸಲ್ಪಟ್ಟರೇ ಆತನು ಮರಣ ರಹಿತನಾಗಿ ಮೋಕ್ಷವನ್ನು ಸೇರಿಹೋಗುವನು. ಹಾಗೇ ಹಾವಿನ ವಿಷದಿಂದ ಮನುಷ್ಯ ರಕ್ಷಿಸಲ್ಪಟ್ಟರೇ ಅವನು ಮರಣದಿಂದ ಹೊರಬಿದ್ದು ಜೀವಿಸುವನೆಂದು ಹೋಲಿಕೆಯಿಂದ ಹೇಳುವುದಕ್ಕೆ ಅಶ್ವರ್ಥ ವೃಕ್ಷವನ್ನು ರಾಗಿ ಗಿಡವನ್ನು ಒಂದಾಗಿ ಹೇಳಿದ್ದಾರೆ. ಒಳಗಿನ ಗುಣಗಳನ್ನು ಹೊರಗಿನ ಹಾವುಗಳಾಗಿ ತೋರಿಸುತ್ತಾ, ಹಾವಿನ ಹೆಡೆ ಆಕಾರವನ್ನು ಹೋಲಿದ ರಾಗಿಗಿಡವನ್ನು ಅಶ್ವರ್ಥ ವೃಕ್ಷ ಎಂದಿದ್ದಾರೆ. **'ರಾ'** ಎಂದರೆ ನಾಶ ಎಂದೂ, **'ವಿ'** ಎಂದರೆ ವಿಕಾರಗಳು ಎಂದೂ, ಕರ್ಮ ವಿಕಾರಗಳು ಎಂದರೆ ಕರ್ಮದಿಂದ ಮಾಡುವ ಕಾರ್ಯಗಳೆಂದೂ ಹೇಳಬಹುದು. ಕರ್ಮಗಳ ನಾಶನ ಮಾಡುವುದೆಂದು ಸಹ ರಾಗಿ ಎನ್ನುವ ಪದಕ್ಕೆ ಅರ್ಥವನ್ನು ಹೇಳಬಹುದು. ರಾಗಿಗಿಡ ಎಲೆಗಳ ಮೂಲಕ ಚಿಕಿತ್ಸೆ ಮಾಡಿದರೆ ಹಾವು ಕಡಿತಕ್ಕೆ ಗುರಿಯಾದ ಅವರ ಶರೀರದಲ್ಲಿನ ವಿಷವನ್ನು ಕೂಡಾ ಇಲ್ಲದಂತೆ ಮಾಡಬಹುದು. ಆದ್ದರಿಂದ ರಾಗಿಗಿಡ ವಿಶೇಷವಾದುದೆಂದು, ಪ್ರತ್ಯೇಕತೆ ಇದೆಯೆಂದು ಹಿರಿಯರು ಹೇಳುತ್ತಿರುವರು.

**11) ಪ್ರಶ್ನೆ :– ಬ್ರಾಹ್ಮಣರು ಎಂದರೆ 'ಬ್ರಹ್ಮಜ್ಞಾನ ತಿಳಿದವರು' ಎಂದು ಅರ್ಥ ಅಲ್ಲವೆ! ಅಂತಹ ಬ್ರಾಹ್ಮಣರು ವೇದಗಳ ಹಿಂದೆ ಏಕೆ**

**ಹೋಗುತ್ತಿದ್ದಾರೆ? ದೇವರು ತನ್ನ ಗ್ರಂಥದಲ್ಲಿ 'ವೇದಗಳಿಂದ ದೇವರು ತಿಳಿಯುವುದಿಲ್ಲ' ಎಂದು ಹೇಳಿದರೂ ವೇದಗಳನ್ನು ಏಕೆ ಬಿಡುತ್ತಿಲ್ಲ?**

**ಉತ್ತರ :– "ಬ್ರಹ್ಮಜ್ಞಾನವನ್ನು ತಿಳಿದವರು ಬ್ರಾಹ್ಮಣರು"** ಎಂದು ಹೇಳುವುದು ಇದೆ. ಬ್ರಹ್ಮಜ್ಞಾನ ಎಂದರೆ ದೊಡ್ಡ ಜ್ಞಾನ ಎಂದು ಅರ್ಥ. ಬ್ರಹ್ಮಜ್ಞಾನ ಬ್ರಹ್ಮವಿದ್ಯೆಯಿಂದ ಲಭ್ಯವಾಗುತ್ತದೆ. ಬ್ರಹ್ಮವಿದ್ಯೆ ಎನ್ನುವುದು ಆರು ಶಾಸ್ತ್ರಗಳಲ್ಲಿ ಒಂದು ಶಾಸ್ತ್ರ. ಷಟ್ ಶಾಸ್ತ್ರಗಳಲ್ಲಿ ಕೊನೆಯದು, ದೊಡ್ಡದು ಬ್ರಹ್ಮವಿದ್ಯಾ ಶಾಸ್ತ್ರ. ಷಟ್ ಶಾಸ್ತ್ರಗಳಲ್ಲಿ ಎಲ್ಲದಕ್ಕಿಂತ ದೊಡ್ಡದು ಆಗಿರುವುದರಿಂದ ಅದಕ್ಕೆ **ಬ್ರಹ್ಮ** ಎಂದು ಹೆಸರು ಬಂದಿದೆ. ಬ್ರಹ್ಮ ಎಂದರೆ ದೊಡ್ಡದೆಂದು ಅರ್ಥವಾದಾಗ ಬ್ರಹ್ಮವಿದ್ಯೆಯನ್ನು ಕಲಿತವರು ದೊಡ್ಡವರು ಎಂದು ಹೇಳಲ್ಪಡುವರು. ಆದ್ದರಿಂದ ಬ್ರಾಹ್ಮಣರು ಎನ್ನುವ ಹೆಸರಿರುವವರು, ಅವರು ಕಲಿತ ವಿದ್ಯೆಗೆ ತಕ್ಕಹಾಗೆ ಉನ್ನತವಾದ ಭಾವ ಹೊಂದಿರುವರು. ಉನ್ನತ ಭಾವ ಇರುವವನನ್ನು ಬ್ರಾಹ್ಮಣನು ಎಂದಾಗ ಉನ್ನತವಾದ ಭಾವವಿಲ್ಲದವನನ್ನು ಬ್ರಾಹ್ಮಣ ಎನ್ನುವುದಕ್ಕೆ ಅವಕಾಶವಿಲ್ಲ. ದೊಡ್ಡ ಭಾವ ಇಲ್ಲದವನನ್ನು ಚಿಕ್ಕ ಭಾವ ಇರುವವನಾಗಿ ಲೆಕ್ಕಿಸಬೇಕು. ಬ್ರಹ್ಮವಿದ್ಯೆಯನ್ನನುಸರಿಸಿ ಬ್ರಾಹ್ಮಣ ಎಂದು ಪೂರ್ವದಲ್ಲಿ ಅನ್ನುತ್ತಿದ್ದರು. ಬ್ರಹ್ಮವಿದ್ಯೆ ಇಲ್ಲದವನನ್ನು, ಉಳಿದ ಐದು ವಿದ್ಯೆಗಳು ಕಲಿತರೂ ಅವನನ್ನು ಸ್ವಲ್ಪ ವಿದ್ಯೆ ಇರುವವನು ಎಂದು ಹೇಳಬೇಕು. ಸ್ವಲ್ಪ ವಿದ್ಯೆ ಇರುವವನ ಭಾವಗಳು ಸ್ವಲ್ಪವಾಗಿಯೇ ಇರುತ್ತವೆ ಎಂದು ಅನ್ನುತ್ತಿದ್ದರು.

ಪೂರ್ವದಲ್ಲಿ ಆತ್ಮ ವಿದ್ಯೆಯನ್ನು **"ಬ್ರಹ್ಮವಿದ್ಯೆ"** ಎಂದು ಹೇಳುವುದೇ ಅಲ್ಲದೆ ಆತ್ಮವನ್ನು ದೊಡ್ಡದಾಗಿ, ಆತ್ಮ ಅಲ್ಲದವುಗಳನ್ನು ಚಿಕ್ಕದಾಗಿ ಹೇಳುತ್ತಿದ್ದರು. ಆತ್ಮವನ್ನು ಕುರಿತು ತಿಳಿದವರನ್ನು ಬ್ರಹ್ಮವಿದ್ಯೆ ತಿಳಿದವರೆಂದು, ಬ್ರಾಹ್ಮಣರೆಂದು ಅವರು ಕಲಿತ ವಿದ್ಯೆಯನ್ನನುಸರಿಸಿ ಹೇಳುತ್ತಿದ್ದರು. ಆದರೆ ಈ ದಿನ ಬ್ರಾಹ್ಮಣ ಎನ್ನುವುದು ಕಲಿತ ವಿದ್ಯೆಯನ್ನನುಸರಿಸಿ ಅಲ್ಲದೆ ಹುಟ್ಟಿದ ಕುಲವನ್ನನು ಸರಿಸಿಯೆಂದು ಹೇಳುತ್ತಿದ್ದಾರೆ. ಹುಟ್ಟಿದ ಕುಲವನ್ನನುಸರಿಸಿ ಅವನಿಗೆ ಬ್ರಹ್ಮವಿದ್ಯೆ

ಬಂದರೂ ಬಾರದಿದ್ದರೂ, ಉನ್ನತವಾದ ಭಾವವಿದ್ದರೂ ಇಲ್ಲದಿದ್ದರೂ, ಆತ್ಮಜ್ಞಾನವಿದ್ದರೂ ಇಲ್ಲದಿದ್ದರೂ ಬ್ರಾಹ್ಮಣ ಎನ್ನುತ್ತಿದ್ದಾರೆ. ವಿದ್ಯೆಯನ್ನನುಸರಿಸಿ ಅಲ್ಲದೆ ಕುಲವನ್ನನುಸರಿಸಿ ಬ್ರಾಹ್ಮಣ ಎಂದಾಗ ಅವನಿಗೆ ಬ್ರಹ್ಮವಿದ್ಯೆ ಯೊಂದಿಗೆ ಕೆಲಸವಿಲ್ಲವೆಂದು ಹೇಳಬಹುದು. ದೊಡ್ಡ ಕುಲವೆಂದು ಹೆಸರು ಬಂದ ನಂತರ ಚಿಕ್ಕ ಕುಲವೆಂದು ಹೇಳುವುದಕ್ಕೆ ಅವಕಾಶ ಬಂದಿದೆ. ಹಾಗೆಯೇ ಅನೇಕ ಕುಲಗಳು ಭೂಮಿಮೇಲೆ ಕೃತಯುಗದಲ್ಲಿಯೇ ಏರ್ಪಟ್ಟಿವೆಯೆಂದು ತಿಳಿಯುತ್ತಿದೆ. **ಮಾನವಜಾತಿಗೆ ಕುಲವ್ಯವಸ್ಥೆ ಒಂದು ತೆಗುಲು (ಚೀಡೆ)** ಹಾಗೆ ಕೆಲಸ ಮಾಡುತ್ತಿದೆ. ಹಿಂದೆ ಮೂರು ಯುಗಗಳಲ್ಲಿ ಭಾರತದೇಶವನ್ನು **ಕುಲ** ಎನ್ನುವುದು ಅಜ್ಞಾನ ಸ್ಥಿತಿಗೆ ತೆಗೆದುಕೊಂಡು ಹೋದಾಗ, ಕಲಿಯುಗದಲ್ಲಿ **ಮತ** ಎನ್ನುವುದು ಬಂದು ಒಟ್ಟಾರೆ ಪ್ರಪಂಚವನ್ನು ಉನ್ನತವಾದ ಭಾವದಿಂದ ನೀಚ ಭಾವದ ಕಡೆಗೆ, ಜ್ಞಾನದಕಡೆಯಿಂದ ಅಜ್ಞಾನದ ಕಡೆಗೆ ತೆಗೆದುಕೊಂಡು ಹೋಗಿದೆ.

ಈ ದಿನ ಕುಲ, ಮತ ಪಂಥಗಳ ನಡುವೆ ಹುಳುಕು ಭಾವಗಳಿರುವ ಮನುಷ್ಯನಿಗೆ ಬ್ರಹ್ಮವಿದ್ಯೆ ಎಂದರೆ ಏನೋ, ದೈವಜ್ಞಾನ ಎಂದರೆ ಏನೋ ತಿಳಿಯದಂತೆ ಹೋಗಿದೆ. ಕುಲ ಎನ್ನುವ ಮಾಯೆಯಿಂದ ನೀಚ ಭಾವಗಳಿರುವ ವರು ಸಹ ಬ್ರಾಹ್ಮಣರು ಎಂದು ಹೇಳಲ್ಪಟ್ಟಂತೆ, ಮತ ಎನ್ನುವ ಮಾಯೆಯಿಂದ ಅಜ್ಞಾನದಲ್ಲಿರುವವರು ಕೂಡಾ ನಮ್ಮದು ದೊಡ್ಡ ಜ್ಞಾನವಿರುವ ಮತವೆಂದು, ಇತರರದು ಚಿಕ್ಕ ಜ್ಞಾನವಿರುವ ಮತ ಎಂದು ಅನ್ನುತ್ತಿದ್ದಾರೆ. ನನ್ನ ಮತ ದೊಡ್ಡದು, ನನ್ನ ಮತ ದೊಡ್ಡದು ಎನ್ನುವ ಇಂದಿನ ಕಾಲದಲ್ಲಿ ಭಾರತದೇಶದಲ್ಲಿ ಹಿಂದೂಮತ ಇದೆ. ಉಳಿದ ಮತಗಳಲ್ಲಿ ಬ್ರಾಹ್ಮಣ ಕುಲ ಎನ್ನುವುದು ಇಲ್ಲ. ಹಿಂದೂ ಮತದಲ್ಲಿಯೇ ಬ್ರಾಹ್ಮಣ ಕುಲವಿದೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರಿಗೆ ಬ್ರಹ್ಮಜ್ಞಾನ ತಿಳಿಯದಿದ್ದರೂ ಅವರು ಬ್ರಾಹ್ಮಣರಾಗಿ ಚಲಾವಣೆ ಆಗುತ್ತಿದ್ದಾರೆ. ದೈವಜ್ಞಾನದೊಂದಿಗೆ ಪ್ರಾರಂಭವಾದ ಬ್ರಾಹ್ಮಣರು ಕೊನೆಗೆ ಕುಲದಿಂದ ಬ್ರಾಹ್ಮಣರು ಎಂದು ಹೇಳಲ್ಪಡುತ್ತಿದ್ದಾರೆ. ಅವರು ಹೇಗೆ ಹೇಳಲ್ಪಟ್ಟರೂ ಅವರಲ್ಲಿ ಬ್ರಹ್ಮಜ್ಞಾನ ಇಲ್ಲದಿರುವುದರಿಂದ ಅಜ್ಞಾನ ದಾರಿಯಲ್ಲೇ ಇದ್ದಾರೆಂದು ಹೇಳಬಹುದು. ಅಂತಹ

ತಿಳಿಯದ ಅಜ್ಞಾನ ಸ್ಥಿತಿಯಲ್ಲಿ ದೈವಜ್ಞಾನ ಇಲ್ಲದವು, ಗುಣ ವಿಷಯಗಳೊಂದಿಗೆ ಕೂಡಿಕೊಂಡಿರುವವಾದ ವೇದಗಳನ್ನು ಕುಲ ಬ್ರಾಹ್ಮಣರು ಆಶ್ರಯಿಸುವುದು ನಡೆಯುತ್ತಿದೆ. **"ವೇದದಿಂದ ವೇದನೆಗ ಳೊಂದಿಗೆ ಕೂಡಿಕೊಂಡ ಕರ್ಮಗಳು ಬರುತ್ತವೆಂದು"** ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿ 43ನೇ ಶ್ಲೋಕದಲ್ಲಿ **"ಜನ್ಮ ಕರ್ಮ ಫಲ ಪ್ರದಾಮ್"** ಎಂದೂ **"ಕ್ರಿಯಾ ವಿಶೇಷ ಬಹುಳಾಂ"** ಎಂದೂ ಹೇಳಿದ್ದಾರೆ. ಅದೇ ಬ್ರಹ್ಮ ಜ್ಞಾನದಲ್ಲಾದರೆ ಜನ್ಮ ಕರ್ಮಗಳು ಇಲ್ಲದಂತೆ ಹೋಗಿ ಮುಕ್ತಿ ಲಭಿಸುತ್ತದೆ. ಪೂರ್ವದಲ್ಲಿ ಕೆಲವು ಕುಲದವರಿಗೆ ಕೆಲವು ಕೆಲಸಗಳು ಕುಲ ವೃತ್ತಿಯಾಗಿ ಇದ್ದವು.

ಹಾಗೆ ಅನೇಕ ಕುಲಗಳಿಗೆ ಅನೇಕ ಸಂಪ್ರದಾಯ ವೃತ್ತಿಗಳು ಇರುತ್ತಿದ್ದವು. ಉದಾಹರಣೆಗೆ ಕುಂಬಾರ ಕುಲದವರಿಗೆ ಮಡಕೆ ತಯಾರಿಸುವುದು ವೃತ್ತಿಯಾಗಿ ಇತ್ತು. ಹಾಗೇ ಪೂರ್ವದಲ್ಲಿ ನಾಯಕ (ವಾಲ್ಮೀಕಿ) ಕುಲದವರು ಅಡವಿಯಲ್ಲಿದ್ದು ದಾರಿ ದರೋಡೆ ಮಾಡುತ್ತಿದ್ದರು. ವಾಲ್ಮೀಕಿ ಸಹ ಕಳ್ಳತನ ಮಾಡುತ್ತಿದ್ದನೆಂದು ಹೇಳುತ್ತಿದ್ದರು. ಆದರೆ ಈ ದಿನ ಕುಂಬಾರ ಮಡಕೆಗಳನ್ನು ಮಾಡುತ್ತಿಲ್ಲ. ನಾಯಕರು ಕಳ್ಳತನ ಮಾಡುತ್ತಿಲ್ಲ. ಹಾಗೇ ಬ್ರಾಹ್ಮಣ ಕುಲದವರು ಪೂರ್ವದಲ್ಲಿ **'ಬ್ರಹ್ಮವಿದ್ಯೆ'** ಯೆನ್ನುವ ದೈವಜ್ಞಾನವನ್ನು ಬೋಧಿಸುತ್ತಿದ್ದರು. ಆದರೆ ಕಮ್ಮಾರ, ಕುಂಬಾರ ಕುಲ ವೃತ್ತಿಗಳನ್ನು ಬಿಟ್ಟು ಸಮಾಜದಲ್ಲಿ ಕಷ್ಟಪಟ್ಟು ಬದುಕುತ್ತಿರುವಾಗ, ಬ್ರಾಹ್ಮಣರು ಈ ದಿನ ಬ್ರಹ್ಮಜ್ಞಾನವನ್ನು ಕಿಂಚಿತ್ತಾದರೂ ತಿಳಿಯದಂತೆ ಹೋಗಿದ್ದಾರೆ. ಉಳಿದ ಕುಲದವರು ಕೆಲಸ ಮಾಡಿ ಬದುಕಿದಂತೆ, ಬದುಕುವುದಕ್ಕೆ ವೇದಗಳನ್ನು ಆಶ್ರಯಿಸಿ ವೇದಗಳನ್ನು ಓದುತ್ತಾ, ಯಜ್ಞಗಳನ್ನು ಮಾಡುತ್ತಾ, ವೇದಗಳನ್ನು ಹೇಳುತ್ತಾ, ಪೂಜೆಗಳು ಮಾಡುತ್ತಾ, ಆ ಕೆಲಸದಿಂದ ಬರುವ ಆದಾಯದಿಂದ ಬದುಕುತ್ತಿದ್ದಾರೆ. ವೇದಗಳನ್ನು ಹೇಳುವುದೇ ಕುಲವಿದ್ಯೆಯಾಗಿ ಇಟ್ಟುಕೊಂಡು, ಹೆಚ್ಚಿನದಾಗಿ ವೇದಗಳನ್ನು ಆಶ್ರಯಿಸಿ, ವೇದಗಳನ್ನು ಹೇಳುತ್ತಾ ಅದನ್ನೇ ಬದುಕು ಬಾಳ್ವೆಯಾಗಿ ಮಾಡಿಕೊಂಡಿದ್ದಾರೆ. ಕೆಲವರು ಬ್ರಾಹ್ಮಣರು ಇತರ ಕೆಲಸಗಳು, ಉದ್ಯೋಗಗಳು ಮಾಡುತ್ತಾ ಬದುಕುತ್ತಿದ್ದಾರೆ. ದೇವರು

ತನ್ನ ದೈವಗ್ರಂಥವಾದ ಭಗವದ್ಗೀತೆಯಲ್ಲಿ **"ವೇದಗಳಿಂದ ದೇವರು ತಿಳಿಯುವುದಿಲ್ಲ"** ಎಂದು ಹೇಳಿದರೂ, ದೇವರನ್ನು ತಿಳಿಯುವುದಕ್ಕೆ ಅಲ್ಲದಿದ್ದರೂ ಹೊಟ್ಟೆ ಪಾಡಿಗಾಗಿ ಬ್ರಾಹ್ಮಣರು ವೇದಗಳನ್ನು ಆಶ್ರಯಿಸಬೇಕಾಗಿ ಬಂದಿದೆ. ಕೊನೆಗೆ ವೇದಗಳನ್ನು ಅಧ್ಯಾಯನ ಮಾಡಿ, ವೇದಗಳನ್ನು ಓದಿ ಮದುವೆಗಳು, ಪೂಜೆಗಳು, ಯಜ್ಞಗಳು ಮುಂತಾದವು ಮಾಡುತ್ತಾ ಆ ಕೆಲಸವನ್ನೇ ಕುಲವೃತ್ತಿಯಾಗಿ ಮಾಡಿಕೊಳ್ಳಬೇಕಾಗಿ ಬಂದಿದೆ.

ಮನುಷ್ಯ ಬದುಕುವುದಕ್ಕೆ ಯಾವುದೋ ಒಂದು ಕೆಲಸವನ್ನು ಕಲ್ಪಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ತಾವು ಹೇಳುವ ವೇದಗಳಿಂದ ದೈವ ಜ್ಞಾನ ಉಂಟಾಗುತ್ತದೆಂದು, ಮುಕ್ತಿ ಬರುತ್ತದೆಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ! ದೇವರು ತನ್ನ ಗ್ರಂಥದಲ್ಲಿ **'ವೇದಗಳಿಂದ ನಾನು ತಿಳಿಯುವುದಿಲ್ಲ'** ಎಂದು ಹೇಳಿರುವಾಗ, ವೇದಗಳಿಂದ ದೇವರು ತಿಳಿಯುವನು ಎಂದು ಹೇಳುವುದು ನ್ಯಾಯವಲ್ಲ. 'ಜಾರತನ ಕಲಿತವಳು ಸುಳ್ಳನ್ನು ತಿಳಿಯಳಾ' ಎನ್ನುವ ಗಾದೆಮಾತನ್ನು ಹೇಳಿದಂತೆ, ತಾನು ದೇವರಿಗೆ ವಿರುದ್ಧವಾದ ಕೆಲಸವನ್ನು ಮಾಡುತ್ತಾ, ತನ್ನ ತಪ್ಪನ್ನು ಸಮರ್ಥಿಸಿಕೊಳ್ಳುವುದಕ್ಕೆ ಅಸತ್ಯವನ್ನು ಹೇಳುವುದು ಅನ್ಯಾಯವಾಗುತ್ತದೆ. ಈ ದಿನ ಬ್ರಾಹ್ಮಣ ಕುಲದವರಿಗೆ ಹೊಟ್ಟೆಪಾಡಿಗಾಗಿ, ಕುಲವಿದ್ಯೆಯಾಗಿ ವೇದಗಳಿರುವುದರಿಂದ ವೇದಗಳನ್ನು ಬ್ರಾಹ್ಮಣರು ಬಿಡಲಾರ ದಂತಿದ್ದಾರೆ. ಅಲ್ಲಿಗೆ ನಿಲ್ಲದೆ ಅಸಲಾದ ಆಧ್ಯಾತ್ಮಿಕ ನಿಪುಣರನ್ನು ಅಸೂಯೆಯಿಂದ ನೋಡುತ್ತಾ, ಯೋಗಿಗಳನ್ನು, ಜ್ಞಾನಿಗಳನ್ನು ಗೌರವಿಸದೆ ತಾವೇ ನಿಜವಾದ ಜ್ಞಾನಿಗಳು ಎನ್ನುವಂತೆ ಹೇಳನವಾಗಿ ಮಾತನಾಡುತ್ತಿದ್ದಾರೆ.

**12. ಪ್ರಶ್ನೆ :– ಒಂದು ಚರ್ಚಾವೇದಿಕೆಯಲ್ಲಿ ಒಬ್ಬ ಬ್ರಾಹ್ಮಣನು ಮಾತನಾಡುತ್ತಾ "ವೇದಗಳು ಅಪೌರುಷಗಳು, ವೇದಗಳು ಯಾವ ಪುರುಷನೂ ಬರೆದಿಲ್ಲ. ವೇದಗಳನ್ನು ದೇವರೆ ಸ್ವತಃವಾಗಿ ತಯಾರಿಸಿ ಕಳುಹಿಸಿದ್ದಾನೆ. ಆದ್ದರಿಂದ ವೇದಗಳು ಅಪೌರುಷಗಳೆಂದು ಹೇಳಲ್ಪಟ್ಟಿವೆ"**

**ಎಂದು ಅಂದಿದ್ದಾರೆ. ವೇದಗಳನ್ನು ಮನುಷ್ಯರು ಬರೆಯದೆ ಹೋದರೆ "ಯಾವ ಕೆಲಸವನ್ನು ಮಾಡುವುದಿಲ್ಲ" ಎಂದು ಹೇಳಿದ ದೇವರು ಹೇಗೆ ವೇದಗಳನ್ನು ಬರೆಯುವನು? ವೇದಗಳನ್ನು ದೇವರೇ ಬರೆದಿದ್ದರೇ "ತನ್ನನ್ನು ತಿಳಿದುಕೊಳ್ಳುವುದಕ್ಕೆ ವೇದಗಳು ಕೆಲಸಕ್ಕೆ ಬರುವುದಿಲ್ಲ" ಎಂದು ಯಾಕೆ ದೇವರು ಹೇಳಿದ್ದಾನೆ? ಅಷ್ಟೇ ಅಲ್ಲದೆ ಸಾಂಖ್ಯ ಯೋಗದಲ್ಲಿ "ವೇದಗಳಿಂದ ವೇದನೆಗಳು ಉಂಟಾಗುತ್ತವೆಂದು" ಏಕೆ ಹೇಳಿದ್ದಾನೆ?**

**ಉತ್ತರ :–** ಪೂರ್ವದಲ್ಲಿ ಒಂದು ಗಾದೆಮಾತು ಇತ್ತು, ಅದು ಏನೆಂದರೆ! **"ಪೌರುಷಕ್ಕೆ ಮಂಗಳ ಕತ್ತಿಗಳನ್ನು ನುಂಗಿದಂತೆ"** ಎಂದು ಹೇಳುತ್ತಿದ್ದರು. ಒಂದು ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಂದಿಗೆ ಮಾತನಾಡುತ್ತಾ **"ಪೌರುಷಕ್ಕೆ ಮಂಗಳ ಕತ್ತಿಗಳು ನುಂಗಿದರೇ ಜೀವನ ಇಲ್ಲದಂತೆ ಸಾಯುತ್ತೀಯ"** ಎಂದನಂತೆ. ಈ ಮಾತು ಹೊರಗೆ ಪ್ರಪಂಚ ಸಂಬಂಧವಾಗಿ ಮಾತನಾಡಿದಂತೆ ಕಾಣಿಸುತ್ತಿದೆ. ಹೊರಗಿನ ಸಂಬಂಧವಾಗಿ ನೋಡಿದರೇ ರೋಷ ಇರುವವನು ಕೋಪದಿಂದ ಮಂಗಳ ಕತ್ತಿಗಳನ್ನು ನುಂಗಿದರೇ ಅವುಗಳಿಂದ ಹೊಟ್ಟೆಯಲ್ಲಿ ಪ್ರಮಾದ ಉಂಟಾಗಿ, ಕತ್ತಿಗಳು ಕೊಯ್ದು ಮನುಷ್ಯ ಮರಣಿಸುವನು ಎಂದು ಹೇಳಿದಂತೆ ಇದೆ. ಆದರೇ ಈ ಮಾತನ್ನು ಪೂರ್ವದಲ್ಲಿ ಪ್ರಪಂಚ ಸಂಬಂಧವಾಗಿ ಹೇಳದಂತೆ, ಆಧ್ಯಾತ್ಮಿಕ ಕೋನದಲ್ಲಿ ಹೇಳಿದ್ದಾರೆಂದು ತಿಳಿಯುತ್ತಿದೆ. ಆಧ್ಯಾತ್ಮಿಕ ಕೋನವಾಗಿ ವಿವರವನ್ನು ನೋಡಿದರೆ, ಮಂಗಳ ಕತ್ತಿಗಳು ಎಂದರೆ ಜ್ಞಾನದ ಮಾತುಗಳು ಎಂದೂ, ನುಂಗಿದರೇ ಎಂದರೆ ಜ್ಞಾನವನ್ನು ಗ್ರಹಿಸಿಕೊಂಡರೇಯೆಂದು ಅರ್ಥ ವಿದೆ. **ಮಂಗಳ** ಎಂದರೆ **ಮೋಕ್ಷ** ಎಂದೂ, **ಮಂಗಳ ಕತ್ತಿಗಳು** ಎಂದರೆ **ಮೋಕ್ಷವನ್ನು ಕುರಿತು ತಿಳಿಸುವ ಧರ್ಮಗಳು** ಎಂದು ಅರ್ಥ. **ಪೌರುಷ** ಎಂದರೆ **ಪುರುಷತ್ತ್ವ** ಇರುವುದೆಂದು ಅರ್ಥ. ಪುರುಷತ್ತ್ವ ಇರುವುದು ಎಂದರೆ **ಆತ್ಮ ತತ್ತ್ವ** ಇರುವುದೆಂದು ಅರ್ಥ. **ಪುರುಷನಾದ ಪರಮಾತ್ಮಕ್ಕಾಗಿ ಜ್ಞಾನ ಸಂಬಂಧ ಬೋಧನೆಗಳನ್ನು ಗ್ರಹಿಸಬೇಕು** ಎಂದು ಅರ್ಥ ಬರುತ್ತಿದೆ. ಆಧ್ಯಾತ್ಮಿಕ ರೀತಿಯಲ್ಲಿ

ಪೌರುಷ ಎಂದರೆ ದೈವವಿರುವುದು ಎಂದೂ, ಅಪೌರುಷ ಎಂದರೆ ದೈವವಿಲ್ಲದ್ದು ಎಂದೂ ಅರ್ಥ ಬರುತ್ತಿದೆ.

ವೇದಗಳು ಅಪೌರುಷಗಳು ಎಂದರೆ ವೇದಗಳಲ್ಲಿ ಪುರುಷನಾದ ಆತ್ಮವಾಗಲೀ, ಪರಮಾತ್ಮವಾಗಲಿ ಇಲ್ಲವೆಂದು, ಪ್ರಕೃತಿಯಿಂದ ತಯಾರಾದ ಮಾಯೆ ಹೊರತು ದೈವ ಅದರಲ್ಲಿ ಇಲ್ಲವೆಂದು ಹೇಳುವುದನ್ನು ಕೆಲವರು ತಮ್ಮ ಮಾತುಗಳಲ್ಲಿ **"ವೇದಗಳು ಅಪೌರುಷಗಳೆಂದು"** ಹೇಳಿದ್ದಾರೆ. ಆ ಮಾತಿಗೆ ವೇದಗಳು ದೇವರನ್ನು ತಿಳಿಸುವವು ಅಲ್ಲ ಎಂದು ಅರ್ಥವಿದೆ. ದೇವರು ವೇದಗಳನ್ನು ಎಲ್ಲಿಯಾಗಲೀ, ಯಾವಾಗಾಗಲಿ ಹೇಳಲಿಲ್ಲ. ವೇದಗಳನ್ನು ಅನೇಕಮಂದಿ ವ್ಯಾಸಗಳಾಗಿ ಬರೆದಿಟ್ಟಾಗ, ಅವುಗಳೆಲ್ಲವನ್ನೂ ಶೇಕರಿಸಿದ ವ್ಯಾಸನು ಗ್ರಂಥಗಳಾಗಿ ಮಾಡಿದ್ದಾನೆ. ಹಾಗೆ ಮನುಷ್ಯನಾದ ವ್ಯಾಸನು ಬರೆದಿರುವವು ವೇದಗಳು ಎಂದು ತಿಳಿಯುತ್ತಿದೆ. ಇದನ್ನನುಸರಿಸಿ ವೇದಗಳು ಐದು ಸಾವಿರ ವರ್ಷಗಳ ಕೆಳಗೆ ಮನುಷ್ಯರಿಂದ ಬರೆಯಲ್ಪಟ್ಟಿವೆಯೆಂದು ತಿಳಿಯುತ್ತಿದೆ. ಅಷ್ಟೇ ಹೊರತು ಮನುಷ್ಯರು ವೇದಗಳನ್ನು ಬರೆಯಲಿಲ್ಲವೆಂದು ಹೇಳುವುದು ಪೂರ್ತಿ ಅಸತ್ಯ. ಕೆಲವರು ಬ್ರಾಹ್ಮಣರು ತಾವು ಹೇಳುವ ವೇದಗಳು ದೊಡ್ಡವೆಂದು ಬೊಂಕುವುದಕ್ಕೆ ಆ ವಿಧವಾಗಿ 'ವೇದಗಳು ಅಪೌರುಷಗಳು' ಎಂದಿದ್ದಾರೆ. ಅದರ ಅರ್ಥದ ಪ್ರಕಾರ ಮನುಷ್ಯರು ಬರೆಯಲಿಲ್ಲವೆಂದು ಹೇಳಿದ್ದಾರೆ. ಹಾಗೆ ಹೇಳುವುದು ತಪ್ಪೆಂದು ತಿಳಿಯಬೇಕು. ಪುರುಷತ್ತ್ವ ಇಲ್ಲದಿರುವವು ವೇದಗಳೆಂದು, ದೈವತ್ವ ಇಲ್ಲದವುಗಳು ವೇದಗಳೆಂದು ಹೇಳುವುದಕ್ಕೆ ವೇದಗಳು ಅಪೌರುಷ ಗಳೆಂದು ಜ್ಞಾನಿಗಳು ಹೇಳಿದ್ದಾರೆ.

**13) ಪ್ರಶ್ನೆ :- ಆಧ್ಯಾತ್ಮಿಕ ರೀತಿಯಲ್ಲಿ ವೇದವೆಂದರೆ ಏನು? ಹಾಗೇ ವೇದಾಂತವೆಂದರೆ ಏನು?**

**ಉತ್ತರ :- ವೇದ ಎಂದರೆ ಗುಣಗಳು** ಎಂದು ಅರ್ಥ. **ವೇದಾಂತ ಎಂದರೆ**

**ಗುಣಗಳು ಇಲ್ಲದೆ ಹೋಗುವುದು** ಎಂದು ಅರ್ಥವಿದೆ. ವೇದಗಳು ಗುಣ ವಿಷಯಗಳೊಂದಿಗೆ ಕೂಡಿಕೊಂಡು ಶರೀರಾಂತರ್ಗತದಲ್ಲಿ ಯಾರಿಗೂ ಕಾಣಿಸದಂತೆ ಇವೆ. ಶರೀರದಲ್ಲೇ ಗುಣ ವಿಷಯಗಳ ಪ್ರಭಾವವನ್ನು ತಗ್ಗಿಸಿಕೊಂಡರೆ, ಸ್ವಲ್ಪವಾದರೂ ಸಹ ವಿಷಯ ಚಿಂತನೆ ಇಲ್ಲದೆ ಹೋದರೆ ಅದನ್ನೇ 'ಅಂತರ್ಗತ ವೇದಾಂತ' ಎನ್ನುತ್ತಾರೆ. ಶರೀರದಲ್ಲಿ ಕಾಣಿಸದೆ ಸೂಕ್ಷ್ಮವಾಗಿ ಇರುವ ವೇದಗಳು ಮನುಷ್ಯರಲ್ಲಿರುವಾಗ, ವೇದಾಂತವೂ ಸಹ ಮನುಷ್ಯರಲ್ಲೇ ಇದೆ. **ಪೂರ್ವದಲ್ಲಿ ಯೋಗಿಗಳಾದವರು ಅಂತರ್ಗತದಲ್ಲಿ ವೇದಾಂತವನ್ನು ಸಾಧಿಸಿ ಮೋಕ್ಷವನ್ನು ಹೊಂದಿದ್ದಾರೆ.** ಗುಣಗಳ ರೂಪದಲ್ಲಿರುವ ವೇದಗಳನ್ನು ಆತ್ಮವೇ ತಯಾರಿಸಿದಾಗ, ವೇದಾಂತದಿಂದ ಪರಮಾತ್ಮನನ್ನು ಹೊಂದಬಹುದು. ಗುಣಗಳು ಅಂತ್ಯವಾಗಿ ಹೋಗುವುದನ್ನು ವೇದಾಂತ ಎಂದು ಅನ್ನಬಹುದು.

## 14) ಪ್ರಶ್ನೆ :– ಪ್ರಕೃತಿಗು ಗುಣಗಳಿಗು ಸಂಬಂಧವಿದೆಯಾ?

**ಉತ್ತರ :–** ಪ್ರಕೃತಿ ಚರ, ಅಚರ ಎನ್ನುವ ಎರಡು ಭಾಗಗಳಾಗಿ ಇದೆ. ಇವುಗಳನ್ನೇ ಬದಲಾಗುವ ಪ್ರಕೃತಿ, ಬದಲಾಗದ ಪ್ರಕೃತಿಯೆಂದು ಎರಡು ವಿಧಗಳಲ್ಲಿ ಹೇಳುತ್ತಿದ್ದೇವೆ. ಪ್ರಕೃತಿ ಬದಲಾಗದಂತೆ ಕಾಣಿಸಿದರೆ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಐದು ಭಾಗಗಳಾಗಿ ಇದೆ. ಈ ಐದು ಹೆಸರುಗಳಿರುವವು ಹೊರಗೆ ತಿಳಿಯಲ್ಪಡುತ್ತಿವೆ. ಅವೇ ಐದು ಭಾಗಗಳು ಬದಲಾವಣೆಹೊಂದಿ ಶರೀರವಾಗಿ ಕಾಣಿಸುತ್ತಿವೆ. **ಪ್ರಕೃತಿ ಜನಿತಗಳಾದವು ಗುಣಗಳೆಂದು** ಹೇಳಬಹುದು. ಗುಣಗಳು ಶರೀರದಲ್ಲಿ **6+6** ಎಂದು ಎರಡು ವಿಧಗಳಾಗಿ ಒಟ್ಟು ಹನ್ನೆರಡು ಇವೆ. ಆರು ಒಳ್ಳೆಯ ಗುಣಗಳಾಗಿ, ಆರು ಕೆಟ್ಟ ಗುಣಗಳಾಗಿ ಗುಣಚಕ್ರದಲ್ಲಿದ್ದು ಮನುಷ್ಯನ (ಜೀವಿಯ) ಮೇಲೆ ಪ್ರಭಾವವನ್ನು ಬೀರುತ್ತಿವೆ. ಹೊರಗೆ ಪ್ರಕೃತಿಯಲ್ಲಿ ಸಹ ಪ್ರಕೃತಿಯಿಂದ ತಯಾರಾದ ಗುಣಗಳು ಅನೇಕವಾಗಿ ಕಾಣಿಸುತ್ತಿರುವ ಸಮಸ್ಯೆಗಳಾಗಿ, ಅನೇಕ ದೃಶ್ಯಗಳಾಗಿದ್ದು ಹೊರಗೆ ಮನುಷ್ಯನ ನೋಟವನ್ನು ಆಕರ್ಷಿಸಿ ಶರೀರದಲ್ಲಿನ ಮಾಯೆಯಲ್ಲಿ ಜೀವಿಯನ್ನು ಮುಳುಗಿಸುತ್ತಿವೆ.

ಉದಾಹರಣೆಗೆ ಹೊರಗೆ ದೃಶ್ಯರೂಪವಾಗಿ ಸುಂದರವಾದ ಹುಡುಗಿ ಕಾಣಿಸಿದರೆ ಶರೀರದಲ್ಲಿನ ಗುಣಗಳಲ್ಲಿ 'ಕಾಮ' ಎನ್ನುವ ಆಸೆ ಉಂಟಾಗುತ್ತದೆ. ಅಷ್ಟಕ್ಕೆ ನಿಲ್ಲದೆ 'ಮೋಹ' ಎನ್ನುವ ಗುಣವೂ ಸಹ ಉಂಟಾಗುತ್ತದೆ. ಮೊದಲು ಈ ಎರಡು ಗುಣಗಳು ಮನುಷ್ಯನಲ್ಲಿ ಉಂಟಾಗಿ ಮನುಷ್ಯನನ್ನು ತೊಂದರೆಗೀಡು ಮಾಡುತ್ತವೆ. ಹಾಗೆ ಗುಣಗಳ ಪ್ರಭಾವದಲ್ಲಿ ಸಿಲುಕಿಕೊಳ್ಳುವುದನ್ನು 'ಮಾಯೆಯಲ್ಲಿ ಬೀಳುವುದೆಂದು' ಅನ್ನುತ್ತಾರೆ. ಮೊದಲು ಕಾಣಿಸಿದ ಯುವತಿ ಬೇಕೆನ್ನುವ ಆಸೆ ಹುಟ್ಟಿದಾಗ, ಆ ಯುವತಿ ಪೂರ್ತಿ ತನ್ನವಳೇ ಆಗಬೇಕೆನ್ನುವ ಮೋಹ ಹುಟ್ಟುತ್ತದೆ. ಇಲ್ಲಿ ಒಂದೇ ದೃಶ್ಯದಲ್ಲಿ ಎರಡು ಗುಣಗಳು ಕೆಲಸ ಮಾಡುವುದು ನಡೆದಿದೆ. ಹೊರಗೆ ಸ್ಥೂಲವಾಗಿ ಒಂದು ದೃಶ್ಯ ಕಾಣಿಸಿದರೆ ಈ ವಿಧವಾಗಿ ಶರೀರದಲ್ಲಿ ಕಾಣಿಸದ ಎರಡು ಗುಣಗಳು ಕೆಲಸ ಮಾಡುತ್ತಿವೆ. ಹೊರಗಿನ ಪ್ರಕೃತಿ, ಒಳಗಿನ ಪ್ರಕೃತಿ ಎಂದಾಗ ಚರ, ಅಚರ ಪ್ರಕೃತಿಗಳು ಅವಿನಾಭಾವ ಸಂಬಂಧವಾಗಿ ಇದ್ದು, ಮನುಷ್ಯನ ಶರೀರದಲ್ಲಿನ ಜೀವಿಯನ್ನು ಗುಣ ವಿಷಯಗಳ ಕಡೆ ಸೆಳೆಯುತ್ತಿವೆ. ಗುಣಗಳನ್ನು ಜಯಿಸುವುದು ದುಸ್ಸಾಧ್ಯವಾದ ಕೆಲಸ ಆಗುವುದರಿಂದ ಗುಣಗಳನ್ನು ಜಯಿಸುವುದಕ್ಕೆ ಶರೀರದಲ್ಲಿನ **ಆತ್ಮವನ್ನು** ಪ್ರಾರ್ಥಿಸಬೇಕು. ಹೊರಗೆ **ಪರಮಾತ್ಮನನ್ನು** ಬೇಡಿಕೊಳ್ಳಬೇಕು.

ಹೊರಗಿನ ಪ್ರಕೃತಿ ತಮ್ಮ ದೃಶ್ಯಗಳಿಂದ, ಒಳಗಿನ ಪ್ರಕೃತಿ ತಮ್ಮ ಗುಣ ಗಳಿಂದ ಮನುಷ್ಯನನ್ನು ಯಾವ ರೀತಿಯಾಗಿ ತಮ್ಮ ಸ್ವಾಧೀನದೊಳಗೆ ತಂದುಕೊಳ್ಳುತ್ತಿ ವೆಯೋ ನಾನು ಈಗ ಹೇಳಿದ ವಿಧಾನವನ್ನು ಭಗವದ್ಗೀತೆಯಲ್ಲಿ ಕರ್ಮಯೋಗವೆನ್ನುವ ಅಧ್ಯಾಯದಲ್ಲಿ 27, 28 ಶ್ಲೋಕಗಳಲ್ಲಿ ಹೇಳಿದ ವಿಷಯ ವನ್ನು ನೋಡೋಣ.

**ಶ್ಲೋ॥ 27.** **ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।**
**ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥**

**ಭಾವಾರ್ಥ :–** ಪ್ರಕೃತಿಯಿಂದ ತಯಾರಾದ ಗುಣಗಳಿಂದ ಅನೇಕ ವಿಧಗಳಾಗಿ ಮಾಡುವ ಕಾರ್ಯಗಳೆಲ್ಲವುಗಳಿಗೂ ಕರ್ತ ನಾನೇಯೆಂದು ಅಹಂಕಾರ ಇರುವವನು ಅಜ್ಞಾನಿಯಾಗಿ ಅಂದುಕೊಳ್ಳುತ್ತಿರುವನು.

**ಶ್ಲೋ॥ 28. ತತ್ತ್ವವಿತ್ತು ಮಹಾಬಾಹೋ! ಗುಣಕರ್ಮ ವಿಭಾಗಯೋಃ ।**
**ಗುಣಾ ಗುಣೇಷು ವರ್ತನ್ತ ಇತಿ ಮತ್ವಾನ ಸಜ್ಜತೇ ॥**

**ಭಾವಾರ್ಥ :–** ಕರ್ಮಗಳ ಮತ್ತು ಗುಣಗಳ ಭಾಗಗಳನ್ನು ತಿಳಿಯುವ ಆತ್ಮಜ್ಞಾನಿಯಾದವನು 'ತಾನು' ಎನ್ನುವ ಯೋಚನೆ ಬಾರದಂತೆ ಮೂರು ಗುಣಗಳ ಕಾರ್ಯಗಳೇ ಕರ್ಮಗಳಾಗುತ್ತಿವೆಯೆಂದು ಆತ್ಮಜ್ಞಾನದಿಂದ ತಿಳಿಯುತ್ತಿರುತ್ತಾನೆ.

ಆಧ್ಯಾತ್ಮಿಕ ಜ್ಞಾನದಿಂದ ಕರ್ಮಗಳು, ಅವುಗಳ ಕಾರ್ಯಗಳು, ಕಾರ್ಯಗಳನ್ನು ಪ್ರೇರೇಪಿಸುವ ಗುಣಗಳು, ಎಲ್ಲವನ್ನೂ ತಿಳಿದವನಾಗಿ ಗುಣಗಳಿಂದಲೇ ಕಾರ್ಯಗಳು ನಡೆಯುತ್ತಿವೆಯೆಂದು ತಿಳಿದು, ಶರೀರದಲ್ಲಿ ನಡೆಯುವ ಕಾರ್ಯಗಳೆಲ್ಲವುಗಳಿಂದ ತನಗೆ ಸಂಬಂಧ ಇಲ್ಲದಂತಿರುವನು. ಒಳಗಿನ ಗುಣಗಳನ್ನು ಹೊರಗಿನ ಕಾರ್ಯಗಳನ್ನು ತಿಳಿದು ಆತ್ಮಜ್ಞಾನದಿಂದ ಅಹಂಭಾವವನ್ನು ಹೊಂದದೆ ಹೋಗುವುದನ್ನೇ ಕರ್ಮಯೋಗವಾಗಿ ಹೇಳುತ್ತಿದ್ದೇವೆ.

**15) ಪ್ರಶ್ನೆ :– ವೇದಗಳಿಗೆ ಚೆನ್ನಾಗಿ ಅಭ್ಯಾಸವಾದ ಸ್ವಾಮಿಗಳು ನಾಲ್ಕು ವೇದಗಳಿಗು ನಾಲ್ಕು ವಾಕ್ಯಗಳನ್ನು ಹೇಳುತ್ತಾ ಅವುಗಳನ್ನು ಮಹಾವಾಕ್ಯ ಗಳು ಎಂದು ಹೇಳುತ್ತಿದ್ದಾರೆ. ನಾಲ್ಕು ವೇದಗಳ ಸಾರ ನಾಲ್ಕು ವಾಕ್ಯಗಳಲ್ಲಿ ಇದೆಯೆಂದು ಹೇಳುತ್ತಿರುವರು. ಆ ನಾಲ್ಕು ಮಹಾವಾಕ್ಯಗಳು ಈ ವಿಧವಾದ ಹೆಸರುಗಳಿಂದ ಇವೆ. ಅವುಗಳಲ್ಲಿ ಜ್ಞಾನವಿದೆಯೆನ್ನುವ ಅವರ**

**ಮಾತುಗಳು ಸತ್ಯವೇನಾ ಎಂದು ಪ್ರಶ್ನಿಸುತ್ತಿದ್ದೇವೆ? ನಾಲ್ಕು ಮಹಾ ವಾಕ್ಯಗಳಲ್ಲಿ ಯಾವುದು ಮುಂದೆ, ಯಾವುದು ಹಿಂದೆ ಎಂದು ಹೇಳಲಾರೆವು. ಅವು ಹೀಗೆ ಇವೆ. (1) ಅಹಂ ಬ್ರಹ್ಮಾಸ್ಮಿ (2) ಅಯಮಾತ್ಮ ಬ್ರಹ್ಮ (3) ಪ್ರಜ್ಞಾನಂ ಬ್ರಹ್ಮ (4) ತತ್ವಮಸಿ. ಇವುಗಳಲ್ಲಿನ ರಹಸ್ಯವನ್ನು ಹೇಳಿರಿ?**

**ಉತ್ತರ :–** ವೇದಗಳು ನಾಲ್ಕು. ಅವುಗಳಿಂದ ತೆಗೆದ ಮಹಾವಾಕ್ಯಗಳು ನಾಲ್ಕು. ಒಂದೊಂದು ವೇದದಲ್ಲಿರುವ ಸಾರಾಂಶವೆಲ್ಲವೂ ಸೇರಿಸಿ ಒಂದು ವಾಕ್ಯವನ್ನು ಹೇಳಲಾಗಿದೆ. ಅದರಲ್ಲಿ ಒಂದು **"ಅಹಂ ಬ್ರಹ್ಮಾಸ್ಮಿ"** ಎಂದು ಇದೆ. ಅಹಂ ಬ್ರಹ್ಮಾಸ್ಮಿ ಎನ್ನುವ ವಾಕ್ಯವೊಂದರ ಅರ್ಥವನ್ನು ನೋಡಿದರೆ ಅಹಂ ಎಂದರೆ ನಾನು ಎಂದೂ, ಬ್ರಹ್ಮ ಎಂದರೆ ದೇವರು (ಪರಮಾತ್ಮ) ಯೆಂದೂ, ಅಸ್ಮಿ ಎಂದರೆ ಆದೆನು ಎಂದು ತಿಳಿಯುತ್ತಿದೆ. ಒಟ್ಟಾರೆ ಅರ್ಥವನ್ನು ಸೇರಿಸಿ ನೋಡಿದರೆ **"ನಾನು ದೇವರು ಆಗಿದ್ದೇನೆ"** ಎಂದು ಹೇಳಿದಂತಾಗುತ್ತಿದೆ. ಮನುಷ್ಯ ದೇವರೊಳಗೆ ಬೆರೆತುಹೋದರೆ ಆತನು ದೇವರು ಆದಂತೇ ಆದರೆ, ಮನುಷ್ಯ ದೇವರಾಗಿ ಬದಲಾದರೆ ಆತನು ಹೊರಗೆ ಏನೂ ಹೇಳಲಾರನು. ದೇವರು ಮಾತನಾಡುವುದಿಲ್ಲ ಆದ್ದರಿಂದ ಈ ವಾಕ್ಯವನ್ನು ಹೇಳುವುದಕ್ಕೆ ಅವಕಾಶವಿಲ್ಲ. ಆದರೆ ಮನುಷ್ಯ ಮನುಷ್ಯನಾಗಿಯೇ ಇದ್ದು ನಾನು ದೇವರು ಆಗಿದ್ದೇನೆ ಎಂದು ಹೇಳಿದರೂ ಅದು ಅಸತ್ಯವಾಗುತ್ತದೆ. ಮನುಷ್ಯ ಕಾಣಿಸುವ ವ್ಯಕ್ತಿಯಾಗಿ ಇದ್ದು, ಮಾತನಾಡಿ ಹೇಳುತ್ತಿದ್ದಾನೆಂದರೆ ಆತನು ದೇವರು ಆಗಲಿಲ್ಲವೆಂದು, ಆತನು ಹೇಳುವುದು ಅಸತ್ಯವೆಂದು ತಿಳಿಯುತ್ತಿದೆ. ಈ ವಾಕ್ಯವನ್ನು ಮನುಷ್ಯನಾಗಿರುವವನು ಹೇಳಿದರೇ ಅಸತ್ಯ ಎಂದು ಹೇಳಬಹುದು. ಹಾಗಲ್ಲದೆ ದೇವರಾಗಿ ಬದಲಾಗಿ ಹೋದವನು ಆ ವಿಷಯವನ್ನು ಹೊರಗೆ ಹೇಳಲಾರನು ಆದ್ದರಿಂದ ಆತನು ಹೇಳಿದ್ದಾನೆ ಎನ್ನುವುದು ಸಹ ಅಸತ್ಯವೇ ಆಗುತ್ತದೆ. ಎರಡು ವಿಧಗಳಲ್ಲಿ ಇದು ಅಸತ್ಯವಾಕ್ಯವೇ ಯೆಂದು ತಿಳಿಯುತ್ತಿದೆ.

ಎರಡನೆ ಮಹಾವಾಕ್ಯವನ್ನು ಗಮನಿಸಿದರೇ **"ಅಯಮಾತ್ಮ ಬ್ರಹ್ಮ"** ಎಂದು ಇದೆ. ಈ ವಾಕ್ಯವನ್ನು ಬೇರ್ಪಡಿಸಿ ನೋಡಿದರೇ ಅಯಮ್ ಎಂದರೆ ನನ್ನೊಂದರ ಎಂದೂ, ಆತ್ಮ ಬ್ರಹ್ಮ ಎಂದರೆ **"ನನ್ನ ಆತ್ಮೇ ದೇವರು"** ಎಂದು ಅರ್ಥ ಬರಬಲ್ಲದು. ಪ್ರತಿ ಮನುಷ್ಯನನ್ನು ಒಬ್ಬ ಜೀವಾತ್ಮವಾಗಿ ಹೇಳಿದರೇ ಆತನಲ್ಲಿ ಆತ್ಮ ಒಂದು, ಪರಮಾತ್ಮ ಮತ್ತೊಂದು ಇವೆ. ಆತ್ಮ, ಪರಮಾತ್ಮ ಇಬ್ಬರನ್ನು ದೇವರೇಯೆಂದು ಹೇಳಿದರೂ, ಅದರಲ್ಲಿ ಒಬ್ಬರು ಸೃಷ್ಠಿಸಲ್ಪಟ್ಟಿರುವ ಆತ್ಮವಾದಾಗ, ಮತ್ತೊಬ್ಬರು ಆತ್ಮನನ್ನೇ ಸೃಷ್ಠಿಸಿದ ಪರಮಾತ್ಮವಾಗಿ ಇದ್ದಾರೆಂದು ಹೇಳಬಹುದು. ಜೀವಾತ್ಮ ಅಲ್ಲದೆ ಶರೀರದಲ್ಲಿರುವ ಆತ್ಮ, ಪರಮಾತ್ಮರಲ್ಲಿ ಒಂದು ಪರಮಾತ್ಮಗೆ ಮಾತ್ರವೇ ಬ್ರಹ್ಮಯೆನ್ನುವ ಹೆಸರು ಅನ್ವಯಿಸುತ್ತದೆ. ಮನುಷ್ಯ ಆತ್ಮವನ್ನು ಹಿಂದೂಗಳು **ದೇವರೆಂದು** ಹೇಳಿದರೂ, ಕ್ರೈಸ್ತರು **ತಂದೆ**ಯೆಂದು ಹೇಳಿದರೂ, ಮುಸ್ಲೀಮ್‌ರು **ಅಲ್ಲಾಹ್**ಯೆಂದು ಹೇಳಿದರೂ ಆತನನ್ನು ಸೃಷ್ಠಿಸಿದವನು ಇದ್ದಾನೆ. ಮೊದಲನೆ ಸೃಷ್ಠಿಕರ್ತನನ್ನು ಪರಮಾತ್ಮಯೆಂದು ಹಿಂದೂಗಳು, ಪರಿಶುದ್ಧಾತ್ಮಯೆಂದು ಕ್ರೈಸ್ಥರು, ನಿರಾಪೇಕ್ಷೆ ಅಲ್ಲಾಹ್‌ಯೆಂದು ಮುಸ್ಲೀಮ್‌ರು ಅನ್ನುತ್ತಿದ್ದಾರೆ. **ಪರಮಾತ್ಮ** ಎಂದರೂ, **ಪರಿಶುದ್ಧಾತ್ಮ** ಎಂದರೂ, **ಅಲ್ಲಾಹ್** ಎಂದರೂ ಮೂವರೂ ಒಂದೇ ಆದರೇ ಮನುಷ್ಯ ಶರೀರದಲ್ಲಿನ ಮೂರು ಆತ್ಮಗಳಲ್ಲಿ ಪರಮಾತ್ಮನನ್ನು ಮಾತ್ರ ಬ್ರಹ್ಮಯೆಂದು ಕರೆಯುತ್ತಿದ್ದಾರೆ. ಎಲ್ಲದಕ್ಕೂ ಜೀವಾತ್ಮಕ್ಕೂ, ಆತ್ಮಕ್ಕೂ ದೊಡ್ಡದಾಗಿರುವ ಪರಮಾತ್ಮನನ್ನೇ ಆಧ್ಯಾತ್ಮಿಕ ರೀತಿಯಲ್ಲಿ ಬ್ರಹ್ಮಯೆಂದು ಹೇಳುತ್ತಿದ್ದೇವೆ. ಆದರೆ ಇಲ್ಲಿ ಜೀವಾತ್ಮವಾಗಿರುವ ಮನುಷ್ಯ ತನ್ನಲ್ಲಿರುವ ಆತ್ಮವನ್ನು ಬ್ರಹ್ಮಯೆನ್ನುವುದು ತಪ್ಪಾಗುತ್ತದೆ. ಮನುಷ್ಯನ ಶರೀರದಲ್ಲಿ ಆತ್ಮ ಇದ್ದರೂ ಅದು ದೊಡ್ಡದಲ್ಲ. ಆದ್ದರಿಂದ ಅಯಮಾತ್ಮ ಬ್ರಹ್ಮ, **"ನನ್ನ ಆತ್ಮ ಬ್ರಹ್ಮ"**ಯೆಂದು ಹೇಳುವುದು ತಪ್ಪಾಗುತ್ತದೆಂದು ಹೇಳಬಹುದು. ಆಧ್ಯಾತ್ಮಿಕದ ಪ್ರಕಾರ ಮನುಷ್ಯನ ಶರೀರದೊಳಗಿನ ಆತ್ಮ ಕಾರ್ಯಕರ್ತನಾಗಿದ್ದು ಪ್ರತಿನಿತ್ಯವೂ ಎಲ್ಲಾ ಕೆಲಸಗಳು ಮಾಡುತ್ತಿದ್ದಾನೆ. ಪರಮಾತ್ಮ, ಆತ್ಮ ಮಾಡುವ ಕೆಲಸಗಳನ್ನು ಸಾಕ್ಷಿಯಾಗಿ ನೋಡುತ್ತಾ ಇದ್ದು ಆತ್ಮಕ್ಕು, ಜೀವಾತ್ಮಕ್ಕು ಇಬ್ಬರಿಗೂ

ದೊಡ್ಡವನಾಗಿದ್ದಾನೆ. ಆದ್ದರಿಂದ ಆತ್ಮವನ್ನು ದೊಡ್ಡವ(ಬ್ರಹ್ಮ)ಯೆಂದು ಹೇಳಬಾರದು. ಪರಮಾತ್ಮನನ್ನು ಬಿಟ್ಟು ಆತ್ಮವನ್ನು ಬ್ರಹ್ಮವಾಗಿ ಹೇಳುವುದು ಪೂರ್ತಿ ತಪ್ಪಾಗುತ್ತದೆ. ಆತ್ಮಗಳ ವಿಧಾನವನ್ನು ತಿಳಿಯದವರು ಹಾಗೆ ಹೇಳಬಹುದು ಆದರೆ, ಮೂರು ಆತ್ಮಗಳ ವಿಷಯ ತಿಳಿದವರು ಯಾರೂ ತನ್ನ ಆತ್ಮವನ್ನು ಬ್ರಹ್ಮಯೆಂದು ಹೇಳುವುದಿಲ್ಲ. ಅಯಮಾತ್ಮ ಬ್ರಹ್ಮಯೆಂದು ಹೇಳುವುದು ಆಧ್ಯಾತ್ಮಿಕಕ್ಕೆ ವಿರುದ್ಧವಾದ ಮಾತು ಎಂದು ಹೇಳಬಹುದು. ವೇದಗಳಲ್ಲಿ ಆತ್ಮಗಳ ವಿವರ ಪೂರ್ತಿಯಾಗಿ ಇಲ್ಲ, ಆದ್ದರಿಂದ ವೇದಗಳ ವಾಕ್ಯಗಳು ತಪ್ಪಾಗಿ ಇವೆ.

ಇನ್ನು ಮೂರನೆ ವಾಕ್ಯವನ್ನು ನೋಡಿದರೆ **"ಪ್ರಜ್ಞಾನಾಂ ಬ್ರಹ್ಮ"** ಎಂದು ಹೇಳಿದ್ದಾರೆ. ಈ ವಾಕ್ಯಕ್ಕೆ ಅರ್ಥವನ್ನು ನೋಡಿದರೆ **"ಮುಖ್ಯವಾದ ಜ್ಞಾನವೇ ದೇವರು"** ಎಂದು ಹೇಳಿದಂತಿದೆ. ಬ್ರಹ್ಮ ಎಂದರೆ ಮೂರು ಆತ್ಮಗಳಲ್ಲಿ ಕೊನೆಯದು ದೊಡ್ಡದು ಆದ ಪರಮಾತ್ಮಯೆಂದು ಹೇಳಿಕೊಂಡಿದ್ದೇವಲ್ಲವೆ! ಪರಮಾತ್ಮ, ಜ್ಞಾನದಿಂದ ತಿಳಿಯಲ್ಪಡುವವನು ಅಲ್ಲ. ಜ್ಞಾನದಿಂದ ತಿಳಿಯುವುದು ಆತ್ಮ ಮಾತ್ರವೇ. ಆದ್ದರಿಂದ ಪರಮಾತ್ಮ ಧರ್ಮಗಳಿಗೂ ಜ್ಞಾನಕ್ಕೂ ಅತೀತನೆಂದು ಹೇಳಬಹುದು. ಪರಮಾತ್ಮನನ್ನು ಶರಣು ಬೇಡಬೇಕೇ ಹೊರತು, ಆತನನ್ನು ಜ್ಞಾನದಿಂದಾಗಲೀ ಧರ್ಮಗಳಿಂದಾಗಲೀ ತಿಳಿಯಲಾರರು. ಆದ್ದರಿಂದ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಮೋಕ್ಷ ಸನ್ಯಾಸ ಯೋಗದಲ್ಲಿ 66 ನೇ ಶ್ಲೋಕದಲ್ಲಿ ಈ ವಿಧವಾಗಿ ಹೇಳಿದ್ದಾನೆ.

**ಶ್ಲೋ ॥ 66. ಸರ್ವ ಧರ್ಮಾನ್ ಪರಿತ್ಯಜ್ಯ ಮಾ ಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥**

**ಭಾವಾರ್ಥ :–** ಸರ್ವ ಧರ್ಮಗಳನ್ನು ಸಂಪೂರ್ಣವಾಗಿ ಬಿಟ್ಟುಹಾಕಿ ನನ್ನನ್ನು (ಪರಮಾತ್ಮನನ್ನು) ಮಾತ್ರ ಶರಣು ಕೋರು. ನಿನ್ನನ್ನು ನಾನು ಪಾಪ ಬಂಧನವನ್ನು

ಇಲ್ಲದಂತೆ ಮಾಡುವೆನು. ನಿನ್ನನ್ನು ಮುಕ್ತನನ್ನಾಗಿ ಮಾಡುವೆನು ಎಂದು ಪರಮಾತ್ಮ ಹೇಳಿದಂತೆ ಇದೆ. ಇದರ ಪ್ರಕಾರ ಮುಖ್ಯವಾದ ಜ್ಞಾನದಿಂದ ಅಂದರೆ ಪ್ರಜ್ಞಾನದಿಂದ ಬ್ರಹ್ಮ ಆದ ಪರಮಾತ್ಮ ತಿಳಿಯುವುದಿಲ್ಲ. ಅಷ್ಟೇ ಅಲ್ಲದೆ ಎಷ್ಟು ದೊಡ್ಡ ಜ್ಞಾನವಾದರೂ ಅದು ಆತ್ಮದವರೆಗೇ ಇರುತ್ತದೆ. ಪರಮಾತ್ಮನನ್ನು ತಿಳಿಸುವುದಾಗಿ ಇರುವುದಿಲ್ಲ. ಪ್ರಜ್ಞಾನ ಪ್ರಜ್ಞಾನವಾಗಿಯೇ ಇರುತ್ತದೆ. ದೇವರು ದೇವರಾಗಿಯೇ ಇರುತ್ತಾನೆ. ಜ್ಞಾನ ದೇವರಲ್ಲ. ಆದ್ದರಿಂದ **"ಪ್ರಜ್ಞಾನ ಬ್ರಹ್ಮ"** ಯೆಂದು ಹೇಳುವುದು ಸಹ ತಪ್ಪಾಗಿ ಇದೆ.

ನಾಲ್ಕನೆ ವಾಕ್ಯವಾದ **"ತತ್ತ್ವಮಸಿ"** ಎನ್ನುವ ವಾಕ್ಯದ ಅರ್ಥವನ್ನು ನೋಡಿದರೆ 'ತತ್' ಎಂದರೆ ಅದು, 'ತ್ವಮ್' ಎಂದರೆ ಇದು ಎಂದೂ, ಅಸಿ ಎಂದರೆ ಒಂದಾಗಿ ಬೆರೆತು ಹೋಗಿವೆಯೆಂದು ಹೇಳಬಹುದು. ಇದಕ್ಕೆ ಮಾತ್ರ ಅನೇಕ ಮಂದಿ ಅನೇಕ ವಿಧಗಳ ಅರ್ಥಗಳನ್ನು ಹೇಳುತ್ತಿರುವರು. ಅದು ಇದು ಒಂದೇಯೆಂದೂ ಅಥವಾ ಅದು ಇದು ಬೆರೆತುಹೋಗಿವೆಯೆಂದು ಹೆಚ್ಚಾಗಿ ಹೇಳುತ್ತಿರುವರು. ಯಾವುದು ಯಾವುದರೊಂದಿಗೆ ಬೆರೆತರೂ ನಮಗೆ ಏನೂ ಪ್ರಯೋಜನವಿಲ್ಲ. ಮುಖ್ಯವಾಗಿ **ಜೀವಾತ್ಮ ಪರಮಾತ್ಮನೊಂದಿಗೆ ಬೆರೆತು ಹೋಗುವುದೇ ಆಧ್ಯಾತ್ಮಿಕವೊಂದರ ಧ್ಯೇಯ.** ಜೀವಿಯು ದೇವರೊಂದಿಗೆ ಬೆರೆತು ಹೋದರೆ ಇದು ಅದು ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಅಷ್ಟೇ ಅಲ್ಲದೆ ಇಲ್ಲಿ ಯಾವುದು ಯಾವುದರೊಂದಿಗೆ ಬೆರೆತಿದೆ ಎನ್ನುವುದು ಸ್ಪಷ್ಟವಾಗಿ ಹೇಳಲಿಲ್ಲ. ಪ್ರಕೃತಿಯ ವಸ್ತು ಪ್ರಕೃತಿ ವಸ್ತುವಿನೊಂದಿಗೆ ಸುಲಭವಾಗಿ ಬೆರೆತು ಹೋಗಬಹುದು. ಹಾಗೆ ಆ ವಿಧಾನವನ್ನು ಹೇಳಿದರೂ ಪ್ರಕೃತಿ ಸೇರುವಿಕೆಯಿಂದ ನಮಗೆ ಎಂತಹ ಆಧ್ಯಾತ್ಮಿಕ ಆದಾಯ ಇರುವುದಿಲ್ಲ. ಆದ್ದರಿಂದ ಈ ವಾಕ್ಯವೂ ಸಹ ವೃಥಾ ವಾಕ್ಯವಾಗಿ ಇದೆ. ನಾಲ್ಕು ವೇದಗಳು ಮನುಷ್ಯನನ್ನು ಆಧ್ಯಾತ್ಮಿಕದ ಕಡೆ ತೆಗೆದುಕೊಂಡುಹೋಗದಂತೆ, ಒಳಗೆ ಪ್ರಕೃತಿ ಗುಣಗಳಕಡೆಗೆ, ಹೊರಗೆ ವಿಷಯಗಳ ಕಡೆಗೆ ಮನುಷ್ಯನನ್ನು ತೆಗೆದುಕೊಂಡು ಹೋಗುವುದರಿಂದ, ಆ ನಾಲ್ಕು ವೇದಗಳಿಂದ ಮನುಷ್ಯನಿಗೆ ಏನು ಪ್ರಯೋಜನೆ ಇಲ್ಲವೆಂದು ಭಗವದ್ಗೀತೆಯಲ್ಲಿ

ಹೇಳುವುದು ನಡೆದಿದೆ. ಅಂತಹ ನಾಲ್ಕು ವೇದಗಳಿಂದ ಬಂದಿರುವ ನಾಲ್ಕು ಮಹಾವಾಕ್ಯಗಳೆನ್ನಲ್ಪಡುವ ಅವುಗಳಲ್ಲಿ ಸಹ ಯಾವ ಕೋನದಲ್ಲಿ ನೋಡಿದರೂ ಆಧ್ಯಾತ್ಮಿಕ ಲಾಭ ಇಲ್ಲದೆ ಹೋಗುವುದನ್ನು ಗಮನಿಸಬಹುದು. ಆದ್ದರಿಂದ ನಾಲ್ಕು ವೇದಗಳ ಮಾಯೆಯಲ್ಲಾಗಲೀ, ನಾಲ್ಕು ಮಹಾವಾಕ್ಯಗಳ ಹಿಂದೆಯಾಗಲಿ ಬೀಳದೆ ಅಸಲಾದ ಆಧ್ಯಾತ್ಮಿಕದ ಕಡೆಗೆ ಹೋಗಿರಿ. ಆಧ್ಯಾತ್ಮಿಕ ಬೇಕೆಂದರೆ ಮೂರು ದೈವ ಗ್ರಂಥಗಳನ್ನು ಓದಿದವನು **ಪೂರ್ತಿ ಜ್ಞಾನಿ** ಆಗುವುದಕ್ಕೆ **ಆಧ್ಯಾತ್ಮಿಕ ನಿಪುಣ** ಆಗುವುದಕ್ಕೆ ಅವಕಾಶವಿದೆ.

**16) ಪ್ರಶ್ನೆ :– ಹಿಂದೂ ದೇಶದಲ್ಲಿ ಹಿಂದೂಗಳಾಗಿ ಎಷ್ಟೋ ಕುಲದವರು ಇದ್ದಾರೆ. ಎಲ್ಲ ಕುಲಗಳಲ್ಲಿ ಅಗ್ರಕುಲವಾಗಿ ಬ್ರಾಹ್ಮಣರು ಹೇಳಲ್ಪಡುತ್ತಿದ್ದಾರೆ. ಪೂರ್ವದಲ್ಲಿ ಬ್ರಹ್ಮವಿದ್ಯೆಯನ್ನು ಅನುಸರಿಸಿ ಬ್ರಾಹ್ಮಣರು ಎನ್ನುವುದು ಸರಿಯಾದುದಾದರೂ, ಅವರೇ ಎಲ್ಲರಿಗಿಂತ ದೊಡ್ಡವರೆಂದು ಹೆಸರಿದ್ದರೂ, ಈ ದಿನ ಬ್ರಹ್ಮವಿದ್ಯೆ ಇಲ್ಲದಿದ್ದರೂ ಕುಲವನ್ನು ಅನುಸರಿಸಿ ಬ್ರಾಹ್ಮಣರಾಗಿ ಚಲಾವಣೆ ಆಗುತ್ತಿದ್ದಾರೆ. ಪೂರ್ವದಿಂದ ಎಲ್ಲ ಕುಲಗಳಿಗೂ ಎಲ್ಲ ಶುಭಕಾರ್ಯಗಳಲ್ಲಿ ಬ್ರಾಹ್ಮಣರೇ ಪಾಲ್ಗೊಂಡು ವೇದಮಂತ್ರಗಳನ್ನು ಓದಿ ಅದಕ್ಕೆ ಕೂಲಿಯಂತೆ ಸ್ವಲ್ಪ ಹಣ ತೆಗೆದು ಕೊಳ್ಳುವುದು ಇಂದಿಗೂ ಅಭ್ಯಾಸವಾಗಿದೆ. ಎಲ್ಲ ಕುಲದವರಿಗೂ ಬ್ರಾಹ್ಮಣರು ಹಣಕ್ಕೆ ಕೆಲಸ ಮಾಡುತ್ತಾ, ಅವರ ಕಾರ್ಯಗಳನ್ನು ನೇರವೇರಿಸುತ್ತಿದ್ದಾರೆ. ಇದನ್ನನುಸರಿಸಿ ನೋಡಿದರೆ ಬ್ರಾಹ್ಮಣರಿಗೆ ಯಾರೂ ಸೇವೆ ಮಾಡದಿದ್ದರೂ, ಯಾರೂ ಅವರಿಗೆ ಉಪಯೋಗಪಡದಿದ್ದರೂ ಅವರು ಮಾತ್ರ ಉಳಿದ ಕಡಿಮೆ ಕುಲದವರೆಲ್ಲರಿಗೂ ಉಪಯೋಗ ಪಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದನ್ನನುಸರಿಸಿ ಎಲ್ಲರಿಗೂ ಸೇವೆಗಳು ಮಾಡುವವರು ಬ್ರಾಹ್ಮಣರು ಎಂದು ಹೇಳಬಹುದು.**

ಕಾಣಿಸುವ ಸತ್ಯವಾಗಿ ಅವರೇ ಎಲ್ಲರಿಗೂ ಸೇವೆ ಮಾಡಿದಂತೆ ಇದೆ. ಬ್ರಾಹ್ಮಣರು ವೇದಗಳನ್ನು ಓದುವುದನ್ನು, ಶುಭಕಾರ್ಯಗಳನ್ನು ನೆರವೇರಿಸುವುದನ್ನು ಕುಲವೃತ್ತಿಯಾಗಿ ಇಟ್ಟುಕೊಂಡು ಜೀವಿಸುತ್ತಿದ್ದಾರೆ. ಅವರ ಜೀವನೋಪಾಯ ವೃತ್ತಿಯಾಗಿ ಸಂಸ್ಕೃತವನ್ನು ಕಲಿಯುವುದು, ವೇದಗಳನ್ನು (ವಲ್ಲಿಸುವುದು) ಕಲಿತು ಆ ಕೆಲಸವನ್ನೇ ಮಾಡುತ್ತಿದ್ದಾರೆ. ಅದು ಭುಕ್ತಿಗಾಗಿ ಮಾಡಿದರೂ ಫರವಾಗಿಲ್ಲ. ದೇವರು ಹೇಳಿದಂತೆ ವೇದಗಳು ಅಧರ್ಮಗಳೆಂದು ತಿಳಿದು ಅಸಲಾದ ಆಧ್ಯಾತ್ಮಿಕವನ್ನು ತಿಳಿಯಬೇಕಾಗಿದೆ. ಆದರೆ ಹಾಗಲ್ಲದೆ ತಾವು ಮಾಡುವ ಕೆಲಸವೆಲ್ಲವೂ ಧರ್ಮಯುಕ್ತವಾದುದೆಂದು ಹೇಳುತ್ತಾ, ತಾವು ಕೆಟ್ಟುಹೋಗುವುದಲ್ಲದೆ ಇತರರನ್ನು ಕೆಡುಸುತ್ತಿದ್ದಾರೆ. ದೈವಗ್ರಂಥದಲ್ಲಿನ ದೇವರ ಮಾತಿಗೆ ವಿರುದ್ಧವಾಗಿ ವೇದಗಳನ್ನು ಪ್ರಚಾರ ಮಾಡುತ್ತಾ, ವೇದಗಳನ್ನೇ ಧರ್ಮಗಳಾಗಿ ಚಿತ್ರಿಸಿ ಹೇಳುತ್ತಿದ್ದಾರೆ.

ಸಾಧಾರಣ ಬ್ರಾಹ್ಮಣರು ಅವರ ಬದುಕು ವೃತ್ತಿಗಾಗಿ ವೇದ ಮಂತ್ರಗಳನ್ನು, ಯಜ್ಞ ಕಾರ್ಯಗಳನ್ನು ಮಾಡುತ್ತಿದ್ದರೂ, ಅವರು ವಿಧಿಯಿಲ್ಲದ ಸ್ಥಿತಿಯಲ್ಲಿ ಹಾಗೆ ಮಾಡಬೇಕಾಗಿ ಬಂದಿದೆಯೆಂದು ಒಪ್ಪಿಕೊಳ್ಳಬಹುದು. ಕೆಲವರು ಹಾಗೆ ಅಲ್ಲದೆ ಒಂದು ಹೆಜ್ಜೆ ಮುಂದಕ್ಕೆ ಹಾಕಿ, ಸ್ವಾಮಿಗಳಾಗಿ, ಗುರುಗಳಾಗಿ, ಪೀಠಾಧಿಪತಿಗಳಾಗಿ ಅವತಾರವೆತ್ತಿ, ತಾವು ಹೇಳುವುದೇ ಜ್ಞಾನ, ತಾವು ಮಾಡುವುದೇ ಧರ್ಮಾಚರಣೆ ಎಂದು ಹೇಳುತ್ತಿದ್ದಾರೆ. ಅಂತವರು ಎಲ್ಲಿಯಾದರೂ ಧರ್ಮಗಳು ಬೋಧಿಸುವವರಿದ್ದರೆ, ಅವನು ತಮ್ಮ ಕುಲದವನು ಅಲ್ಲವೆಂದು ಗ್ರಹಿಸಿ, ಅಸಲಾದ ಜ್ಞಾನ ಹೇಳುವವನನ್ನು ಅಧರ್ಮವರನನ್ನಾಗಿ ಚಿತ್ರಿಸಿ

ತೋರಿಸುತ್ತಿದ್ದಾರೆ. ಏನು ತಿಳಿಯದ ಪ್ರಜೆಗಳು ಜ್ಞಾನವೆಂದರೇ ಏನೊ, ಅಜ್ಞಾನವೆಂದರೇ ಏನೊ ತಿಳಿಯದ ಪ್ರಜೆಗಳು, ಧರ್ಮ ಎಂದರೆ ಏನೋ, ಅಧರ್ಮ ಎಂದರೆ ಏನೋ ತಿಳಿಯದ ಅಮಾಯಕ ಪ್ರಜೆಗಳು ಪೀಠಾಧಿ ಪತಿಗಳಾಗಿ ಚಲಾವಣೆ ಆಗುತ್ತಿರುವ ಸ್ವಾಮಿಗಳ ಮಾತುಗಳನ್ನು ಕೇಳಿ, ಅಸಲಾದ ಧರ್ಮಾಚರಣೆ ಮಾಡುವವರನ್ನು ಅಜ್ಞಾನಿಗಳೆಂದು ಅಂದುಕೊಳ್ಳುತ್ತಿದ್ದಾರೆ. ಬ್ರಾಹ್ಮಣರಿಂದ ಬಂದಿರುವ ಸ್ವಾಮಿಗಳೆಲ್ಲರೂ ಪೀಠಾಧಿಪತಿಗಳಾಗಿ ಹೆಸರು ಇಟ್ಟುಕೊಂಡು, ಐಕ್ಯಮತ್ಯವಾಗಿ ಇರುತ್ತಾ ನಮ್ಮಂಥ ಅನ್ಯ ಕುಲದವರು ಬ್ರಾಹ್ಮಣ ಕುಲ ಅಲ್ಲದವರು ಬಂದು ಧರ್ಮಗಳನ್ನು ಹೇಳಿದರೂ, ಜ್ಞಾನವನ್ನು ಹೇಳಿದರೂ, ಅಧರ್ಮಗಳನ್ನು ಹೇಳಿದಂತೆ ಅಜ್ಞಾನವನ್ನು ಹೇಳಿದಂತೆ ಪ್ರಚಾರ ಮಾಡುತ್ತಾ, ಭೂಮಿಮೇಲೆ ತಾವು ಹೊರತು ಉಳಿದ ಕುಲದವರು ಯಾರೂ ಸ್ವಾಮೀಜಿಗಳಾಗಿ ಇರಬಾರದೆಂದು ನೋಡುತ್ತಿದ್ದಾರೆ. ಪೂರ್ವದಲ್ಲಿ ದ್ವಾಪರಯುಗದಲ್ಲಿ ಕೃಷ್ಣನು ಬ್ರಾಹ್ಮಣೇತರನಾಗಿ ಗೊಲ್ಲನಾಗಿ ಬಂದು ಜ್ಞಾನವನ್ನು ಹೇಳಿಹೋಗಿದ್ದಾನೆ. ಅದಕ್ಕುಮುನ್ನ ರಾವಣನು ತ್ರೇತಾಯುಗ ದಲ್ಲಿ ಧರ್ಮಗಳನ್ನು ಬೋಧಿಸಿ ಆಚರಿಸಿದ್ದಾನೆ. ಆತನು ಕೂಡಾ ಹುಟ್ಟಿನಿಂದ ಬ್ರಾಹ್ಮಣನು ಅಲ್ಲ. ಅಂತವರು ದೈವಗ್ರಂಥಗಳನ್ನು ಹೇಳಿ ದವರು, ಧರ್ಮಗಳನ್ನು ಬೋಧಿಸಿ ತೋರಿಸಿದವರನ್ನು ಕೂಡಾ ಬ್ರಾಹ್ಮಣರು ಅಸೂಯೆಯಿಂದ ಸಾಧಾರಣ ಮನುಷ್ಯರಿಗಿಂತ ಹೀನವಾಗಿ ಚಿತ್ರಿಸಿ ತೋರಿಸಿದ್ದಾರೆ. ಅದೇ ಗುಂಪಿನಲ್ಲಿ ಅಂತರ್ಮುಖ ಆಧ್ಯಾತ್ಮಿಕವನ್ನು ಬೋಧಿಸಿದ ವೇಮನ ಯೋಗಿಯನ್ನು, ವೀರಬ್ರಹ್ಮಯ್ಯರನ್ನು ತಮ್ಮ ಕುಲದವರು ಅಲ್ಲವೆಂಬ ಅಭಿಪ್ರಾಯದಿಂದ ಅವರು ಹೇಳಿರುವವು ಹುಚ್ಚು

**ಮಾತುಗಳು ಎಂದು, ಚೋದ್ಯಕರ ಮಾತುಗಳೆಂದು ಪ್ರಚಾರ ಮಾಡಿದ್ದಾರೆ. ಯಾವ ಜ್ಞಾನವನ್ನೂ ಹೇಳದ ತಮ್ಮನ್ನು ಪೀಠಾಧಿಪತಿಗಳಾಗಿ ಪ್ರಚಾರ ಮಾಡಿಕೊಂಡಿದ್ದಾರೆ. ತಾವು ಹೇಳಿರುವುದೇ ನಿಜವಾದ ಜ್ಞಾನವೆಂದು ಹೇಳುತ್ತಿದ್ದಾರೆ. ಹಿಂದೂ ಧರ್ಮಗಳೆಲ್ಲ ತಮ್ಮ ಕೈಯಲ್ಲಿರುವಂತೆ, ತಾವೇ ಹಿಂದೂಧರ್ಮಗಳನ್ನು ಶಾಶ್ವತವಾಗಿ ರಕ್ಷಿಸುತ್ತಿರುವಹಾಗೆ ಹೇಳುತ್ತಿದ್ದಾರೆ. ಈಗ ನೀವು ಹೊಸದಾಗಿ ತ್ರೈತ ಸಿದ್ಧಾಂತವನ್ನು ಪ್ರತಿಪಾದಿಸಿ, ಧರ್ಮ ಗಳೆಂದರೆ ಏನೋ ತಿಳಿಸುತ್ತಿದ್ದೀರ. ಆದರೂ ನಿಮಗು ಕೂಡಾ ಅವರು ವಿರುದ್ಧವಾಗಿ ಮಾತನಾಡುತ್ತಾ, ತಾವು ನಿಜವಾದ ಧರ್ಮ ಆಚರಣೆ ಹೊಂದಿದವರೆಂದು ಹೇಳುತ್ತಿದ್ದಾರೆ. ಈಗ ನಮಗೆ ಯಾವುದು ನಂಬಬೇಕೊ, ಯಾವುದು ನಂಬಬಾರದೊ ಸರಿಯಾದ ವಿವರಣೆ ಇಲ್ಲದೆ ಆಲೋಚಿಸುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಮಾನವ ಸಮಾಜಕ್ಕೆ ನೀವು ಕೊಡುವ ಸಂದೇಶವೇನು ಎಂದು ಕೇಳುತ್ತಿದ್ದೇವೆ.?**

**ಉತ್ತರ :–** ಆಧ್ಯಾತ್ಮಿಕವು ಈ ದಿನ ಎರಡು ವಿಧಗಳಲ್ಲಿ ಕಾಣಿಸುತ್ತಿದೆ. ಇಂದಿನ ಬ್ರಾಹ್ಮಣ ಸ್ವಾಮೀಜಿಗಳೆಲ್ಲರೂ ತಮ್ಮದೇ ಅಸಲಾದ ಆಧ್ಯಾತ್ಮಿಕ ಎನ್ನುತ್ತಿದ್ದಾರೆ. ಅವರದು ಹೊರಗಿನ ಆಧ್ಯಾತ್ಮಿಕ, ನಮ್ಮದು ಒಳಗಿನ ಆಧ್ಯಾತ್ಮಿಕ ಎಂದು ಹೇಳಬಹುದು. ಬ್ರಾಹ್ಮಣ ಪೀಠಾಧಿಪತಿಗಳ ಆಧ್ಯಾತ್ಮಿಕವು ನಿಜವಾದುದಾ? ಅಥವಾ ನಾವು ಆಚರಿಸುವ ಒಳಗಿನ ಆಧ್ಯಾತ್ಮಿಕ ನಿಜವಾದುದಾ? ಎಂದು ಆಲೋಚಿಸಿದರೆ ನಿಮಗೆ ಸಮಾಧಾನ ದೊರಕುತ್ತದೆ. **ಆತ್ಮವನ್ನು ಅಧ್ಯಾಯನ ಮಾಡುವುದನ್ನು ಆಧ್ಯಾತ್ಮಿಕ** ಎಂದು ಹೇಳಬಹುದು. ಆತ್ಮ ಎನ್ನುವುದು ಶರೀರದಲ್ಲಿರುತ್ತದೆ ಆದ್ದರಿಂದ ಶರೀರದಲ್ಲಿ ಆಚರಿಸುವುದೇ ಅಸಲಾದ ಆಧ್ಯಾತ್ಮಿಕ. ಅಂತರ್ಗತ ಆಧ್ಯಾತ್ಮಿಕವನ್ನು ಆಚರಿಸುವವನು ಹೊರಗಿನ ಆರಾಧನಾ ಕಾರ್ಯಗಳನ್ನು ಮಾಡುವುದಿಲ್ಲ. ಇಂದು ನಾವು ಪೀಠಾಧಿಪತಿಗಳು, ಆಧ್ಯಾತ್ಮಿಕರು, ಧರ್ಮರಕ್ಷಕರು

ಎಂದು ಹೇಳುವ ಒಂದು ಜಾತಿ ಸ್ವಾಮೀಜಿಗಳೆಲ್ಲರೂ ಎಷ್ಟು ಹೇಳಿದರೂ ಅವರು ಹೊರಗಿನ ಆರಾಧನೆ ಮೇಲೆಯೇ ಆಧಾರಪಡುತ್ತಾ, ಅವುಗಳನ್ನೇ ಮಾಡುತ್ತಾ ದೇವತೆಗಳನ್ನು ಆರಾಧಿಸುತ್ತಿದ್ದಾರೆ. ಹಗಲೆಲ್ಲ ಭಗವದ್ಗೀತೆಯನ್ನು ಓದಿ ಸಾಯಂಕಾಲ ರಾಜರಾಜೇಶ್ವರಿಗೊ, ದುರ್ಗಾದೇವಿಗೊ, ಯಾವುದೊ ಒಂದು ದೇವತೆಗೆ ಪೂಜೆಗಳು ಮಾಡಿ ಮಂಗಳಹಾರತಿಗಳು ಕೊಡುತ್ತಿದ್ದಾರೆ. ಅಂತಹ ಹೊರಗಿನ ಆರಾಧನೆಗಳು ಮಾಡುವವರಿಗೆ ಶರೀರದ ಒಳಗಿರುವ **ಆತ್ಮಜ್ಞಾನ** ಸ್ವಲ್ಪವೂ ತಿಳಿದಿಲ್ಲ. ಆತ್ಮ ಶರೀರದ ಒಳಗಿರುವುದರಿಂದ ಹೊರಗಿನ ಆರಾಧನೆಗಳು ಮಾಡುವವರದ್ದು ನಿಜವಾದ ಆಧ್ಯಾತ್ಮಿಕ ಅಲ್ಲವೆಂದು ಹೇಳ ಬಹುದು. ಈ ದಿನ ಸ್ವಾಮೀಜೀಯೆಂದೊ, ಪೀಠಾಧಿಪತಿಯೆಂದೊ ಹೇಳಿ ಕೊಳ್ಳುತ್ತಿರುವ ಬ್ರಾಹ್ಮಣ ಸ್ವಾಮೀಜಿಗಳದ್ದು ಆಧ್ಯಾತ್ಮಿಕ ಅಲ್ಲವೆಂದು, ಬಾಹ್ಯಾ ಚರಣೆಗಳು ಮಾಡದೆ ಒಳಗಿನ ಆತ್ಮವನ್ನು ಆರಾಧಿಸುವವರು ನಿಜವಾದ ಆಧ್ಯಾತ್ಮಿಕರೆಂದು ತಿಳಿಯಬೇಕು.

ಹೊರಗೆ ಆರಾಧನೆಗಳು ಮಾಡುವವರು ಯಜ್ಞ, ತಪಸ್ಸುಗಳನ್ನು ಮಾಡುತ್ತಾ, ವಿವಿಧ ಪೂಜೆಗಳು ಮಾಡುತ್ತಾ, ಎಲ್ಲವುಗಳಲ್ಲಿ ವೇದಗಳನ್ನು ಅಧ್ಯಯನ ಮಾಡುತ್ತಿರುತ್ತಾರೆ. ಅಂತವರು ಎಷ್ಟು ದೊಡ್ಡ ಸ್ವಾಮಿಗಳಾಗಿದ್ದರೂ ಅವರಿಗೆ ಸ್ವಲ್ಪವೂ ಕೂಡಾ ಒಳಗಿನ ಆತ್ಮಮೇಲೆ ಗಮನವಾಗಲಿ, ಅದನ್ನು ಆರಾಧಿಸುವ ಯೋಗಪದ್ಧತಿಯಾಗಲಿ ತಿಳಿದಿರುವುದಿಲ್ಲ. ಹಾಗೆ ತಿಳಿದಿದ್ದರೆ ಬಾಹ್ಯಾರಾಧನೆಗಳು, ದೇವತಾರಾಧನೆಗಳು ಮಾಡುವುದಿಲ್ಲ. ಎಷ್ಟು ಹೇಳಿದರೂ ಕೊನೆಗೆ ವೇದಮಂತ್ರಗಳನ್ನು ಓದುತ್ತಾ, ಹೊರಗಿನ ಆರಾಧನೆಗಳು ಮಾಡುವವರಿಗೆ ಆತ್ಮ ಧರ್ಮಗಳು ತಿಳಿಯುವುದಿಲ್ಲವೆಂದು, ದೈವಗ್ರಂಥಗಳಲ್ಲಿ ದೇವರು ಹೇಳಿದ ಜ್ಞಾನ ತಿಳಿಯದೆಂದು ಹೇಳಬಹುದು. ಬಾಹ್ಯಪೂಜೆಗಳು ಮಾಡುವವರಿಗೆ ಕರ್ಮಗಳನ್ನು ಜಯಿಸುವ ಶಕ್ತಿ ಇರುವುದಿಲ್ಲ. ಅಂತರ್ಗತ ಆಧ್ಯಾತ್ಮಿಕವನ್ನು ತಿಳಿದು ಆಚರಿಸುವವರಿಗೆ ಜ್ಞಾನಶಕ್ತಿ ಅಮಿತವಾಗಿದ್ದು ಇತರರ ಕರ್ಮಗಳನ್ನು ಇಲ್ಲದಂತೆ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ. ನಾವು ಬರೆದ ಪ್ರತಿ

ಗ್ರಂಥದಲ್ಲಿ ಅಂತಹ ಜ್ಞಾನಾಗ್ನಿ ಇದೆಯೆಂದು, ದೇವರನ್ನು ವಿಶ್ವಾಸಿಸಿದವರಿಗೆ ಅದು ಕರ್ಮಗಳನ್ನು ಸುಡುವುದಕ್ಕೆ ಉಪಯೋಗಪಡುತ್ತಿದೆಯೆಂದು ಹೇಳುತ್ತಿದ್ದೇವೆ. ಅಷ್ಟೇ ಅಲ್ಲದೆ ವೇಮನಯೋಗಿ ತನ್ನ ಪದ್ಯಗಳಲ್ಲಿ ವೇದಗಳನ್ನು ಕುರಿತು ತಿಳಿಸಿದ ತನ್ನ ಉದ್ದೇಶವನ್ನು ನೀವು ಕೆಳಗೆ ನೋಡಬಹುದು.

***ಪದ್ಯ 1:*** ***ವೇದಗಳನ್ನು ಓದಿ ಯಾರೇನು ಗಳಿಸಿದರು?***
***ತಿಳಿದು ತಿರುಗಿ ಬರುವರೆಲ್ಲರು ಅಲ್ಲವೆ!***
***ಬ್ರಹ್ಮವೇನೊ ತಿಳಿದು ಬದುಕುವುದು ನಿಜವಯ್ಯಾ***
***ವಿಶ್ವದಾಭಿರಾಮ ಕೇಳು ವೇಮಾ.***

**ತಾತ್ಪರ್ಯ :–** ವೇದಗಳನ್ನು ಓದಿದ್ದೇವೆಂದು ಬ್ರಾಹ್ಮಣರು ಗರ್ವಿಸಿದರು ಪ್ರಯೋಜನವೇನು? ಅವನ ಉಪಯೋಗವೇನು? ಬ್ರಹ್ಮವನ್ನು ತಿಳಿದುಕೊಂಡಾಗಲೇ ಆತನಿಗೆ ಬ್ರಾಹ್ಮಣತ್ವ ಸಿದ್ಧಿಸುತ್ತದೆ.

**ಪದ್ಯ 2:** ***ವೇದ ವಿದ್ಯೆಯೆಲ್ಲ ವೇಶ್ಯೆಯರಂತಹವು***
***ಭ್ರಮೆಯಗೊಳಿಸಿ ತಿಳಿಯ ಮಾಡಗೊಡವು***
***ಗುಪ್ತ ವಿದ್ಯೆಯೊಂದೆ ಕುಲಕಾಂತೆ ಯಂತಹುದು***
***ವಿಶ್ವದಾಭಿರಾಮ ಕೇಳು ವೇಮಾ.***

**ತಾತ್ಪರ್ಯ :–** ವೇದವಿದ್ಯೆಗಳು ವೇಶ್ಯರಂತೆ ಭ್ರಮೆಗಳಿಟ್ಟು ತತ್ತ್ವ ತಿಳಿಯದಂತೆ ಮಾಡುವವು. ಬ್ರಹ್ಮವನ್ನು ತಿಳಿದುಕೊಳ್ಳುವ ವಿದ್ಯೆಯೊಂದೇ ಕುಲಸ್ತ್ರೀಯಂತೆ ಉತ್ತಮವಾಗಿ ಕೀರ್ತಿಯನ್ನುಂಟುಮಾಡಿ ಮುಕ್ತಿಯನ್ನುಂಟು ಮಾಡುವುದು.

**ಪದ್ಯ 3:** ***ವೇದಶಾಸ್ತ್ರಗಳನ್ನು ಹೆಚ್ಚಾಗಿ ತಾಕಲಿತು***
***ವಾದಮಾಡುವವನು ಬರೀದವನು***
***ಸಾರವಾದ ಗುರುತು ಸಾಕ್ಷಿಯಾಗಿ ತಿಳಿ***
***ವಿಶ್ವದಾಭಿರಾಮ ಕೇಳು ವೇಮಾ.***

**ತಾತ್ಪರ್ಯ** *:–* ಸರ್ವೋತ್ಕೃಷ್ಟವಾದ ಗುರುತನ್ನು ಸಾಧಿಸಿದವನೇ ಸನ್ಯಾಸಿ.

**ಪದ್ಯ 4:** ***ವೇದಗಳನ್ನು ಓದಿ ಬೀಗುವುದೇ ಹೊರತು***
***ಅಧಮಗತಿಗೆ ಬಿದ್ದರವರೆಲ್ಲ***
***ಬ್ರಹ್ಮ ಮಹಿಮೆ ಅರಿತು ಬದುಕುವುದೇ ಬದುಕಯ್ಯಾ***
***ವಿಶ್ವದಾಭಿರಾಮ ಕೇಳು ವೇಮಾ.***

**ತಾತ್ಪರ್ಯ :–** 'ನಾವು ಬ್ರಾಹ್ಮಣರು, ವೇದಗಳನ್ನು ಓದಿದ್ದೇವೆ' ಎಂದು ಜಂಭಕೊಚ್ಚಿಕೊಂಡು, ಬ್ರಹ್ಮ ಮಹಿಮೆಯನ್ನು ತಿಳಿದುಕೊಳ್ಳಲಾರದೆ ಮೂಡರಧೋಗತಿ ಪಾಲಾಗುತ್ತಾರೆ. ಬ್ರಹ್ಮವನ್ನು ಅರಿತವರ ಜೀವನವೇ ಜೀವನವು.

**ಪದ್ಯ 5:** ***ವೇನ ಸಾವಿರ ಸೇರಿ ಹುಚ್ಚುನಾಯಿಗಳಂತೆ***
***ಅರ್ಥಹೀನ ವೇದ ಹೇಳುತ್ತಿದ್ದರು***
***ಕಂಠಶೋಷಕ್ಕಿಂತ ಉಂಟಾಗುವ ಫಲವೇನು?***
***ವಿಶ್ವದಾಭಿರಾಮ ಕೇಳು ವೇಮಾ.***

**ತಾತ್ಪರ್ಯ :–** ಸಾವಿರಾರು ಗುಂಪಾಗಿ ಸೇರಿ ಹುಚ್ಚುನಾಯಿಗಳು ಅರಚಿದಂತೆ, ಅರ್ಥವಿಲ್ಲದ ವೇದವನ್ನು ಓದುತ್ತಿರುತ್ತಾರೆ. ಇವರಿಗೆ ಕಂಠಶೋಷವೇ ಉಳಿಯುತ್ತದೆ.

**17) ಪ್ರಶ್ನೆ :– ವೇದ ಎಂದರೇ ವೇದನೆಯಿಂದ ಕೂಡಿಕೊಂಡಿರುವುದೆಂದು, 'ವೇದನೆ' ಎಂಬ ಪದದಿಂದ 'ವೇದ' ಎಂಬ ಪದ ಹುಟ್ಟಿದೆಯೆಂದು ನೀವು ಹೇಳಿದ್ದೀರ. ಆದರೆ ಸ್ವಲ್ಪ ಜನ ವಿದ್ ಎಂಬ ಸಂಸ್ಕೃತ ಪದದಿಂದ ವೇದವು ಬಂದಿದೆಯೆಂದು, ವಿದ್ ಎಂದರೇ ತಿಳಿಯುವುದೆಂದು, ವೇದ ಎಂದರೇ ತಿಳಿದುಕೊಳ್ಳಬೇಕಾಗಿರುವುದೆಂದು ಎನ್ನುತ್ತಿದ್ದಾರೆ. ಯಾವುದು ಸತ್ಯವೋ ತಿಳಿಸಬೇಕೆಂದು ಕೋರುತ್ತಿದ್ದೇವೆ?**

**ಉತ್ತರ :–** ವಿದ್ ಎಂದರೆ ತಿಳಿಯುವುದು ಎನ್ನುವುದು ವಾಸ್ತವವೇ ಆದರೂ 'ವಿದ್' ಎಂಬ ಪದದಿಂದ 'ವಿದ್ಯೆ' ಎಂಬ ಪದ ಹುಟ್ಟಿದೆ ಆದರೆ ವೇದ ಎಂಬ ಪದ ಹುಟ್ಟಲಿಲ್ಲ. ವಿದ್ಯೆ ಮುಖಾಂತರವೇ ಯಾರಾದರೂ ಏನನ್ನಾದರೂ ತಿಳಿಯ ಬಹುದು. ಆದ್ದರಿಂದ ವಿದ್ ಎಂದರೇ ತಿಳಿಯುವುದು ಸತ್ಯ. ವಿದ್ ಎನ್ನುವ ದಾತುವಿನಿಂದ ವಿದ್ಯೆ ಎಂಬ ಪದ ಹುಟ್ಟಿದೆ. ಇದನ್ನನುಸರಿಸಿ ವಿದ್ ಎಂಬ ಪದಕ್ಕು, ವೇದ ಎಂಬ ಪದಕ್ಕು ಸ್ವಲ್ಪವೂ ಸಂಬಂಧ ಇಲ್ಲವೆಂದು ತಿಳಿಯುತ್ತಿದೆ.

**18) ಪ್ರಶ್ನೆ :– ಹಿಂದೂ ಮತದಲ್ಲಿ ಸಿದ್ಧಾಂತ ಕರ್ತರಾಗಿ ಹೆಸರು ವಾಸಿಯಾದ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಇದ್ದಾರೆ. ಸಂಸ್ಕೃತದಲ್ಲಿ, ವ್ಯಾಸನು ಹೇಳಿದ ಭಗವದ್ಗೀತೆಗೆ ಮಳಯಾಲ ಭಾಷೆಯಲ್ಲಿ ಶಂಕರಾಚಾರ್ಯರವರು, ತಮಿಳು ಭಾಷೆಯಲ್ಲಿ ರಾಮಾನುಜಾಚಾರ್ಯರವರು, ಕನ್ನಡ ಭಾಷೆಯಲ್ಲಿ ಮಧ್ವಾಚಾರ್ಯರವರು ವಿವರವನ್ನು ಬರೆದಿದ್ದಾರೆ. ಅವರು ಮೂವರು ಭಗವದ್ಗೀತೆಯಲ್ಲಿ ಹೇಳಿದ ವೇದಗಳನ್ನು ಅಧರ್ಮಗಳೆಂದು ಖಂಡಿಸಿ ದಂತೆ ಎಲ್ಲಿಯೂ ಇಲ್ಲ. ಅಷ್ಟು ದೊಡ್ಡವರಿಗೆ ಕಾಣಿಸದ ತಪ್ಪು ನಿಮಗೆ ಮಾತ್ರವೇ ಕಾಣಿಸಿದೆಯಾ? ಪ್ರತಿನಿತ್ಯ ಭಗವದ್ಗೀತೆಯನ್ನು ಉಪನ್ಯಸಿಸುವ ಸ್ವಾಮೀಜಿಗಳಿಗು, ಪೀಠಾಧಿಪತಿಗಳಿಗೂ, ಬ್ರಾಹ್ಮಣರಿಗೂ ವೇದಗಳು ಅಧರ್ಮಗಳೆಂದು ತಿಳಿಯದಂತೆ ಇರುತ್ತದಾ? ಅವರು ದೇವರು ಹೇಳಿದ ಶ್ಲೋಕಗಳಿಗೆ ವಿರುದ್ಧವಾಗಿ ಬೋಧಿಸುತ್ತಿದ್ದಾರಾ? ನೀವು ಉತ್ತರ ಹೇಳಿರಿ.**

**ಉತ್ತರ :–** ಹಿಂದೂಮತದಲ್ಲಿ ಗತದಲ್ಲಿ ಮೂವರು ಸಿದ್ಧಾಂತಕರ್ತರಿರುವುದು ನಿಜವೇ. ಆದರೇ ಈಗ ಸುಮಾರು 40 ವರ್ಷಗಳಿಂದ **"ತ್ರೈತ ಸಿದ್ಧಾಂತ"** ಎನ್ನುವ ಹೆಸರಿನಿಂದ ನಾಲ್ಕನೆ ಸಿದ್ಧಾಂತ ಬಂದಿದೆ. ಹೊಸದಾಗಿ ಬಂದ ತ್ರೈತ ಸಿದ್ಧಾಂತವನ್ನು ಪ್ರತಿಪಾದಿಸಿರುವುದು **ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ**

**ಯೋಗೀಶ್ವರರು.** ಈ ದಿನ ತ್ರೈತ ಸಿದ್ಧಾಂತವನ್ನು ಕುರಿತು ಹೇಳುವುದೇ ಅಲ್ಲದೆ ತ್ರೈತ ಸಿದ್ಧಾಂತದಲ್ಲಿ **ಯಾವುದು ಸತ್ಯ, ಯಾವುದು ಅಸತ್ಯ** ಎಂದು ತೀರ್ಮಾನಿಸಿ ಹೇಳುವುದು ನಡೆಯುತ್ತಿದೆ. ಆ ಪದ್ಧತಿಯಲ್ಲಿ ಮೂವರು ಸಿದ್ಧಾಂತಕರ್ತರು ಹೇಳದ ಸತ್ಯವನ್ನು ಈಗ ಹೇಳುವುದು ನಡೆಯುತ್ತಿದೆ. ಗತದಲ್ಲಿ ಎಷ್ಟೋ ದೊಡ್ಡ ಹೆಸರುವಾಸಿಯಾದ ಮೂವರು ಸಿದ್ಧಾಂತಕರ್ತರಿಗೆ ವೇದಗಳ ವಿಷಯದಲ್ಲಿ ನಿಮಗೆ ಕಾಣಿಸಿದ ಸತ್ಯ ಕಾಣಿಸಲಿಲ್ಲವಾ! ಎಂದು ಕೆಲವರು ಕೇಳುತ್ತಿದ್ದಾರೆ. ಅದಕ್ಕೆ ನಾನು ನೇರವಾಗಿ ಸಮಾಧಾನ ಹೇಳದೆ ಚಿಕ್ಕ ಉದಾಹರಣೆಯನ್ನು ಹೇಳುತ್ತೇನೆ. ಅದನ್ನನುಸರಿಸಿ ಅವರಿಗೆ ವೇದಗಳ ವಿಷಯದಲ್ಲಿ ಏನು ಕಾಣಿಸಿದೆಯೋ ನಿಮಗೇ ತಿಳಿಯಬಲ್ಲದು. ಹೊನ್ನಿಗೂ ಮಣ್ಣಿಗೂ ವ್ಯತ್ಯಾಸ ತಿಳಿಯದ ಅವರನ್ನು ಹೇಗೆ ಹೋಲಿಸಿಕೊಳ್ಳುತ್ತೇವೋ, ವೇದಕ್ಕೂ ಧರ್ಮಕ್ಕೂ ವ್ಯತ್ಯಾಸ ತಿಳಿಯದವರನ್ನು ಹಾಗೇ ಹೋಲಿಸಿಕೊಳ್ಳಬಹುದು. ಗತದಲ್ಲಿ ಸಿದ್ಧಾಂತ ಕರ್ತರು ಭಗವದ್ಗೀತೆಯಲ್ಲಿನ ಒಂದು ಶ್ಲೋಕಕ್ಕೆ ವಿವರವನ್ನು ಹೇಳಿದ ವಿಧಾನವನ್ನು ಈಗ ನೋಡೋಣ. (ಆತ್ಮ ಸಂಯಮ ಯೋಗ ಎನ್ನುವ ಅಧ್ಯಾಯದಲ್ಲಿ ಮೊಟ್ಟ ಮೊದಲನೆಯ ಶ್ಲೋಕವನ್ನು ನೋಡಿರಿ.)

**ಶ್ಲೋ॥ 1. ಅನಾಶ್ರಿತಃ ಕರ್ಮಫಲಮ್ ಕಾರ್ಯಂ ಕರ್ಮಕರೋತಿಯಃ ।**

**ಸ ಸನ್ನ್ಯಾಸೀಚ ಯೋಗೀಚ ನನಿರಗ್ನಿ ರ್ನಚಾಕ್ರಿಯಃ ॥**

**ಭಾವಾರ್ಥ** :– ಕರ್ಮಫಲವನ್ನಾಶ್ರಯಿಸದೆ ಕೆಲಸಗಳು ಮಾಡಬೇಕೆಂದು ತಿಳಿದು ಯಾರು ಮಾಡುವನೋ ಅವನೇ ನಿಜವಾದ ಸನ್ನ್ಯಾಸಿ, ನಿಜವಾದ ಯೋಗಿ. ಕಾರ್ಯಗಳು ಮಾಡದವನು, ಅಗ್ನಿ ಇಲ್ಲದವನು ಯೋಗಿಯಾಗಲೀ, ಸನ್ನ್ಯಾಸಿಯಾಗಲಿ ಅಲ್ಲ.

ಈ ಶ್ಲೋಕ ಭಗವದ್ಗೀತೆಯಲ್ಲಿ ಬಹಳ ಮುಖ್ಯವಾದ ಶ್ಲೋಕ. ಭಗವಂತನಾದ ಕೃಷ್ಣನು ಹೇಳಿದ ಧರ್ಮಯುಕ್ತವಾದ ಯೋಗಗಳಲ್ಲಿ **ಬ್ರಹ್ಮಯೋಗ, ಕರ್ಮಯೋಗ** ಎನ್ನುವ ಎರಡು ಯೋಗಗಳು ಇವೆ. ಅದರಲ್ಲಿ ಸಾಧಾರಣ

ಮನುಷ್ಯರೆಲ್ಲರೂ ಆಚರಿಸುವಂಥಾದ್ದು ಕರ್ಮಯೋಗ. ಕರ್ಮಯೋಗವನ್ನು ಒಂದು ಮಾತಿನಲ್ಲಿ ಹೇಳಿದ ಶ್ಲೋಕ ಆತ್ಮ ಸಂಯಮಯೋಗದಲ್ಲಿ ಮೊದಲ ಶ್ಲೋಕವೆಂದು ಹೇಳಬಹುದು. ಆದರೇ ಈ ಶ್ಲೋಕದಲ್ಲಿನ ಭಾವ ಬಟ್ಟಬಯಲು ಮಾಡಿದಂತೆ ಎಲ್ಲರಿಗೂ ಅರ್ಥವಾಗುವಂತೆ ಇದೆ. ಆದರೂ ಭಗವದ್ಗೀತೆಯನ್ನು ವಿವರಿಸಿ ಬರೆದವರಲ್ಲಿ ಮೊದಲನೆಯವನಿಂದ ಹಿಡಿದು ಕೊನೆಯವನವರೆಗು ಬರೆದ ವಿವರವನ್ನು ಗಮನಿಸಿದರೆ ತಪ್ಪು ದಾರಿಯನ್ನು ತೋರಿಸಿದಂತೆ ಇದೆ. ಅದರಲ್ಲಿ ಮೊಟ್ಟಮೊದಲು ಆದಿಶಂಕರಾಚಾರ್ಯರು ಎರಡು ಸಾವಿರ ವರ್ಷಗಳ ಸಮಯದಲ್ಲಿ ಬರೆದಂತೆ ಇದೆ. ನಂತರ ಉಳಿದ ಇಬ್ಬರು ರಾಮಾನುಜಾ ಚಾರ್ಯರು, ಮಧ್ವಾಚಾರ್ಯರು, ಬಹಳ ಮಂದಿ ಸ್ವಾಮೀಜಿಯರು, ಪಂಡಿತರು ಬರೆಯುವುದು ನಡೆದಿದೆ. ಬರೆದವರೆಲ್ಲರೂ ಅವರ ಭಾವದಲ್ಲಿ **"ನನಿರಗ್ನಿ"** ಎನ್ನುವ ಮಾತಿಗೆ ಅಗ್ನಿಹೋತ್ರ ಮಾಡದವನು ಎಂದು ಕೆಲವರು, ಯಜ್ಞಗಳು ಮಾಡದವನು ಎಂದು ಕೆಲವರು ಬರೆಯುವುದು ನಡೆದಿದೆ. ಎಲ್ಲರೂ ಅದೇ ವಿಧವಾಗಿ ಬರೆದಿರುವುದರಿಂದ ಭಗವದ್ಗೀತೆ ಮಾನವರೆಲ್ಲರಿಗೂ ಹೇಳಿರುವುದು ಅಲ್ಲವೆಂದೂ, ಕೇವಲ ಯಜ್ಞಯಾಗಾದಿಗಳು ಮಾಡುವ ಬ್ರಾಹ್ಮಣರಿಗೇಯೆಂದು ಹೇಳಿದಂತಾಗಿದೆ. ಸಂಸ್ಕೃತ ಭಾಷೆಯಲ್ಲಿ ಓದನ್ನು ಕಲಿತವರು, ಯಜ್ಞಗಳನ್ನು ಮಾಡುವ ವಿಧಾನವನ್ನು ತಿಳಿದವರು ಬ್ರಾಹ್ಮಣರೇ ಆಗಿರುವುದರಿಂದ ಉಳಿದ ಪ್ರಜೆಗಳಿಗೆ ಭಗವದ್ಗೀತೆಯನ್ನು ಓದುವುದಕ್ಕೆ ಬರುವುದಿಲ್ಲ. ಅಷ್ಟೇ ಅಲ್ಲದೆ ಕೆಲವರು ಭಗವದ್ಗೀತೆಯನ್ನು ವೇದಗಳು ತಿಳಿದ ಬ್ರಾಹ್ಮಣರೇ ಓದಬೇಕು, ಉಳಿದವರು ಓದಬಾರದು ಎಂದು ಹೇಳುವುದರಿಂದ ಪ್ರಜೆಗಳೆಲ್ಲರೂ ಭಗವದ್ಗೀತೆಗೆ ದೂರವಾಗಿ ಹೋಗಿದ್ದಾರೆ.

ಎಲ್ಲಾದರೂ ಯಾರಾದರೂ ಓದಿದರೂ ಈ ಶ್ಲೋಕಗಳು ತಮಗೆ ಅಲ್ಲ ಕೇವಲ ಯಜ್ಞಗಳು ಮಾಡುವ ಬ್ರಾಹ್ಮಣರಿಗೇಯೆಂದು ಅರ್ಥವಾಗುತ್ತಿದೆ. ವಾಸ್ತವವಾಗಿ ಮೇಲಿನ ಶ್ಲೋಕದಲ್ಲಿ ಭಗವಂತನು ಹೇಳಿದ ಸತ್ಯವನ್ನು ನೋಡಿದರೆ "ಕರ್ಮ ಫಲಗಳಾದ ಕಾಣಿಸದ ಪಾಪಪುಣ್ಯಗಳ ಮೇಲಯಾಗಲಿ, ಕಾಣಿಸುವ

ಲಾಭನಷ್ಟಗಳ ಮೇಲೆಯಾಗಲೀ ಗಮನ ಇಲ್ಲದಂತೆ ಮಾಡಬೇಕಾದ ಕಾರ್ಯಗಳನ್ನು ಮಾಡಬೇಕೆಂದು ತಿಳಿದು, ನಿಮಿತ್ತಮಾತ್ರನಾಗಿ ಮಾಡಬೇಕೆನ್ನುವ ಉದ್ದೇಶದಿಂದ ಮಾಡುವವನು ನಿಜವಾದ ಸನ್ನ್ಯಾಸಿ, ನಿಜವಾದ ಯೋಗಿ" ಎಂದು ಹೇಳಬಹುದು. ಹಾಗಲ್ಲದೆ "ನಾನು ಕೆಲಸಗಳನ್ನೇ ಮಾಡುವುದಿಲ್ಲ, ಸನ್ನ್ಯಾಸಿಸಿದವನು ಕೆಲಸಗಳು ಮಾಡಬಾರದು ಎಂದು ಕಾರ್ಯಗಳನ್ನು ಬಿಟ್ಟುಕೊಂಡವನಾಗಲೀ, ಅಗ್ನಿ ಇಲ್ಲದವನಾಗಲೀ, ನಿಜವಾದ ಸನ್ನ್ಯಾಸಿ ಎಂದಾಗಲೀ, ನಿಜವಾದ ಯೋಗಿ ಎಂದಾಗಲೀ ಹೇಳಲ್ಪಡುವುದಿಲ್ಲ" ಎಂದು ತಿಳಿಯುತ್ತಿದೆ.

ಈ ಶ್ಲೋಕದಲ್ಲಿ ಮುಖ್ಯವಾಗಿ ವಿಶೇಷವಾಗಿರುವ ಪದ **"ನನಿರಗ್ನಿ"** ಎನ್ನುವುದು. **ನನಿರಗ್ನಿ** ಎಂದರೆ **ಅಗ್ನಿ ಇಲ್ಲದವನು** ಎಂದು ಅರ್ಥ ಇದೆ. ಅಗ್ನಿ ಎನ್ನುವ ಪದ ಕೇಳಿಸುತ್ತಲೇ, ಅಲ್ಲಿ ಹೇಳಿರುವುದು ಯಾವ ಅಗ್ನಿಯನ್ನು ಎಂದು ಆಲೋಚಿಸದಂತೆ ಹೊರಗೆ ಕಾಣಿಸುವ ಅಗ್ನಿಯನ್ನು ಕುರಿತು ಹೇಳುತ್ತಾ ಅಗ್ನಿಯನ್ನು ಹಚ್ಚಿ ಮಾಡುವ ಕಾರ್ಯಗಳಾದ ಯಜ್ಞಯಾಗಾದಿಗಳು ಮಾಡದವರು ಎಂದು ಹೇಳಿದ್ದಾರೆ. ಈ ವಿಷಯವನ್ನು ಸಿದ್ಧಾಂತಕರ್ತರು ಹೇಳಿದಂತೆ ಸಹ ಬರೆದಿದ್ದಾರೆ. ಹಾಗೆ ಅವರು ಹೇಳಿದ್ದರೇ ಅವರದ್ದು ಸಹ ತಪ್ಪೇಯೆಂದು ಈ ಶ್ಲೋಕ ಭಾವವನ್ನು ಪರಿಶೋಧಿಸಿದ ನಂತರ ಹೇಳುವುದು ತಪ್ಪುವುದಿಲ್ಲ. ಏಕೆಂದರೇ! ಭಗವದ್ಗೀತೆಯಲ್ಲಿನ ಈ ಶ್ಲೋಕದಲ್ಲಿ ಬಾಹ್ಯ ಅಗ್ನಿಯನ್ನು ಕುರಿತು ಹೇಳಿದಂತೆ ಇಲ್ಲ. ಹಾಗೆ ಇಲ್ಲದ್ದನ್ನು ಕುರಿತು ಇರುವಂತೆ ಹೇಳುವುದು ಯಾರದಾದರೂ ತಪ್ಪಾಗುತ್ತದೆ. ಇಲ್ಲದ್ದನ್ನು ಇದ್ದಂತೆ ಕಲ್ಪಿಸಿ ಒಬ್ಬರು ಹೇಳಬಹುದು ಅಥವಾ ಇಬ್ಬರು ಹೇಳಬಹುದು. ಹಾಗೆ ಅಲ್ಲದೆ ಎಲ್ಲರೂ ಏಕೆ ಹೇಳಿರುತ್ತಾರೆ? ಎಂದು ಯಾರಿಗಾದರೂ ಅನುಮಾನ ಬರಬಹುದು. ಎಲ್ಲರೂ ಒಂದೇ ಭಾವವನ್ನು ಹೇಳಿರುವುದರಿಂದ ಅದೇ ಸತ್ಯ ಎಂದು ಎಲ್ಲರೂ ನಂಬುವ ಅವಕಾಶವಿದೆ. ಹಾಗೆಯೇ ಎಲ್ಲರೂ ನಂಬಿದ್ದಾರೆ. ಆದರೆ ನಾನು ಹಾಗೆ ನಂಬಲಿಲ್ಲ. ಶಾಸ್ತ್ರಬದ್ಧವಾದ ವಿವರವನ್ನು ತಿಳಿದುಕೊಂಡು ಇತರರಿಗೆ ತಿಳಿಸಬೇಕೆಂದು

ಅಂದುಕೊಂಡಿದ್ದೇನೆ. ಆದ್ದರಿಂದ ಈ ಶ್ಲೋಕವನ್ನು ಕುರಿತು ವಿವರಿಸಿ ಮಾತನಾಡಬೇಕೆಂದುಕೊಂಡಿದ್ದೇನೆ. ನನ್ನ ಮಾತು ಪ್ರಜೆಗಳಿಗೆ ಹಿಡಿಸಿದರೂ, ಹಿಡಿಸದೆ ಹೋದರೂ ದೇವರ ಲೆಕ್ಕದಲ್ಲಿ ಸಕ್ರಮವಾಗಿ ಇರಬೇಕೆನ್ನುವುದೇ ನನ್ನ ಉದ್ದೇಶ.

ಪ್ರಪಂಚದಲ್ಲಿ ಪ್ರತಿಯೊಂದೂ ಸೂಕ್ಷ್ಮ, ಸ್ಥೂಲ ಎಂದು ಎರಡು ವಿಧಗಳು ಇವೆ. ಹಾಗೆಯೇ ಅಗ್ನಿ ಸ್ಥೂಲವಾಗಿದ್ದು ಕಟ್ಟಿಗೆಗಳನ್ನು ಸುಡುವುದಾಗಿ ಇದೆ. ಯಾವ ವಸ್ತುವನ್ನಾದರೂ ಸುಡುವ ಅಗ್ನಿ ಸ್ಥೂಲವಾಗಿಯೇ ಅಲ್ಲದೆ ಸೂಕ್ಷ್ಮವಾಗಿಯೂ ಸಹ ಇದೆ. **ಸ್ಥೂಲವಾಗಿರುವ ಅಗ್ನಿ ಉರಿಯುವುದಕ್ಕೆ ಪ್ರಾಣವಾಯು (ಆಕ್ಸಿಜನ್) ಅವಶ್ಯ. ಹಾಗೆಯೇ ಸೂಕ್ಷ್ಮವಾಗಿರುವ ಅಗ್ನಿ ಉರಿಯುವುದಕ್ಕೆ ಜ್ಞಾನ (ನಾಲೆಡ್ಜ್) ಅವಶ್ಯ.** ಪ್ರಾಣವಾಯು ಇಲ್ಲದಕಡೆ ಉರಿಯುವ ಅಗ್ನಿ ಇರುವುದಿಲ್ಲ. ಹಾಗೆಯೇ ಜ್ಞಾನ ಇಲ್ಲದಕಡೆ ಬೆಳಗುವ ಜ್ಞಾನಾಗ್ನಿ ಇರುವುದಿಲ್ಲ. ಅಗ್ನಿ ಸ್ಥೂಲ, ಸೂಕ್ಷ್ಮ ಎನ್ನುವ ಎರಡು ವಿಧಗಳಾಗಿ ಇದೆ. ಸೂಕ್ಷ್ಮವಾಗಿ ಕಾಣಿಸದವನಾಗಿರುವ ದೇವರನ್ನು ಕುರಿತು ಭಗವದ್ಗೀತೆ ಹೇಳುವುದು. ಆದ್ದರಿಂದ ಭಗವದ್ಗೀತೆಯಲ್ಲಿ ಸೂಕ್ಷ್ಮವಾದ ಜ್ಞಾನಾಗ್ನಿ ಕುರಿತೇ ಹೇಳಿದೆಯೆಂದು ತಿಳಿಯಬೇಕು. ಅಷ್ಟೇ ಹೊರತು, ಶ್ಲೋಕದಲ್ಲಿ ಇಲ್ಲದ 'ಯಜ್ಞ' ಎನ್ನುವ ಪದವನ್ನು ತಂದು ಇಟ್ಟುಕೊಳ್ಳುವುದು ತಪ್ಪು ಆಗುತ್ತದಲ್ಲವೆ! ಶ್ಲೋಕದಲ್ಲಿ ಯಜ್ಞ ಯಾಗಗಳು ಮಾಡುವ ಅಗ್ನಿ ಎಂದು ಒಂದು ಅಕ್ಷರವನ್ನಾದರೂ ಹೇಳಿದ್ದಾನಾ! ಅಂದರೇ ಅದು ಯಾವುದೂ ಇಲ್ಲ. ಆದ್ದರಿಂದ ಈ ಶ್ಲೋಕದಲ್ಲಿ ಹೇಳಿರುವುದು ಸೂಕ್ಷ್ಮವಾದ ಜ್ಞಾನಾಗ್ನಿಯನ್ನು ಕುರಿತೇಯೆಂದು ತಿಳಿಯುತ್ತಿದೆ.

ಯೋಗಿ ಅಥವಾ ಸನ್ಯಾಸಿ ಎನ್ನುವಾತನನ್ನು ಕುರಿತು ಮಾತನಾಡುವಾಗ 'ಜ್ಞಾನ' ಎನ್ನುವ ಅಗ್ನಿಯನ್ನನುಸರಿಸಿಯೇ ನೋಡಬೇಕಾಗಲಿ, ಹೊರಗೆ ಅಗ್ನಿಯನ್ನನುಸರಿಸಿ ನೋಡುವುದಕ್ಕೆ ಅವಕಾಶವಿಲ್ಲ. ಹೊರಗಿನ ಅಗ್ನಿ ಇರುವವನು ಯೋಗಿಯಾದರೆ ಚಿಕ್ಕ ಕುಣಿಯಲ್ಲಿ ಸ್ವಲ್ಪ ಮಟ್ಟದ ಅಗ್ನಿಯಿಂದ ಯಜ್ಞಗಳು

ಮಾಡುವವರಿಗಿಂತ ದೊಡ್ಡದೊಡ್ಡ ಫ್ಯಾಕ್ಟರೀಗಳಲ್ಲಿ ಇರುವ ದೊಡ್ಡ ದೊಡ್ಡ ಬಾಯಿಲರ್‌ಗಳನ್ನು ಉರಿಸುವವನು, ಉಕ್ಕು ಕರ್ಮಾಗಾರದಲ್ಲಿ ಕಬ್ಬಿಣವನ್ನು ಕರಿಗಿಸುವ ಕಡೆ ಉರಿಸುವ ಅಗ್ನಿ ನಿಲಯಗಳ ಹತ್ತಿರ ಕೆಲಸ ಮಾಡುವವರನ್ನು ದೊಡ್ಡ ಯೋಗಿಗಳಾಗಿ, ದೊಡ್ಡ ಸನ್ಯಾಸಿಗಳಾಗಿ ಲೆಕ್ಕಿಸಬೇಕಾಗಿರುತ್ತದೆ. ಇನ್ನು ಪಶುಗಳ ಮೇವನ್ನು ಒಂದುಕಡೆ ಸೇರಿಸಿದ ಹುಲ್ಲಿನ ಬಣವೆಗಳನ್ನು ಇಲ್ಲದಂತೆ ಮಾಡಬೇಕೆಂದು ಬಣವೆಗೆ ಬೆಂಕಿ ಇಡುವ ದುರ್ಮಾರ್ಗನನ್ನು ಕೂಡಾ ಯೋಗಿಯಾಗಿಯೇ ಲೆಕ್ಕಿಸಬೇಕಾಗಿರುತ್ತದೆ. ಇದ್ದಲಿಗಾಗಿ ಕಾಡನ್ನು ಹಚ್ಚುವವನನ್ನು ಕೂಡಾ ಯೋಗಿಯಾಗಿಯೇ ಲೆಕ್ಕಿಸಬೇಕಾಗಿರುತ್ತದೆ. ಚಿಕ್ಕ ಅಗ್ನಿಕುಂಡದಲ್ಲಿ ಬೆಂಕಿಯನ್ನು ಉರಿಸುವವನು ಯೋಗಿ, ಸನ್ಯಾಸಿಯಾದರೆ ಕೆಲವು ನೂರಾರು ಚದರ ಮೈಲುಗಳ ವಿಸ್ತೀರ್ಣದಲ್ಲಿರುವ ಕಾಡನ್ನು ಅಂಟಿಸುವವನನ್ನು, ಇನ್ನೂ ದೊಡ್ಡ ಯೋಗಿ ಎನ್ನುವುದಕ್ಕೆ ಅವಕಾಶವಿದೆ. ಹೀಗೆ ಹೊರಗಿನ ಅಗ್ನಿಯನ್ನನು ಸರಿಸಿ ಅಲ್ಲದೆ, ಒಳಗಿನ ಅಗ್ನಿಯಾದ ಜ್ಞಾನಾಗ್ನಿಯನ್ನನುಸರಿಸಿ ಯೋಗಿಗಳು ಇರುತ್ತಾರೆಂದು ತಿಳಿದು ಜ್ಞಾನಾಗ್ನಿ ಇಲ್ಲದವನನ್ನು ಯೋಗಿ ಎಂದಾಗಲಿ, ಕಾರ್ಯಗಳು ಮಾಡದವನನ್ನು ಸನ್ಯಾಸಿ ಎಂದಾಗಲಿ ಅನ್ನಬಾರದೆಂದು ಶ್ಲೋಕದಲ್ಲಿ **'ನನಿರಗ್ನಿ ನಚಾಕ್ರಿಯಃ'** ಎಂದು ಹೇಳುವುದೇ ಅಲ್ಲದೆ **'ಸಯೋಗಿ ನಸನ್ಯಾಸಿ'** ಎಂದು ಕೂಡಾ ಹೇಳಿದ್ದಾರೆ.

ಸಂಸ್ಕೃತ ವಿದ್ಯೆಯನ್ನು ಚೆನ್ನಾಗಿ ಕಲಿತು, ಭಗವದ್ಗೀತೆಯನ್ನು ಅನೇಕ ಭಾಷೆಗಳಲ್ಲಿ ಹೇಳಿದವರಿಗೆ ಅಷ್ಟು ಮಾತ್ರ ಅರ್ಥವಾಗಿಲ್ಲವಾ ಎನ್ನುವುದೇ ಇಲ್ಲಿ ಮುಖ್ಯವಾದ ಪ್ರಶ್ನೆಯಾಗಿದೆ. ಸಂಸ್ಕೃತ ಭಾಷೆ ಚೆನ್ನಾಗಿ ಬಂದವರಿಗೆ ಶ್ಲೋಕದಲ್ಲಿನ ವಿಷಯ ಚೆನ್ನಾಗಿ ಅರ್ಥವಾಗಿರುತ್ತದೆ. ಆದರೂ ಶ್ಲೋಕದಲ್ಲಿ ಇಲ್ಲದ ವಿಷಯವನ್ನು ಹೇಳಿದ್ದಾರೆ ಎಂದರೇ ಅದೇ ಕೆಲಸವಾಗಿ ಹಾಗೇ ಹೇಳಿ ಪ್ರಜೆಗಳನ್ನು ತಪ್ಪುದಾರಿ ಹಿಡಿಸಬೇಕೆಂಬ ಉದ್ದೇಶದಿಂದಲೇ ಹೇಳಿರುತ್ತಾರೆ. ಹಾಗೆ ಹೇಳುವುದಕ್ಕೆ ಕಾರಣ ಅವರಿಗೆ ಒಳಗಿನ ಆಧ್ಯಾತ್ಮಿಕ ತಿಳಿಯದೆ ಹೋಗಿರುವುದರಿಂದ, ಹೊರಗೆ ಮಾಡುವ ಆರಾಧನೆಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ, ಅದೇ ಕೆಲಸವಾಗಿ ಅಸತ್ಯವನ್ನು

ಹೇಳಿ ಭಾವವನ್ನು ಪಕ್ಕದಾರಿ ಹಿಡಿಸಿದ್ದಾರೆ. ಯಾವುದು ಏನಾದರೂ ತಾವು ಅಭ್ಯಾಸ ಮಾಡಿಕೊಂಡ ವೇದಗಳನ್ನು, ಯಜ್ಞಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಈ ಶ್ಲೋಕ ಭಾವವನ್ನು ತಪ್ಪಾಗಿ ಹೇಳಿದ್ದಾರೆಂದು ತಿಳಿಯುತ್ತಿದೆ. ಕೆಲವರು 'ಹಿಂದೆ ಹೇಳಿರುವವರನ್ನು ಅನುಸರಿಸಿ ನಾವು ಕೂಡಾ ಹೇಳುತ್ತಿದ್ದೇವೆ. ನಿಜವಾಗಲು ಆ ಶ್ಲೋಕಕ್ಕಿರುವ ಭಾವ ನಮಗೆ ತಿಳಿದಿಲ್ಲ' ಎಂದು ಹೇಳುತ್ತಿದ್ದಾರೆ. ನೂರು ವರ್ಷಗಳವರೆಗು ಬ್ರಾಹ್ಮಣರು ಹೊರತುಪಡಿಸಿ ವಿದ್ಯೆ ಕಲಿತವರೇ ಇಲ್ಲ. ಅದರಲ್ಲಿಯು ಸಂಸ್ಕೃತ ವಿದ್ಯೆ ಬ್ರಾಹ್ಮಣರಿಗೆ ಮಾತ್ರವೇ ತಿಳಿಯುವುದರಿಂದ, ಅವರು ಏನು ಹೇಳಿದರೆ ಅದನ್ನು ಕೇಳಬೇಕೆಂಬ ಭಾವನೆ ಎಲ್ಲರಲ್ಲಿ ಇರುತ್ತಿತ್ತು. ಅದರಿಂದ ಅವರು ಹೇಳಿರುವುದೇ ಕೇಳಿ ಅದೇ ಸತ್ಯವೆಂದುಕೊಳ್ಳುವುದು ನಡೆದಿದೆ. ಈ ವಿಷಯದಲ್ಲಿ ಪೂರ್ತಿ ಮೋಸ ನಡೆದಿದೆಯೆಂದು, ವಿದ್ಯಾವಂತರಾದ ಬ್ರಾಹ್ಮಣರು, ಸ್ವಾಮೀಜಿಗಳು, ಪೀಠಾಧಿಪತಿಗಳು ಅದೇ ಕೆಲಸವಾಗಿ ತಪ್ಪುದಾರಿ ಹಿಡಿಸಿ, ಪ್ರಜೆಗಳಿಗೆ ದ್ರೋಹ ಮಾಡಿ ಅಸಲಾದ ದೇವರ ಜ್ಞಾನವನ್ನು ತಿಳಿಯದಂತೆ ಮಾಡಿದ್ದಾರೆಂದು ನಾವು ಹೇಳುತ್ತಿದ್ದೇವೆ. ಈಗೀಗಲೇ ನಮ್ಮ ಮಾತು ಸತ್ಯವೆಂದು ಕೆಲವರು ತಿಳಿದುಕೊಂಡಿದ್ದಾರೆ.

**19) ಪ್ರಶ್ನೆ :– ನೀವು ಹೇಳಿರುವುದು ನಾವು ಕೇಳಿ, ಕೆಲವು ಬ್ರಾಹ್ಮಣ ಸ್ವಾಮೀಜಿಗಳ ಹತ್ತಿರಕ್ಕೆ ಹೋಗಿ, ನೀವು ಭಗವದ್ಗೀತೆಯಲ್ಲಿನ ಶ್ಲೋಕಗಳ ಭಾವನೆಗಳು ತಪ್ಪು ಬರೆದು ಪ್ರಜೆಗಳನ್ನು ತಪ್ಪುದಾರಿ ಹಿಡಿಸಿದ್ದೀರ ಅಲ್ಲವೆ! ಎಂದು ಆತ್ಮ ಸಂಯಮಯೋಗದಲ್ಲಿನ ಮೊದಲ ಶ್ಲೋಕವನ್ನು ಉದಾ ಹರಣೆಯಾಗಿ ತೋರಿಸಿ ಕೇಳಿದ್ದೇವೆ. ಅದಕ್ಕೆ ಬದುಲು ಅವರು ಉತ್ತರ ಹೇಳುತ್ತಾ "ನಮ್ಮನ್ನು ತಪ್ಪು ಎನ್ನುವುದಕ್ಕೆ ನಿಮ್ಮ ಹತ್ತಿರ ಏನು ಆಧಾರವಿದೆ? ಆ ಶ್ಲೋಕದಲ್ಲಿರುವುದು ಅಗ್ನಿ ಎಂದು ಮಾತ್ರವೇ ಇದೆ ಆದರೆ, ಹೊರಗಿನ ಅಗ್ನಿ ಎಂದಾಗಲಿ, ಒಳಗಿನ ಅಗ್ನಿ ಎಂದಾಗಲಿ ಇಲ್ಲ ಅಲ್ಲವೇ! ಅಲ್ಲಿ ಜ್ಞಾನಾಗ್ನಿ ಎನ್ನುವ ಮಾತೇ ಇಲ್ಲದ್ದು ನೀವು ಏತಕ್ಕೆ**

**ಜ್ಞಾನಾಗ್ನಿ ಎಂದು ಅಂದುಕೊಳ್ಳುತ್ತಿದ್ದೀರ. ನೀವು ಅಂದುಕೊಳ್ಳುವ ಭಾವನೆ ತಪ್ಪಾಗಿರಬಹುದು ಅಲ್ಲವೆ!" ಎಂದು ಅಂದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :-** ಇದು ದೇವರು ಮನುಷ್ಯರೆಲ್ಲರಿಗೂ ಹೇಳಿದ ಜ್ಞಾನ. ಕೇವಲ ಬ್ರಾಹ್ಮಣರಿಗೆ ಮಾತ್ರವೇ ಹೇಳಿದ ಜ್ಞಾನ ಅಲ್ಲ. ನಾವು ಅವರನ್ನು ತಪ್ಪು ಹಿಡಿಯಬೇಕೆಂದಾಗಲಿ, ತಪ್ಪಿತಸ್ತರೆಂದು ತೋರಿಸಬೇಕೆಂದಾಗಲಿ ಹೇಳಲಿಲ್ಲ. ಅಲ್ಲಿ ಹೇಳಿದ ಅಗ್ನಿಯನ್ನು ಜ್ಞಾನಾಗ್ನಿ ಎಂದು ಏಕೆ ಅಂದುಕೊಳ್ಳಬೇಕೆಂದು? ಹೊರಗಿನ ಅಗ್ನಿ ಎಂದು ಏಕೆ ಅಂದುಕೊಳ್ಳಬಾರದೆಂದು ಅವರು ಪ್ರಶ್ನಿಸುತ್ತಿದ್ದಾರೆ ಎಂದು ನೀವು ಕೇಳಿದ್ದೀರ. ಇಲ್ಲಿ ಕೂಡಾ ಅವರ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ್ದಾರೆಂದು ಹೇಳಬಹುದು. ನಾನು ಆಧಾರವಿಲ್ಲದೆ ಅವರನ್ನು ತಪ್ಪು ಹಿಡಿಯಲಿಲ್ಲ. ಭಗವದ್ಗೀತೆಯಲ್ಲಿ ಜ್ಞಾನಯೋಗದಲ್ಲಿ 37ನೇ ಶ್ಲೋಕದಲ್ಲಿ ಪ್ರಪಂಚ ಸಂಬಂಧ ಅಗ್ನಿಯನ್ನು ಮತ್ತು ದೈವ ಸಂಬಂಧ ಅಗ್ನಿಯನ್ನು ಕುರಿತು ಹೇಳಿದ್ದಾರೆ. ಅದನ್ನು ನಾಲ್ಕನೆ ಅಧ್ಯಾಯದಲ್ಲಿ ಓದಿದವನು ಆರನೆ ಅಧ್ಯಾಯದಲ್ಲಿ ಯೋಗಿಗೆ ಸಂಬಂಧಿಸಿರುವುದು ಬಾಹ್ಯ ಪ್ರಪಂಚ ಸಂಬಂಧ ಅಗ್ನಿ ಎಂದು ಅಂದುಕೊಳ್ಳುವುದಿಲ್ಲ. ಇಂತಹ ಅಗ್ನಿ ಇಲ್ಲವೆಂದು ಹೇಳುತ್ತಿದ್ದಾರೆಂದರೇ ಅದು ಅತಿ ಜಾಣತನವನ್ನು ಪ್ರದರ್ಶಿಸಿದಂತೇಯೆಂದು ಹೇಳಬಹುದು.

**ಜ್ಞಾನಯೋಗ, 37ನೇ ಶ್ಲೋಕ :-**

**ಶ್ಲೋ॥ 37. ಯಥೈಧಾಂಸಿ ಸಮಿದ್ಧೋಗ್ನಿ ರ್ಭಸ್ಮಸಾತ್ಕುರುತೇರ್ಜುನ।**
**ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥**

**ಭಾವಾರ್ಥ :-** ಯಾವ ವಿಧವಾಗಿ ಅಗ್ನಿಯಲ್ಲಿ ಕಟ್ಟಿಗೆಗಳು ಸುಟ್ಟುಹೋಗಿ ಬೂದಿ ಆಗುತ್ತಿವೆಯೋ, ಅದೇ ವಿಧವಾಗಿ ಜ್ಞಾನವೆಂಬ ಅಗ್ನಿಯಲ್ಲಿ ಕರ್ಮಗಳು

ಎಂಬ ಕಟ್ಟಿಗೆಗಳು ಸುಟ್ಟು ಬೂದಿ ಆಗಿಹೋಗುತ್ತಿವೆ. (ಇಲ್ಲಿ ಬಾಹ್ಯಗ್ನಿಯನ್ನು ಅಂತರದಲ್ಲಿರುವ ಜ್ಞಾನಾಗ್ನಿಯನ್ನು ಎರಡು ಅಗ್ನಿಗಳನ್ನು ಕುರಿತು ಹೇಳಿದ್ದಾರೆ.)

ಆತ್ಮ ಸಂಯಮ ಯೋಗದಲ್ಲಿ ಮೊದಲ ಶ್ಲೋಕಕ್ಕೆ ಹೇಳಿದ ಭಾವನೆ ತಪ್ಪು ಎನ್ನುವುದಕ್ಕೆ ಮೂರನೆ ಅಧ್ಯಾಯವಾದ ಕರ್ಮಯೋಗದಲ್ಲಿ ಒಂಭತ್ತನೇ ಶ್ಲೋಕದಲ್ಲಿ ಹೇಳಿದ ಭಾವನೆಯನ್ನು ನೋಡಿದರೆ ನಿಜವಾದ ಯಜ್ಞ ಯಾವುದೋ ಯಾವುದರಿಂದ ಕರ್ಮ ಇಲ್ಲದಂತೆ ಹೋಗುತ್ತದೋ ತಿಳಿಯಬಲ್ಲದು.

**ಕರ್ಮಯೋಗ, ಒಂಭತ್ತನೆ ಶ್ಲೋಕ :–**

**ಶ್ಲೋ॥ 9. ಯಜ್ಞಾರ್ಥಾತ್ಕರ್ಮಣೋನ್ಯ ತ್ರಲೋಕೋ ಯಂ ಕರ್ಮಬಂಧನಃ**

**ತದರ್ಥಂ ಕರ್ಮ ಕೌಂತೇಯ! ಮುಕ್ತ ಸಂಗಸ್ಸಮಾಚರ ॥**

**ಭಾವಾರ್ಥ :–** "ಯಜ್ಞವೊಂದರ ಅರ್ಥದಿಂದ ಕೂಡಿದ ಕಾರ್ಯಗಳಿಗಿಂತ ಬೇರೆ ಕಾರ್ಯಗಳನ್ನು ಮಾಡಿದರೆ ಕರ್ಮಬಂಧನಗಳಾದ ಪಾಪಪುಣ್ಯಗಳು ಬರುತ್ತವೆ. ಆದ್ದರಿಂದ ಕರ್ಮ ಫಲಗಳ ಮೇಲೆ ಆಸೆ ಇಲ್ಲದಂತೆ ಕಾರ್ಯಗಳನ್ನು ಮಾಡು" (ಎಂದು ಹೇಳಿದ್ದಾರೆ ಅಲ್ಲವೆ! ಇದೇ ವಿಷಯವನ್ನೇ ಆತ್ಮ ಸಂಯಮ ಯೋಗದಲ್ಲಿ **"ಅನಾಶ್ರಿತಃ ಕರ್ಮಫಲಮ್ ಕಾರ್ಯಮ್"** ಎಂದು ಹೇಳಿದ್ದಾರೆ. ಈ ಶ್ಲೋಕದಲ್ಲಿ ಅದೇ ಮಾತನ್ನೇ **"ಮುಕ್ತ ಸಂಗ ಸಮಾಚರ"** ಎಂದು ಹೇಳಿದ್ದಾರೆ.)

ಅವರು ಅಸತ್ಯವನ್ನು ಹೇಳಿ ಕೂಡಾ ನಮ್ಮದು ಏನು ತಪ್ಪು ಎಂದು ಅನ್ನುತ್ತಿದ್ದಾರೆಂದರೇ ಅವರ ತಪ್ಪನ್ನು ಮುಚ್ಚಿಹಾಕಿಕೊಳ್ಳುವುದಕ್ಕೆ ಹೊರತು ಇತರೆ ಇಲ್ಲವೆಂದು ತಿಳಿಯುತ್ತಿದೆ. ಮನುಷ್ಯ ಮಾಡುವ ಯಜ್ಞಗಳು ಎರಡು ವಿಧಗಳು ಇವೆಯೆಂದು ಅದರಲ್ಲಿ ಒಂದು **ದ್ರವ್ಯಯಜ್ಞವೆಂದೂ,** ಎರಡನೆಯದು **ಜ್ಞಾನಯಜ್ಞವೆಂದೂ** ಬೇರ್ಪಡಿಸಿ ಆ ಎರಡರಲ್ಲಿ ಯಾವುದು ದೊಡ್ಡದೋ, ಯಾವ ಅಗ್ನಿಯಿಂದ ಯಾವುದು ಮಾಡಲಾಗುತ್ತಿದೆಯೋ ಸಹ ನಾಲ್ಕನೆ ಅಧ್ಯಾಯವಾದ ಜ್ಞಾನಯೋಗದಲ್ಲಿ 33ನೇ ಶ್ಲೋಕದಲ್ಲಿ ಹೇಳಿದ್ದಾರೆ.

**ಜ್ಞಾನಯೋಗ, 33ನೇ ಶ್ಲೋಕ :–**

**ಶ್ಲೋ॥ 33. ಶ್ರೇಯಾನ್ ದ್ರವ್ಯಮಯಾ ದ್ಯಜ್ಞಾತ್ ಜ್ಞಾನ ಯಜ್ಞಃ ಪರಂತಪ! ।**
**ಸರ್ವಂ ಕರ್ಮಾಖಿಲಂ ಪಾರ್ಥ! ಜ್ಞಾನೇ ಪರಿಸಮಾಪ್ಯತೇ ॥**

**ಭಾವಾರ್ಥ :–** ದ್ರವ್ಯಯಜ್ಞಕ್ಕಿಂತ ಉತ್ತಮವಾದುದು ಜ್ಞಾನಯಜ್ಞ. ಜ್ಞಾನ ಯಜ್ಞದಲ್ಲಿ ಸರ್ವಕರ್ಮಗಳು ಸುಟ್ಟುಹೋಗುತ್ತವೆ.

ಯಜ್ಞ ಎಂದರೆ ಅಗ್ನಿಯಿಂದ ಸುಡಲ್ಪಡುವುದೆಂದು ಅರ್ಥ. ಪ್ರಪಂಚದಲ್ಲಿ ಬಾಹ್ಯ ವಸ್ತುಗಳು ಯಾವುವು ದಹಿಸಲ್ಪಟ್ಟರೂ ಅದನ್ನು ಯಜ್ಞವೆಂದೇ ಹೇಳಬಹುದು. ಬಾಹ್ಯ ವಸ್ತುಗಳನ್ನು ದ್ರವ್ಯಗಳು ಎಂದು ಹೇಳುತ್ತಿದ್ದೇವೆ. ಬಾಹ್ಯ ವಸ್ತುವನ್ನು ಸುಟ್ಟುಹಾಕುವ ಯಜ್ಞಗಳನ್ನು ದ್ರವ್ಯಯಜ್ಞಗಳೆಂದು ಹೇಳುತ್ತಿದ್ದೇವೆ. ಯಜ್ಞಗಳು ಎರಡು ವಿಧಗಳಿವೆಯೆಂದು, ಅದರಲ್ಲಿ ಒಂದು ದ್ರವ್ಯಯಜ್ಞ ಆದಾಗ, ಎರಡನೆಯದು ಜ್ಞಾನಯಜ್ಞ ಎಂದು ಹೇಳಲ್ಪಟ್ಟಿದೆ. ದ್ರವ್ಯಯಜ್ಞಕ್ಕಿಂತ ಜ್ಞಾನಯಜ್ಞ ಶ್ರೇಷ್ಠವಾದುದೆಂದೂ, ಅದರಲ್ಲಿ ಮನುಷ್ಯನಿಗೆ ಬರುವ ಪಾಪಪುಣ್ಯ ಕರ್ಮಗಳೆಲ್ಲವೂ ಸುಟ್ಟುಹೋಗುತ್ತವೆಂದು ಹೇಳಿದ್ದಾರೆ. ಹೀಗೆ ಹಿಂದಿನ ಅಧ್ಯಾಯಗಳಲ್ಲಿ ಹೇಳಿದ ಶ್ಲೋಕಗಳನ್ನು ಅನುಸಂಧಾನ ಮಾಡಿ ನೋಡಿದರೆ, ಆತ್ಮಸಂಯಮ ಯೋಗದಲ್ಲಿ ಬಾಹ್ಯ ಅಗ್ನಿಯನ್ನು, ಬಾಹ್ಯಯಜ್ಞಗಳನ್ನು ಕುರಿತು ಹೇಳುವುದು, ಅದೇ ಕೆಲಸವಾಗಿ ಪ್ರಜೆಗಳನ್ನು ತಪ್ಪುದಾರಿ ಹಿಡಿಸಿ ಮೋಸ ಮಾಡಿದಂತೇಯಾಗುತ್ತದೆ.

**20) ಪ್ರಶ್ನೆ :– ನೀವು ವೇದಗಳು ಮನುಷ್ಯನಿಗೆ ಕೆಲಸಕ್ಕೆ ಬರುವುದಿಲ್ಲ ಎಂದು ಹೇಳುತ್ತಾ ಕೊನೆಗೆ ಬಾಹ್ಯಯಜ್ಞಗಳು (ದ್ರವ್ಯಯಜ್ಞಗಳು) ಮನುಷ್ಯನಿಗೆ ಕೆಲಸಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದೀರ. ನೀವು ಹೇಳಬೇಕಾಗಿರುವದು ವೇದಗಳನ್ನು ಕುರಿತೇ ಅಲ್ಲವೆ!**

**ಉತ್ತರ :–** ಆನೆಗೆ ಮೊದಲು ಸೊಂಡಿಲು ಇದ್ದರೇ ಕೊನೆಯಲ್ಲಿ ಬಾಲ ಇರುತ್ತದೆ.

ಆನೆಗೆ ಬಾಲ, ಸೊಂಡಿಲು ಎರಡೂ ಇರುವುದು ಸಹಜ. ಹಿಂದೆ ಬಾಲ ಇದೆ ಅಲ್ಲವೆ! ಮುಂದೆ ಸೊಂಡಿಲು ಏಕೆ ಎಂದಾಗಲೀ, ಮುಂದೆ ಸೊಂಡಿಲು ಇದೆ ಅಲ್ಲವೆ! ಹಿಂದೆ ಬಾಲ ಏಕೆ ಎಂದಾಗಲೀ ಅನ್ನುವುದಕ್ಕೆ ಅವಕಾಶವಿಲ್ಲ. ಆನೆಗೆ ಸೊಂಡಿಲು, ಬಾಲ ಎರಡೂ ಅವಶ್ಯ. ಆನೆಗೆ ಬಾಲ, ಸೊಂಡಿಲು ಎರಡು ಕಾಣಿಸುವವಾಗಿ ನೋಡುವುದಕ್ಕೆ ಒಂದು ಉದ್ದವಾಗಿ, ಮತ್ತೊಂತು ಗಿಡ್ಡವಾಗಿ ಇರುತ್ತದೆ. ಮುಂದೆ ಸೊಂಡಿಲು ಇದ್ದರೇ ಅದರಿಂದ ಆನೆ ಬದುಕಿದ್ದು ಹಿಂದೆ ಬಾಲ ಕ್ಷೇಮವಾಗಿ ಇರುತ್ತದೆ. ಹಾಗೆಯೇ ಆನೆಗೆ ಬಾಹ್ಯವಾಗಿ ಬಾಲ, ಸೊಂಡಿಲು ಅವಿನಾಭಾವ ಸಂಬಂಧವಾಗಿರುವಂತೆ, ಬಾಹ್ಯ ಆಚರಣೆಯಿಂದ (ಆರಾಧನೆಗಳಲ್ಲಿ) ಯಜ್ಞ, ವೇದ ಎರಡು ಅವಿನಾಭಾವ ಸಂಬಂಧ ಹೊಂದಿವೆ. ಬಾಹ್ಯ ಆರಾಧನೆಗಳಲ್ಲಿ ಮೊದಲು ಯಜ್ಞವಿದ್ದಾಗ, ಅದಕ್ಕೆ ಅನುಸಂಧಾನವಾಗಿ ವೇದಗಳು ಇರುತ್ತವೆ. ಬಾಲವಿಲ್ಲದ ಆನೆ ಇಲ್ಲದಂತೆ, ವೇದಗಳು ಇಲ್ಲದ ಯಜ್ಞಗಳು ಇರುವುದಿಲ್ಲ. ಹಾಗೆಂದು ಆನೆ ಒಂದಕ್ಕೇ ಬಾಲ ಇದೆಯೆಂದು ಹೇಳುವುದು ಇಲ್ಲ. ಉದ್ದ ಮೂತಿ ಇರುವ ಕುದುರೆಗೆ ಬಾಲ ಇರುತ್ತದೆ. ಹಾಗೇ ಚಿಕ್ಕ ಮೂತಿ ಇರುವ ನಾಯಿಗೆ ಬಾಲ ಇರುತ್ತದೆ. ಆದ್ದರಿಂದ ಒಂದು ಯಜ್ಞಗಳಲ್ಲೇ ಅಲ್ಲದೆ ಅನೇಕ ಆರಾಧನಾ ಕಾರ್ಯಗಳಲ್ಲಿ ಮತ್ತು ಅನೇಕ ಶುಭಕಾರ್ಯಗಳಲ್ಲಿ ವೇದಮಂತ್ರಗಳಿರುವುದು ನೋಡುತ್ತಿದ್ದೇವೆ.

ಮೊದಲು ಯಜ್ಞಗಳನ್ನು ಹೇಳಿ ಅದಕ್ಕೆ ಅನುಸಂಧಾನವಾಗಿರುವ ವೇದಗಳನ್ನು ಹೇಳುತ್ತಿದ್ದೇನೆ. ವೇದಗಳನ್ನು ದ್ವಾಪರಯುಗದಲ್ಲಿ ವ್ಯಾಸನು ಗ್ರಂಥರೂಪವಾಗಿ ಮಾಡಿ, ಯಜ್ಞಗಳ ಬೆಳವಣಿಗೆಗಾಗಿ, ತಾನು ಬರೆದ ಯಜ್ಞಗಳು ಸ್ಥಿರಸ್ಥಾಯಿಯಾಗಿ ಇರುವುದಕ್ಕೆ, ಯಜ್ಞಗಳನ್ನು ಅನೇಕ ಬಾಹ್ಯ ಕಾರ್ಯಗಳಲ್ಲಿ ಜೋಡಿಸಿ, ವೇದಗಳು ಇಲ್ಲದೇ ಆ ಕಾರ್ಯಗಳಿಗೆ ಬೆಲೆ ಇಲ್ಲ ಎಂದು ಹೇಳುವುದು ನಡೆದಿದೆ. ಕೃತಯುಗದಿಂದ ಬಾಹ್ಯ ಆರಾಧನೆಗಳಾದ ಯಜ್ಞಯಾಗಾದಿಗಳು, ವ್ರತ ಕ್ರತುಗಳು, ವಿವಾಹಾದಿ ಶುಭಕಾರ್ಯಗಳು ಇದ್ದವು. ಆ ಕಾಲದಲ್ಲಿ ಯಾರಿಗೆ ತೋಚಿದ ಮಂತ್ರಗಳನ್ನು ಅವರು ಹೇಳಿ ಬಾಹ್ಯ ಕಾರ್ಯಗಳನ್ನು ಮಾಡುತ್ತಿದ್ದರು.

ಇಂತಹ ಕಾರ್ಯಕ್ಕೆ ಇಂತಹ ಮಂತ್ರವೇ ಎಂದು ನಿಯಮ ಇಲ್ಲದಂತೆ ಯಾರು ಇಷ್ಟ ಬಂದಹಾಗೆ ಅವರು ಮಾಡುತ್ತಿದ್ದರು. ದ್ವಾಪರ ಯುಗದಲ್ಲಿ ವೇದಗಳು ಗ್ರಂಥರೂಪವಾದ ನಂತರ ಇಂತಹ ಕಾರ್ಯಕ್ಕೆ ಇಂತಹ ಮಂತ್ರ ಓದಬೇಕೆಂದು ವೇದಗಳಲ್ಲಿನ ಮಂತ್ರಗಳನ್ನು ಹೇಳುವುದು ನಡೆದಿದೆ. ಆದ್ದರಿಂದ ಮದುವೆಗೆ ಹೇಳಿದ ಮಂತ್ರ ದೇವತಾ ಪೂಜೆಯಲ್ಲಿ ಹೇಳುವುದಿಲ್ಲ. ದೇವತಾ ಪೂಜೆಗಳಲ್ಲಿ ಹೇಳಿದ ಮಂತ್ರ ಯಜ್ಞಗಳಿಗೆ ಹೇಳುವುದಿಲ್ಲ. ಹೀಗೆ ಯಾವುದಕ್ಕೆ ಯಾವ ಮಂತ್ರ ಹೇಳಬೇಕೋ ದ್ವಾಪರ ಯುಗದಲ್ಲಿ ವ್ಯಾಸನೇ ನಿರ್ಣಯ ಮಾಡಿ ಹೇಳುವುದಾಗಿದೆ.

ವೇದಗಳಲ್ಲಿ ಮಂತ್ರಗಳನ್ನು ಬರೆದವನು ವ್ಯಾಸನೇ, ಹಾಗೆಯೇ ವೇದಗಳ ಕೊನೆಯಲ್ಲಿ ಉಪನಿಷತ್ತುಗಳನ್ನು ಬರೆದವನು ವ್ಯಾಸನೇ. ವ್ಯಾಸನು ಬ್ರಾಹ್ಮಣರೆಲ್ಲರಿಗೂ ಪೂಜ್ಯನಾಗಿ ಇದ್ದಾನೆ. ಆದ್ದರಿಂದ ವ್ಯಾಸನು ಮೊದಲು ಹೇಳಿದ ವೇದಗಳನ್ನು, ವೇದಮಂತ್ರಗಳನ್ನು ಬಿಡದೆ ಇದ್ದಾರೆ. ಬ್ರಹ್ಮಜ್ಞಾನವಾದ ಭಗವದ್ಗೀತೆಯನ್ನು ತಿಳಿದ ವ್ಯಾಸನು ತಾನು ಮೊದಲು ಮಾಡಿರುವ ಕೆಲಸಕ್ಕೆ ಚಿಂತಿಸಿ, ತಾನು ಬರೆದ ಭಗವದ್ಗೀತಾ ಗ್ರಂಥದಲ್ಲಿ ವೇದಗಳನ್ನು ಖಂಡಿಸುತ್ತಾ **ವೇದಗಳೇ ಬಾಹ್ಯವಾಗಿ ಇರುವ ಮಾಯೆ** ಎಂದು, ಗುಣ ವಿಷಯಗಳೊಂದಿಗೆ ಕೂಡಿಕೊಂಡಿರುವವೆಂದೂ ಅವುಗಳ ತಂಟೆಗೆ ಹೋಗಬೇಡವೆಂದು ಬರೆದಿದ್ದಾನೆ. ವ್ಯಾಸನು ಆ ವಿಧವಾಗಿ ಭಗವದ್ಗೀತೆಯಲ್ಲಿ ಬರೆಯುವುದು ಇಷ್ಟವಿಲ್ಲದ ಬ್ರಾಹ್ಮಣರು ಕಕ್ಕಲಾರದೆ ನುಂಗಲಾರದೆ ವ್ಯಾಸನು ಹೋಗುವವರೆಗು ಹಾಗೇ ಅಣಗಿದ್ದು ವ್ಯಾಸನು ಹೋದ ನಂತರ ಭಗವದ್ಗೀತೆಯಲ್ಲಿ ಯಜ್ಞ ಸಂಬಂಧ ಶ್ಲೋಕಗಳನ್ನು ಅಲ್ಲಲ್ಲಿ ಸೇರಿಸಿ ಭಗವದ್ಗೀತೆಯನ್ನು ಕೂಡಾ ಸ್ವಲ್ಪ ಕಲುಷಿತ ಮಾಡಿದ್ದಾರೆ. ಅದನ್ನು ಇತರರು ಯಾರೂ ಗ್ರಹಿಸದೆ ಹೋದರೂ ನಾವು ಗ್ರಹಿಸಿ, ನಾವು ಬರೆದ **"ತ್ರೈತ ಸಿದ್ಧಾಂತ ಭಗವದ್ಗೀತೆ"**ಯಲ್ಲಿ ಆ ಶ್ಲೋಕಗಳನ್ನು ಹೊರಗೆ ಇಡುವುದು ನಡೆದಿದೆ. ಒಟ್ಟಾರೆ ವೇದಗಳನ್ನು ಮನುಷ್ಯರಿಗೆ ಅಂಟಿಸುವುದಕ್ಕೆ ಬ್ರಾಹ್ಮಣರು ಭಾರತದೇಶದಲ್ಲಿ ವಿಶ್ವ ಪ್ರಯತ್ನ ಮಾಡಿದ್ದಾರೆ. ಅವರು

ಅಂದುಕೊಂಡಿರುವುದು ಸಾಧಿಸಿ ಭಾರತದೇಶದಲ್ಲಿ ವೇದಗಳು ಸ್ಥಿರಸ್ಥಾಯಿಯಾಗಿ ಇರುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಭಾರತದೇಶವನ್ನು ವೇದ ಭೂಮಿ ಎಂದು ಹೇಳಿ ಪ್ರಚಾರ ಮಾಡಿದ್ದಾರೆ. ಪೂರ್ವದಲ್ಲಿಂದ ಭಾರತದೇಶ ಜ್ಞಾನಭೂಮಿಯಾಗಿ ಇರುವಾಗ, ಈ ದಿನ ವೇದಭೂಮಿಯಾಗಿ ಅಜ್ಞಾನದಲ್ಲಿ ಮುಳುಗಿ ಹೋಗಿದೆ. ಕೊನೆಗೆ **ಇಂದೂ** ದೇಶವನ್ನು **ಹಿಂದೂ** ದೇಶವಾಗಿ ಬದಲಾಯಿಸಿದ ಘನತೆ ಕೂಡಾ ಬ್ರಾಹ್ಮಣರದ್ದೇಯೆಂದು ಹೇಳಬಹುದು. ಹಿಂದೆ ಮುಂದೆ ನೋಡದಂತೆ, ಒಳ್ಳೆಯದು ಕೆಟ್ಟದು ಯೋಚಿಸದಂತೆ, ಉಳಿದ ಕುಲದವರೆಲ್ಲರೂ ಬ್ರಾಹ್ಮಣರ ಬಲೆಯಲ್ಲಿ ಸಿಲುಕಿಕೊಂಡು ತಮ್ಮಲ್ಲಿ ತಾವು ಹೊಡೆದಾಡಿಕೊಳ್ಳುತ್ತಾ, ಒಳ್ಳೆಯದನ್ನು ಹೇಳಿದವರನ್ನೇ ಕೆಟ್ಟವರೆನ್ನುತ್ತಿದ್ದಾರೆ. ನನ್ನ ಅನುಭವದಲ್ಲಿ ತೆಲಂಗಾಣಾ, ಆಂಧ್ರಾ ರಾಜ್ಯಗಳಲ್ಲಿ ಬ್ರಾಹ್ಮಣರು ಹೇಳಿದ ಮಾತುಗಳನ್ನು ಕೇಳಿ ಹಿಂದೂಗಳೊಂದಿಗೆ ಹಿಂದೂಗಳೇ ಹೊಡೆದಾಡುತ್ತಿದ್ದಾರೆ. ಜ್ಞಾನ ಹೇಳುವ ಇತರ ಕುಲಗಳ ಗುರುಗಳನ್ನು ನಿಮಗೆ ಜ್ಞಾನವೇ ತಿಳಿದಿಲ್ಲ, ನೀವು ಹಿಂದೂ ಜ್ಞಾನಿಗಳೇ ಅಲ್ಲ ಎಂದು ಅನ್ನುತ್ತಿದ್ದಾರೆ.

ಭೂಮಂಡಲದಲ್ಲಿ 194 ದೇಶಗಳಿವೆ. ಎಲ್ಲ ದೇಶಗಳಲ್ಲಿ ಮನುಷ್ಯರೇ ಇದ್ದಾರೆ. ಆದರೇ 195ನೇ ದೇಶವಾದ ಭಾರತದೇಶದಲ್ಲಿ ಮಾತ್ರ ವೇದಗಳು ಎನ್ನುವ ಮಾತು ಕೇಳಿಸುತ್ತಿದೆ. ಇತರ ದೇಶಗಳಾದ 194 ದೇಶಗಳಲ್ಲಿ ವೇದಗಳು ಇಲ್ಲ, ವೇದಮಂತ್ರಗಳು ಇಲ್ಲ. ಅಲ್ಲಿಯೂ ಕೂಡಾ ದೇವರು, ದೇವರ ಜ್ಞಾನ ಹೇಳಲ್ಪಡುತ್ತಿದೆ. ಭಾರತದೇಶದಲ್ಲಿ ಮನುಷ್ಯರಿಗೆ ಮುಕ್ತಿ ಅವಶ್ಯವಾದಂತೇ ಎಲ್ಲ ದೇಶಗಳ ಪ್ರಜೆಗಳಿಗು ದೇವರು ತನ್ನ ದೈವ ಗ್ರಂಥಗಳಲಿ ಮೋಕ್ಷವನ್ನು ಸೇರುವ ಮಾರ್ಗವನ್ನು ಹೇಳಿದ್ದಾನೆ. ಪ್ರಪಂಚದಲ್ಲಿ 14 ನೂರು ಭಾಷೆಗಳಲ್ಲಿ ಬರೆಯಲಾಗಿರುವ ದ್ವಿತೀಯ ದೈವಗ್ರಂಥದಲ್ಲಾಗಲೀ, ಒಂದೇ ಅರಬ್ಬೀ ಭಾಷೆಯಲ್ಲಿ ಹೆಚ್ಚಾಗಿ ಹೇಳಲಾಗಿದ್ದು, ಉಳಿದ ಪ್ರಾಂತೀಯ ಭಾಷೆಗಳಲ್ಲಿ ಕಡಿಮೆಯಾಗಿ ಬರೆಯಲ್ಪಟ್ಟಿರುವ ಅಂತಿಮ ದೈವಗ್ರಂಥದಲ್ಲಾಗಲೀ ವೇದಗಳ ಪ್ರಸ್ತಾಪ ಇಲ್ಲ. ಆದರೂ ಮನುಷ್ಯ ಎಂದಮೇಲೆ ಮಾಯೆ ಎನ್ನುವುದು ತಪ್ಪುವುದಿಲ್ಲ ಎನ್ನುವಂತೆ,

ಅನ್ಯದೇಶದವರಿಗೆ ಮಾಯೆ ರೂಪವಾದ ವೇದಗಳು ಬಾಹ್ಯವಾಗಿ ಇಲ್ಲದಿದ್ದರೂ, ಮಾಯೆ ಅವರಿಗೆ ಮತ ಎನ್ನುವ ರೂಪದಲ್ಲಿ ಹೊರಗೆ ಇದೆ. ಒಳಗೆ ಎಲ್ಲರೂ ಮಾಯೆಯಲ್ಲಿ ಇರುವುದರಿಂದ ದೇವರು ಅವರಿಗೆ ದೈವಗ್ರಂಥರೂಪದಲ್ಲಿ ಜ್ಞಾನವನ್ನು ಕೊಟ್ಟಿದ್ದಾನೆ. ಆದರೂ ಮತ ಎನ್ನುವ ಬಾಹ್ಯ ರೂಪವಾದ ಮಾಯೆಯಲ್ಲಿ ಈ ದಿನ 195 ದೇಶಗಳು ಸಿಲುಕಿಕೊಂಡಿರುವಾಗ, ಭಾರತದೇಶ ಮಾತ್ರ ವೇದಗಳು, ಯಜ್ಞಗಳು, ತಪಸ್ಸುಗಳು, ದಾನಗಳು ಎನ್ನುವವುಗಳಲ್ಲಿ ಇನ್ನೂ ಹೆಚ್ಚಾಗಿ ಇದ್ದೂ ಮಾಯೆಯಲ್ಲಿ ಹೆಚ್ಚಾಗಿ ಮುಳುಗಿ ಹೋಗಿದೆ. ಆದ್ದರಿಂದ ಮಾಯೆಯನ್ನು ಜಯಿಸುವುದಕ್ಕೆ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯನ್ನು, ಪ್ರಥಮ ದೈವಗ್ರಂಥವನ್ನು ಅನುಸರಿಸಿರುವ ಬೈಬಲ್, ಖುರ್ಆನ್‌ನನ್ನು ಓದಿ ಅಸಲಾದ ದೇವರನ್ನು ತಿಳಿಯಬೇಕೆಂದು ತಿಳಿಸುತ್ತಿದ್ದೇವೆ.

## ಸಮಾಪ್ತಿ

***

**ಅಸತ್ಯವನ್ನು ಸಾವಿರಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೊ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**